ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು

ದ್ವಿತೀಯ ಮುದ್ರಣ



ಸಂಪಾದನೆ ಹಾಗೂ ಪೂರಕ ಟಿಪ್ಪಣಿಗಳು

■ ಡಾ.ಎಂ.ಎಸ್.ದುರ್ಗಾಪ್ರವೀಣ್ ■ ಬೆನೆಟ್ ಜಿ. ಅಮ್ಮನ್ನ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು

(ದ್ವಿತೀಯ ಮುದ್ರಣ)

ಸಂಪಾದನೆ ಹಾಗೂ ಪೂರಕ ಟಿಪ್ಪಣಿಗಳು

ಡಾ.ಎಂ.ಎಸ್.ದುರ್ಗಾ ಪ್ರವೀಣ್ ಮತ್ತು ಬೆನೆಟ್ ಜಿ. ಅಮ್ಮನ್ನ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಂಗಳೂರು

BASEL MISSIONARIGALA TULU TIPPANIGALU

(Unpublished Tulu Paper Manuscripts of Basel Missionaries from 1886 Onwards along with Editorial Notes in Kannada)

Editors

Dr. M.S. Durga Praveen
Asst. Professor
Dept of Kannada Language and Translation Studies
Dravidian University, Kuppam, AP

Benet G. Amanna
Department of Archives
Karnataka Theological College, Mangaluru

Publisher
Chandrahasa Rai B.
Registrar, Karnataka Tulu Sahitya Academy

Published By
Karnataka Tulu Sahitya Academy
Urwa Store, Mangaluru – 575 006
Phone: 0824 2459389
Email: tulu.academy@yahoo.co.in

© Editors
Original Manuscript- Karnataka Theological College, Mangaluru
Photo's: Mission21

First Impression : 2015

Reprint : 2019

Size : Demy 1/8

Paper used : 70 GSM

Copies : 300

Pages : 256

Price : 200

Cover Design : **Kallur Nagesh**

Designed & printed at
Aakrithi Prints
Light House Hill Road, Mangaluru - 1
Phone : 0824 2443002

ರಡ್ಡನೇ ಮುದ್ರಣೊಗು ಗುರ್ಕಾರ್ರೆ ಮದಿಪು

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ 2015ಕ್ಕ್ ಡಾ.ಎಂ.ಎಸ್. ದುರ್ಗಾಪ್ರವೀಣ್ ಬೊಕ್ಕ ಬೆನೆಟ್ ಅಮ್ಮನ್ನೆರ್ ಸಂಪಾದನೆ ಮಲ್ತ್ ಕೊರಿ 'ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು' ಪನ್ಪಿ ಬೂಕುನು ಪ್ರಕಟಣೆ ಮಲ್ತ್‌ದಿತ್ತ್‌ದ್ ಐತ ಪ್ರತಿಕ್ಕುಲು ಮಾತ ಮುಗಿಯಿನೆಡ್ದ್ ಕುಡೊರ ಅಚ್ಚಿಗ್ ಪಾಡೊಂದುಲ್ಲ. ಉಂದು ತುಳುನಾಡ್‌ಡಿತ್ತಿ ಬಾಸೆಲ್ ಮಿಶನ್ ಸಂಸ್ಥೆಡಿತ್ತಿ ವಿದೇಶಿ ಮಿಶನರಿನಕುಲು ದಾಖಲೆ ಮಲ್ತ್ ದೀತಿ ಹಸ್ತಪ್ರತಿಲು 130 ವರ್ಷ ಪಿರವುಡು ದಾಖಲೆ ಆತಿನವು. ಅಂಚಾದ್ ಇತ್ತೆ ತುಳು ಸಂಸ್ಕೃತಿ ಬೊಕ್ಕ ಚರಿತ್ರೆ ಓದುನಕಲೆಗ್ ಉಂದು ಒಂಜಿ ಆಕರ ಗ್ರಂಥ ಆದುಂಡು ಪನಿಯೆರೆ ವಾ ಸಂಶಯಲಾ ಇಜ್ಜಿ.

ಹೈಸ್ಕೂಲು ಮಟ್ಟೊಡ್ದು ಎಂ.ಎ ಮುಟ್ಟ ತುಳು ವಿದ್ಯಾಭ್ಯಾಸ ಕಲ್ಪುನ ವ್ಯವಸ್ಥೆ ಉಪ್ಪು ಈ ಸಂದರ್ಭೊಡು ಈ ಕೃತಿ ಹೆಚ್ಚ ಉಪಯೋಗ ಆವೊಂದುಂಡು ಅತ್ತಂದೆ ಈ ಕೃತಿ ಕರಿ ವರ್ಷ ಆರಂಭ ಆಯಿ ತುಳು ಎಂ.ಎ.ಗ್ ಪರಾಮರ್ಶನ ಕೃತಿಲಾ ಆದಿತ್ತ್‌ಂಡ್. 178 ವರ್ಷದ ಪಿರವುಡು ತುಳುಟ್ಟು ಮುದ್ರಣ ಸಾಹಿತ್ಯ ಸುರು ಮಲ್ತಿನಕುಲು ಬಾಸೆಲ್ ಮಿಶನ್‌ದ ಮಿಶನರಿನಕುಲು. ಮೊಕುಲು ದಾಖಲೆ ಮಲ್ತ್‌ದ್ ಪ್ರಕಟ ಮಲ್ತಿನ ನಿಘಂಟುಲು, ತುಳು ಗಾದೆಲು, ಪಾಡ್ದನೊಲು, ವ್ಯಾಕರಣ, ಇಂಚಿತ್ತಿ ಬೂಕುಲು ಅಪಗದ ಕಾಲೊಡಿತ್ತಿ ಸಂಸ್ಕೃತಿ, ಬದ್‌ಕ್ ಅತ್ತಂದೆ ತುಳುತ್ತ ಪೊರ್ಲುದ ತೆರಿಪಾವುಂಡು ಅಂಚನೇ ಮಿಶನರಿಳು ಸಂಗ್ರಹ ಮಲ್ತ್ ದೀದ್ ಬೊಲ್ಪುಗು ಬರಂದೆ ಹಸ್ತಪ್ರತಿ ರೂಪೊಡೇ ಇತ್ತಿನೆನ್ ಸಂಪಾದನೆ ಮಲ್ತ್‌ದ್ ಪ್ರಕಟ ಮಲ್ಪುನೆಡ್ದ್ ನನಲಾತ್ ಪಿರಾಕ್‌ದ ಚರಿತ್ರೆಲೆನ್ ನಮ ತೆರಿಯೊನೊಲಿ.

ಈ ಕೃತಿನ್ ಸಂಪಾದನೆ ಮಲ್ತಿನ ದುರ್ಗಾಪ್ರವೀಣ್ ಬೊಕ್ಕ ಬೆನೆಟ್ ಜಿ. ಅಮ್ಮನ್ನೆರ್ ಮೊಕುಲು ನಿರಂತನ ಸಂಶೋಧನೆ ಪ್ರಕಟಣೆಲೆನ್ ಮಲ್ತೊಂದಿತ್ತ್‌ದ್ ತುಳು ಸಾಹಿತ್ಯ ಕ್ಷೇತ್ರೊಡು ಬೆನೊಂದುಲ್ಲೆರ್. ಮೊಕಲೆಡ್ದ್ ನನಲಾತ್ ಇಂಚಿತ್ತಿ ಸಂಶೋಧನೆಲು ಪಿದಯಿ ಬರಡ್ ಪಂಡ್ದ್ ಬಯಕೊಂದು. ನಾಲ್ ವರ್ಷ ಪಿರವುಡು ಈ ಕೃತಿನ್ ಪ್ರಕಟ ಮಲ್ಪೆರೆ ಒಪ್ಪಿಗೆ ಕೊರಿನ ಕರ್ನಾಟಕ ತಿಯೊಲಾಜಿಕಲ್ ಕಾಲೇಜ್‌ದ ಪ್ರಾಂಶುಪಾಲೆರಾಯಿ ಡಾ. ಹನಿ ಕೆಬ್ರಾಲ್‌ರೆಗ್ಲಾ ಅಕಾಡೆಮಿದ ಪರವಾದ್ ಧನ್ಯವಾದೊಲೆನ್ ಸಂದಾವೊಂದುಲ್ಲೆ.

ಎಪ್ರಿಲ್ 2019

ಎ.ಸಿ. ಭಂಡಾರಿ

ಗುರ್ಕಾರ್ರ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಸುರುತ ಪಾತೆರ

ಜರ್ಮನಿದ 'ಬಾಸೆಲ್ ಮಿಶನ್'ದಕುಲು 1834ನೇ ಇಸವಿಡ್ ತುಳು ನಾಡ್‌ಗ್ ಬತ್ತೆರ್. ಕುಡ್ಲ, ಮುಲ್ಕಿ, ಒಡಿಪು ಅಕಲ್ನ ಮುಕ್ಯ ನಿಲೆ ಜಾಗೆಲಾಂಡಲಾ ಅಕಲ್ನ ಮೂಲ ಬೇಲೆ ಬೆನ್ಪಾಟಿಗೆದ ಬಿತ್ತಿಲ್ ಇಡೀ ತುಳುನಾಡೇ ಆದಿತ್ತ್‌ಂಡ್. ಧರ್ಮ ಪ್ರಚಾರೊದ ಬೇಲೆನ್ ಸುಲಬ ಮಲ್ತೊನ್ನೆರೆಗಾದ್ ಜನೊಕುಲೆನ ನಡುಟೇ ಬದ್ಕೊಂದಿತ್ತಿನ ಮಿಶನರಿಲೆಗ್ ಜನೊಕ್ಲೆನ ಬಾಸೆನ್ ತೆರಿಯೊನೊಡಾಂಡ್. ಬಾಸೆಡ್ದಾದ್ ಅಕಲ್ನ ಬದ್ಕ್‌ದ ಇಸ್ಟಕಸ್ಟ ಬೆಂಗ್ ಬೆಸರ್ದ ಸಂಗತಿಲೆನ್, ಅಕಲ್ನ ಸಂಸ್ಕೃತಿದ ಪೊರ್ಲುತಿರ್ಲ್‌ನ್ ತೆರಿಯೊನ್ನೆರೆಗಾಂಡ್. ಇಂಚ ಬಾಸೆದೊಟ್ಟುಗ್ ತುಳುನಾಡ್‌ದಕಲ್ನ ಬದ್‌ಕ್‌ದ ನಾಡಿನೇ ನಾಡ್ದ್ ಪತ್ತಿನ ಈ ಬುದ್ಯಂತೆರ್, ಅವ್ವೆತ ದಾಕಲೆಗಾದ್ ಕನ್ನಡ ಲಿಪಿಟ್ ಅವ್ವೆನ್ ಬರೆದ್ಲಾ ದೀಯೆರ್. ಇಂಚ ಕೇಣ್ದ್ ಬರೆಪಿನಕ್ಲೆಗ್ ಊರೂರುದ ಬರವುಸರವು ಇತ್ತಿನ ಜನೊಕುಲು ಸಾಯೊಲಾ ಮಲ್ತೆರ್. ತುಳುವೆರ್ನ ರೀತಿರಿವಾಜಿಲ್, ನಂಬಿಕೆಲ್, ಬೂತದೈವೊಲೆನ ಕಾರ್ನಿಕೊಲು, ಬೂತದೈವೊಲೆಗ್ ನಡತೊನುನ ಕಿರ್ಮೊಲು, ಬೂತೊಲೆನ ನುಡಿಕಟ್ಟ್, ಬೂತೊಲೆಗ್ ಸಮ್ಮಂದವಾಯಿನ ಸಂಗತಿಲ್, ತಂತ್ರ, ಚಾತುರ್ಮೆಲ್ ಇಂಚ ಒಂಜೊಂಜೆನ್ಲಾ ಬುಡಂದೆ ತೆರಿಯೊನುನ ಈ ಪರದೇಸೊದಕ್ಲೆನ ಉಮೇದ್‌ನ್, ತಂಕ್ಲೆನ ಪಾಲ್‌ದ ಬೇಲೆನ್ ಸರೀಟೆ ಬೆನೊಡಿಣ್ಪಿನ ನಿಷ್ಟೆನ್ ಮೆಚ್ಚೊಡಾಯಿನನೆ!

ಅಪಗೊದ ಕಾಲೊಡು ತುಳುವೆರ್ ಉದ್ದಾರೊದ ಗೇನೊಡು ಇಜ್ಜಾಂಡ್. ಅಜ್ಜೆರ್ ನಡ್ತಿನ ಗೋಳಿದ ಮರೊಕು ಸುತ್ತು ಬತ್ತ್‌ಂಡ ಯಾವು ಪಣ್ಪಿನ ಹಾಡ್ಗತಿ. ಬೆನ್ಪಿನಕುಲು ಬೆನ್ಯೆರೆನೇ ಆಂಡ್. ಸೊಲ್ಮೆ ಉಲ್ಲಾಯ ಪಣ್ಪಿನೆಟೇ ಸಾರ್ತಕ ಬಾಮೊದಕುಲಿತ್ತೆರ್. ಬಂಜಿಗೆಂಚಲಾ ಅರಅರ! ಬುದ್ದಿಗ್ ಬೊಳ್ಪೇ ತಿಕ್ಕೊಂದಿತ್ತಿಜಿ.. ನಂಬಿಕೆದ ನಿಲೆಟ್ ಮೂಡೆರೇ ದಿಂಜ! ಇಂಚಿತ್ತಿನ ಸಮಾಜೊಡು ಪರದೇಸದಕ್ಲೆಗ್ ಓಲು ತೂಂಡಲಾ ಪೊಸಪೊಸ ಸಂಗತಿಲೇ! ಅಕುಲು ತುಳುವೆರ್ನ, ಅಯಿಟ್ಲಾ ಬಡವೆರೆನ ನಡುನಡುಕೇ ಪೋಯೆರ್. ಅಕಲ್ನ ಬದ್ಕ್‌ನ್ ತೆರಿಯೊಂಡೆರ್. ತೆರಿನೆನ್ ಬರೆದ್ ದೀಪಿನ ಪ್ರಯತ್ನೊನ್ಲಾ ಮಲ್ತೆರ್. ತುಳುಲಿಪಿ ಅಕಲ್ನ ಕಣ್ಣ್‌ಗೇ ಬೂರ್ದಿಪ್ಪಂದ್. ಕನ್ನಡ ಲಿಪಿ ಚಾಲ್ತಿಡುಂಡು. ಅಕುಲು ಕನ್ನಡ ಲಿಪಿಟೇ ತುಳು ಸಂಗತಿಲೆನ್ ಬರೆದ್ ದಾಕಲೆ ಮಲ್ತೆರ್. ಆ ದಾಕಲೆನ್ ಬಂಡಾರೊಡು ಜೋಕೆಡ್ ಒರಿತೊಂಡೆರ್. ಇಂಚ ಬರೆದ್ ದೀನಗ ಊರುಡು ತೆರಿದಿನಕ್ಲೆಡನೇ ಕೇಣ್ದ್ ಬರೆಯೆರ್. ಈ ದಾಕಲೆದ ಬೇಲೆಡ್ ಜರ್ಮನಿಡ್ದ್ ಬತ್ತಿನ ಮಾತ ಧರ್ಮಗುರುಕುಲುಲಾ ಒರಿಯಡ್ದೊರಿ ಮಿಗಿಲ್ ಪಣೊಲಿ. ಅಕಲ್ನ ಆನಿದ ಬೇಲೆ ಇನಿಕ್ಲಾ ಜರ್ಮನಿಡ್ ಬೊಕ್ಕ ಕುಡ್ಲದ ಧರ್ಮಜ್ಞಾನ ಗ್ರಂಥಬಂಡಾರೊಡು

ಒರಿದ್‌ಂಡ್. ಈ ದಾಕಲೆಲ್ ತುಳುನಾಡ್‌ದ ಚರಿತ್ರೆನ್, ಸಂಸ್ಕೃತಿನ್, ಸಾಮಾಜಿಕ ಚರಿತ್ರೆನ್ ತೆರಿಯೊನೆರೆ ದಿಂಜ ಸಾಯ ಮಲ್ತ್‌ದ್‌ಂಡ್. ವಿದ್ವಾಂಸೆರ್ ಈ ಬಂಡಾರೊದ ದಾಕಲೆದ ಆದೆರೊಡು ಸಂಶೋದನೆದ ಬೂಕುಲೆನ್ ಬರೆತೆರ್. ಡಾಕ್ಟರೇಟ್ ಪದವಿ ಪಡೆತೊಂದೆರ್.

ಆ ಬಂಡಾರೊಡೇ ತಿಕ್ಕಿನ ಬೂಕು ಈ ಮಿಶನರಿನಕ್ಲೆನ ತುಳು ಟಿಪ್ಪಣಿ. ಉಂದೆನ್ ನಾಡ್ದ್ ಕೈಬರವುದ ಕಡತೊಲೆನ್ ಓದುದು ತೆರಿದ್, ಇತ್ತೆದ ಕನ್ನಡ ಲಿಪಿಟ್ ಬರೆದ್, ಅಯಿಕ್ ಕನ್ನಡೊಡು ಟಿಪ್ಪಣಿ ಬರೆಪಿನ ಪ್ರಯತ್ನ ಮಲ್ತಿನಕುಲು ಡಾ. ಎಂ.ಎಸ್. ದುರ್ಗಾ ಪ್ರವೀಣ್ ಬೊಕ್ಕ ಶ್ರೀ ಬೆನೆಟ್ ಜಿ. ಅಮ್ಮನ್ನ ಮೊಕುಲು. ಅಪಗದ ತುಳುವೆರ್ನ ಬದ್ಕ್‌ದ ನೋಟ, ಅಂಚೆನೇ ಕೆಲ ಜಾಗೆಲೆನ ಪೊಲಬು, ಜನೊಕ್ಲೆನ ನಂಬಿಕೆಲ್ ಇಂಚಿತ್ತಿನ ದಿಂಜ ಸಂಗತಿಲೆನ್ ಸರೀಟೆ ಪಂಡ್ ತೋಜಾವುನ ಈ ಬೂಕುದ ತಿರ್ಲ್ ತೆರಿಯೊಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಬೊಳ್ಳುಗ್ ಕಣವೊಂದುಂಡು. ಈ ಬೂಕುದ ಪ್ರಕಟಣೆಗ್ ಒಪ್ಪಿಗೆ ಕೊರ್ತಿನ ಕುಡ್ಲದ ಕರ್ನಾಟಕ ತಿಯೋಲಾಜಿಕಲ್ ಕಾಲೇಜ್‌ದಕ್ಲೆಗ್, ಈ ಬೂಕುನು ಸಂಪಲ್ತಿದ್ ಕೊರಿನ ಡಾ. ಎಂ.ಎಸ್. ದುರ್ಗಾ ಪ್ರವೀಣ್ ಬೊಕ್ಕ ಶ್ರೀ ಬೆನೆಟ್ ಜಿ. ಅಮ್ಮನ್ನೆರೆಗ್, ಬೂಕುಗ್ ಪೊರ್ಲುದ ದೇಕಿ ಕೊರ್ದು ಅಚ್ಚಿ ಮಲ್ತಿನ ಆಕೃತಿ ಪ್ರಿಂಟ್ಸ್‌ದ ಕಲ್ಲೂರು ನಾಗೇಶೆರೆಗ್, ಬೂಕುನ್ ಓದಿಯೆರೆ ಮನ ಮಲ್ಪುನ ತುಳು ಬಂದುಲೆಗ್ ಮಾತ ಕರ್ನಾಟಕ ತುಳು ಅಕಾಡೆಮಿದ ಪುದರ್ಡ್ ಸೊಲ್ಮೆ ಸಂದಾವೆ.

ಜಾಗೆ: ಕುಡ್ಲ
2-3-2015

ಎಮ್. ಜಾನಕಿ. ಬ್ರಹ್ಮಾವರ
ಅಧ್ಯಕ್ಷೆ,
ಕರ್ನಾಟಕ ತುಳು ಸಾಹಿತ್ಯಅಕಾಡೆಮಿ

ಪತ್ರಾಗಾರದ ಪರವಾಗಿ

ತುಳುನಾಡಿನ ಭಾಷೆ, ಸಂಸ್ಕೃತಿಗೆ ಬಾಸೆಲ್ ಮಿಶನರಿಗಳು ಮಾಡಿದ ಸೇವೆ ಬಹುದೊಡ್ಡದು. ಅವರ ಸಾಹಿತ್ಯ ಸೇವೆಗೆ ಸಂಬಂಧಿಸಿದಂತೆ ಈಗಲೂ ಸಂಶೋಧನೆಗಳು ನಡೆಯುತ್ತಿರುವುದು ಬಹಳ ಹೆಮ್ಮೆಯ ವಿಚಾರ. ಬಾಸೆಲ್ ಮಿಶನರಿಗಳ ಪ್ರಕಟವಾದ ಕೃತಿಗಳ ಮೇಲೆ ಎಂ. ಫಿಲ್., ಪಿಎಚ್.ಡಿ ಪದವಿಗಾಗಿ ಮತ್ತು ಹಲವಾರು ವಿದ್ವತ್ ಲೇಖನ ಹಾಗೂ ಕೃತಿಗಳಿಗಾಗಿ ಸಂಶೋಧನೆಗಳು ನಡೆದಿವೆ. ಬಾಸೆಲ್ ಮಿಶನ್‌ನ 200ನೇ (1815–2015) ವರ್ಷಾಚರಣೆಯ ಸಂದರ್ಭದಲ್ಲಿರುವಾಗ ಇನ್ನೂ ಒಂದು ಹೆಜ್ಜೆ ಮುಂದಿಟ್ಟು ಪ್ರಕಟವಾಗದೇ ಹಸ್ತಪ್ರತಿ ರೂಪದಲ್ಲಿಯೇ ಉಳಿದಿರುವ ಅವರ ಕೃತಿಗಳನ್ನು ಬೆಳಕಿಗೆ ತರಲು ಪ್ರಯತ್ನಿಸುತ್ತಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ವಿಚಾರ ಹಾಗೂ ಸಂತೋಷದ ಸಂಗತಿ ಯಾಗಿದೆ.

ನಮ್ಮ ಸಂಸ್ಥೆಯ ಪತ್ರಾಗಾರದಲ್ಲಿ ಸಂರಕ್ಷಿತವಾಗಿರುವ ಬರವಣಿಗೆಗಳು, ಕಡತ, ದಾಖಲೆ, ಪುಸ್ತಕಗಳಲ್ಲಿ ಬಹು ಅಮೂಲ್ಯ ವಾದ ಸಂಶೋಧನಾತ್ಮಕ ದಾಖಲೆಗಳು ಹುದುಗಿವೆ. ಈ ಮಿಶನರಿಗಳ ಅಪ್ರಕಟಿತ ಬರಹಗಳನ್ನು ಆರಿಸಿ ಅಭ್ಯಸಿಸಿ ಅವುಗಳ ಒಳಗೆ ಇರುವ ವಿಷಯಗಳ ಬಗ್ಗೆ ಆಳವಾದ ಸಂಶೋಧನೆ ನಡೆಸಿ ತಮ್ಮ ಕ್ಷೇತ್ರಕಾರ್ಯದ ಮೂಲಕ ಕುತೂಹಲಕರವಾದ ಮಾಹಿತಿಗಳನ್ನು ಸಂಗ್ರಹಿಸಿ ಅದನ್ನು ಅಚ್ಚುಕಟ್ಟಾಗಿ ಪ್ರಕಟಿಸಲು ಸಿದ್ಧಪಡಿಸಿದ ಡಾ.ಎಂ.ಎಸ್. ದುರ್ಗಾಪ್ರವೀಣ್ ಮತ್ತು ಶ್ರೀ ಬೆನೆಟ್ ಜಿ. ಅಮ್ಮನ್ನ ಇವರ 'ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು' ಎಂಬ ಈ ಕೃತಿಯು ಮಿಶನರಿಗಳ ಸಾಹಿತ್ಯ ಸಂಸ್ಕೃತಿ ಸೇವೆಗಳ ಕೊಡುಗೆಯನ್ನು ಮುಂದುವರಿಸುವ ಭಾಗವಾಗಿದೆ. ಇವರು

ಸಂಪಾದಿಸಿದ ಬಾಸೆಲ್ ಮಿಶನರಿಗಳ ಸಂಗ್ರಹವಾದ ತುಳು ವಿಕ್ರಮಾರ್ಕ ಕಥೆ (ಬಾಸೆಲ್ ಮಿಶನರಿಳೆ ಬೊಳ್ಪುಗ್ ಬರಂದಿ ಬರವುಳೆಡ್ದ್) ಈಗಾಗಲೇ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯಿಂದ ಪ್ರಕಟಗೊಂಡು ವಿದ್ವಜ್ಜನರ ಮನ್ನಣೆ ಗಳಿಸಿದೆ.

ಈ ಕೃತಿಯು ಮಿಶನರಿಗಳ ಬರವಣಿಗೆಗಳನ್ನು ಸಂಶೋಧನೆ ಮಾಡುವವರಿಗೆ ಒಂದು ಕೊಡುಗೆ ಎಂಬುದಕ್ಕೆ ಯಾವುದೇ ಸಂಶಯವಿಲ್ಲ. ಈ ಕೃತಿಯನ್ನು ಸಂಪಾದಿಸಿ ಪ್ರಕಟಿಸಲು ಹಲವು ವರುಷಗಳಿಂದ ದುಡಿದ, ತುಳುವಿನ ಆಧುನಿಕಪೂರ್ವ ಸಾಹಿತ್ಯದ ಸಂಶೋಧನೆಯಲ್ಲಿ ನಿರತರಾಗಿರುವ ಡಾ.ಎಂ.ಎಸ್. ದುರ್ಗಾಪ್ರವೀಣ್ ಮತ್ತು ಶ್ರೀ ಬೆನೆಟ್ ಜಿ. ಅಮ್ಮನ್ನರವರನ್ನು ಅಭಿನಂದಿಸಿ, ಪ್ರಕಟಿಸಲು ಮುಂದೆ ಬಂದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಇವರಿಗೂ, ಮಿಶನರಿಗಳ ಅಪ್ರಕಟಿತ ಬರಹಗಳನ್ನು ಪ್ರಕಟಿಸಲು ಬಾಸೆಲ್ ಮಿಶನ್ ಬರವಣಿಗೆಗಳ ಹಕ್ಕುದಾರರಾದ ಬಾಸೆಲ್ ಮಿಶನ್/ ಮಿಶನ್ 21 ಸಂಸ್ಥೆಯ ಪರವಾಗಿ ಒಪ್ಪಿಗೆಯನ್ನು ನೀಡುತ್ತಾ ಶುಭಾಕಾಂಕ್ಷೆಯನ್ನು ತಿಳಿಸುತ್ತಿದ್ದೇವೆ.

15–1–2015

ರೆವೆ. ಡಾ. ಹನಿ ಕೆಬ್ರಾಲ್
ಪ್ರಾಂಶುಪಾಲರು
ಕರ್ನಾಟಕ ತಿಯೋಲಾಜಿಕಲ್ ಕಾಲೇಜು, ಮಂಗಳೂರು

ಸಂಪಾದಕರ ಮಾತು

(ದ್ವಿತೀಯ ಮುದ್ರಣಕ್ಕಾಗಿ)

'ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು' ದ್ವಿತೀಯ ಮುದ್ರಣವನ್ನು ಕಾಣುತ್ತಿರುವುದು ಸಂತಸದ ಸಂಗತಿ. ಇದಕ್ಕಾಗಿ ನಾವು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಗೆ ಕೃತಜ್ಞರಾಗಿದ್ದೇವೆ. 2015ರ ಮೊದಲ ಮುದ್ರಣದ ಪ್ರತಿಗಳೆಲ್ಲವೂ ಮುಗಿದು ಹೋಗಿ ಬಹಳಷ್ಟು ಮಂದಿ ಅಕಾಡೆಮಿಯನ್ನೂ, ಸಂಪಾದಕರನ್ನೂ ಮರುಮುದ್ರಣಕ್ಕಾಗಿ ಸಂಪರ್ಕಿಸುತ್ತಿದ್ದು ಇದೀಗ ಅದು ಕೈಗೂಡಿದೆ. ತುಳುವಿನ ಪ್ರಾಚೀನ ಮತ್ತು ಆಧುನಿಕ ಸಂದರ್ಭದ ನಡುವಿನ ಕೊಂಡಿಯಾಗಿರುವ ಈ ಕಾಗದ ಹಸ್ತಪ್ರತಿಗಳನ್ನು ಪ್ರಕಟಿಸಿದಾಗ ದೊರೆತ ಪ್ರಶಂಸೆಯ ಪ್ರತಿಕ್ರಿಯೆಗಳು ನಮ್ಮನ್ನು ಅಚ್ಚರಿಗೊಳಿಸಿವೆ, ವಿನೀತರನ್ನಾಗಿಸಿವೆ ಮತ್ತು ಇನ್ನಷ್ಟು ಕೆಲಸ ಮಾಡುವಂತೆ ಹುರಿದುಂಬಿಸಿವೆ. ವಿವಿಧ ಪತ್ರಿಕೆಗಳಲ್ಲಿ, ಸ್ಮರಣಸಂಚಿಕೆಗಳಲ್ಲಿ ಈ ಕೃತಿಯ ಬಗೆಗೆ ಮೆಚ್ಚುಗೆಯ ಮಾತುಗಳನ್ನಾಡಿದ, ಇದರ ವಿಶಿಷ್ಟತೆಯನ್ನು ಗುರುತಿಸಿದ ಸಹೃದಯರಿಗೆಲ್ಲಾ ನಮ್ಮ ನಮನಗಳು.

ಡಾ.ಮಹಾಲಿಂಗ ಅವರು ತಮ್ಮ ಲೇಖನದಲ್ಲಿ ಅಂದಿನ ಸಂಧಿಕಾಲದ ಸಂದರ್ಭವನ್ನು ವಿಶ್ಲೇಷಿಸುತ್ತಾ ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು 'ಕಾಲದ ಹರಿವಿಗೆ ಸೇತುವೆ' ಎಂದು ಗುರುತಿಸಿ ಇದರಲ್ಲಿ ಅಪೂರ್ವ ವಿಚಾರಗಳಿರುವುದು, ಕುತೂಹಲಕರ ಒಳನೋಟಗಳಿರುವುದು, ಭಾರತೀಯ ಭಾಷೆಗಳಲ್ಲೇ ಅಪರೂಪದ ಕಾರ್ಯವಾಗಿರುವ ಸಾಧ್ಯತೆಯಿರುವುದನ್ನು ಉಲ್ಲೇಖಿಸಿರುವುದು, ಹಾಗೆಯೇ ಪ್ರಜಾವಾಣಿಯ 'ಮುಕ್ತಚಂದ ಅನುಸಂಧಾನ'ದ ವಿಮರ್ಶೆಯಲ್ಲಿ ಶ್ರೀ ಬಿ.ಎಂ.ಹನೀಫ್ ಅವರು ಇದನ್ನು 'ತುಳುನಾಡಿನ ಇತಿಹಾಸಕ್ಕೆ ಕಿರುಬಿಂಬಗಳು' ಎಂದು ಕರೆದು ತುಳುನಾಡಿನ ಇತಿಹಾಸವನ್ನು ಸಮಚಿತ್ತದಿಂದ ಅಧ್ಯಯನ ನಡೆಸುವವರಿಗೆ ಈ ಕೃತಿ ಖಂಡಿತಾ ಮಾರ್ಗದರ್ಶನ ನೀಡುತ್ತದೆ, ಇದೊಂದು ಉತ್ತಮ ಆಕರ, ಅತ್ಯಂತ ಮೌಲಿಕ ಕೊಡುಗೆ ಎಂದಿರುವುದು ನಮ್ಮ ಶ್ರಮವನ್ನು ಸಾರ್ಥಕಗೊಳಿಸಿದೆ. ಈ ನಡುವೆ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ತುಳು ಎಂ.ಎ. ಸ್ನಾತಕೋತ್ತರ ಪದವಿಯು ಪ್ರಾರಂಭವಾದಾಗ ಈ ಕೃತಿಯನ್ನು ಪರಾಮರ್ಶನಾ ಗ್ರಂಥವಾಗಿ ಗುರುತಿಸಲಾಗಿರುವುದು ಸಂತಸದ ವಿಷಯವಾಗಿದೆ.

ಮೊದಲ ಮುದ್ರಣವು ಪ್ರಕಟಗೊಂಡಾಗ ಅದನ್ನು ಆದರದಿಂದ ಸ್ವಾಗತಿಸಿ ವಿದ್ವತ್ಪೂರ್ಣವಾದ ಪ್ರತಿಕ್ರಿಯೆಗಳನ್ನು ನೀಡಿದ ತುಳು, ಕನ್ನಡದ ಹಿರಿಯ

ವಿದ್ವಾಂಸರೆಲ್ಲರನ್ನೂ ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳುತ್ತಾ ನಮ್ಮ ಕಾರ್ಯವು ಈ ಕ್ಷೇತ್ರದಲ್ಲಿ ಮುಂದುವರೆದಿರುವುದನ್ನು ವಿನಯದಿಂದ ದಾಖಲಿಸಬಯಸುತ್ತೇವೆ. ಬಾಸೆಲ್ ಮಿಶನರಿಗಳಿಗೆ ಸಂಬಂಧಪಟ್ಟ ಇನ್ನಷ್ಟು ಅಪ್ರಕಟಿತ ಟಿಪ್ಪಣಿಗಳು ನಮ್ಮ ಕ್ಷೇತ್ರಕಾರ್ಯದಲ್ಲಿ ದೊರೆತಿದ್ದು ಕುತೂಹಲಕರ ಅಂಶವೆಂದರೆ ಇಲ್ಲಿ ಪ್ರಕಟವಾಗಿರುವ ಟಿಪ್ಪಣಿಗಳೊಂದಿಗೆ ಅವು ಸಂಬಂಧ ಹೊಂದಿವೆ. ತುಳು ನಾಡು, ನುಡಿ, ಸಂಸ್ಕೃತಿ, ಸಾಹಿತ್ಯಗಳಿಗೆ ಸಂಬಂಧಪಟ್ಟ ಅನೇಕ ಹೊಸ ವಿಚಾರಗಳನ್ನು ಅವು ಒಳಗೊಂಡಿದ್ದು ಸಂಪಾದಕರ ಪೂರಕ ಅಧ್ಯಯನದೊಂದಿಗೆ ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳ ಎರಡನೇ ಭಾಗವನ್ನು ಶೀಘ್ರದಲ್ಲಿ ಬೆಳಕಿಗೆ ತರಲಾಗುವುದು.

ಈ ಸಂದರ್ಭದಲ್ಲಿ ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಆಡಳಿತ ವರ್ಗಕ್ಕೆ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎ.ಸಿ. ಭಂಡಾರಿ, ರಿಜಿಸ್ಟ್ರಾರ್ ಶ್ರೀ ಚಂದ್ರಹಾಸ ರೈ ಬಿ.ಯವರಿಗೆ, ಅಕಾಡೆಮಿಯ ಸರ್ವಸದಸ್ಯರಿಗೆ, ದ್ರಾವಿಡ ವಿಶ್ವವಿದ್ಯಾಲಯದ ಆಡಳಿತ ವರ್ಗಕ್ಕೆ, ಅಂದವಾಗಿ ಮುದ್ರಿಸಿ ಹೊರತರುತ್ತಿರುವ ಆಕೃತಿ ಪ್ರಿಂಟ್ಸ್‌ನವರಿಗೆ ನಮ್ಮ ತುಂಬು ಹೃದಯದ ಕೃತಜ್ಞತೆಗಳು.

ಮಂಗಳೂರು
ಎಪ್ರಿಲ್ 2019

ಡಾ. ಎಂ.ಎಸ್. ದುರ್ಗಾಪ್ರವೀಣ
ಬೆನೆಟ್ ಜಿ. ಅಮ್ಮನ್ನ

ಅನುಕ್ರಮಣಿಕೆ

- ರಡ್ಡನೇ ಮುದ್ರಣೊಗು ಗುರ್ಕಾರ್ರೆ ಮದಿಪು / iii
- ಸುರುತ್ತ ಪಾತೆರ / iv
- ಪತ್ರಾಗ್ರಾರದ ಪರವಾಗಿ / vi
- ಸಂಪಾದಕರ ಮಾತು / viii
- ಪ್ರಸ್ತಾವನೆ / 1

ನಂಬಿಕೆ – ಆಚರಣೆ – ಆರಾಧನೆ

1. ಶಕುನ / 51
2. ಮೂಲಿಗೆ / 56
3. ಸ್ವರ್ಗ ನರಕ / 59
4. ಅಳಿಯ ಸಂತಾನ ಆಯಿನಿ ಯೆಂಚ? / 63
5. ಜೈನೆರ್ ಇರ್ಲ್ ದಾಯೆ ಉಣ್ಬುಜೆರ್ ಇನ್ಪಿ ಕಾರಣದ ಕಥೆ / 67
6. ತುಳು ಜನತ ಮದ್‍ಮೆ / 77
7. ಸೈತಿನಾಕುಳೆಗ್ ಮಳ್ಪು ಬೊಜ್ಜ / 79
8. ತುಳು ಜನತ ಬೊಜ್ಜ / 83
9. ಸೈತಿನಾಕುಳೆಗ್ ಮದ್‍ಮೆ ಮಳ್ಪುನಿ / 85
10. ಅತ್ತೂರುದ ಸ್ತಾನ ಗರೋಡಿ ಕುಕ್ಕಿನಂದಾಯಗ್ ಕೊಡಮಂದಾಯಗ್ ಬೈದೆರ್ಲೆಗ್ ಆಪಿ ಕೋಲದ ಸಂಗತಿ / 87
11. ಜಕ್ಕಿನಿನ್ ಬುಡುಪಾವುನು ಯೆಂಚ? / 92
12. ಮಾರಿ ದೇರುನಿ ಅಂದ್‍ಂಡ ದಾನೆ? / 94
13. ಭೂತೊಳೆಗ್ ಕೋಲ ಕಟ್ಟುನಿ ಯೇರ್? / 96
14. ನರಮಾನ್ಯಗ್ ಭೂತ ಪತ್ತುನಿ ಜರ್ಪುನಿ ಅಂದಾ? / 97
15. ಚೌತಿದ ಕ್ರಮ / 101
16. ದೀಪಾವಳಿ ಪರ್ಬ / 102
17. ನೂಲ ಪುಣ್ಣಮೆದ ಕ್ರಮ ದಾನೆಂದ್‍ಂಡ? / 107

18. ದೇವೆರೆ ಪೂಜೆದ ಕ್ರಮ ದಾನೆಂದ್‌ಂಡ / 108
19. ಸುಬ್ರಾಯ ದೇವೆರೆ ಸ್ತಳೊಡು ಆಪಿ ಸೃಷ್ಟಿದ ಕ್ರಮ / 111
20. ಒಡಿಪುದ ಪರಿಯಾಯ ಅಂದ್‌ಂಡ ದಾನೆ? / 117
21. ತಿರ್ಪತಿ ಯಾತ್ರೆ / 120

ಸ್ಥಳಪುರಾಣ

22. ಬಪ್ಪನಾಡ್ ಉಳ್ಳಾಳ್ದಿನ ಬೊಕ್ಕ, ಬಿತ್ತ್‌ಲ್‌ದ
ದೈಯೊಂಗುಳೆನವು ಮೂಲ ಚರಿತ್ರೆ / 123
23. ಬಪ್ಪನಾಡ್ ದೇವಸ್ಥಾನದ ಮೂಲ ಚರಿತ್ರೆ / 127
24. ಉಂಡಾರ್ ದೇವಸ್ಥಾನದ ಚರಿತ್ರೆ / 130
25. ಅತ್ತೂರು ದೇವಸ್ಥಾನ ದೇವೆರೆ ಕಥೆ. ಅಳ್ತ ದೇವೆರ್ ವಿಷ್ಣುಮೂರ್ತಿ / 133
26. ಮೂಡಬೆದ್ರದ ಕಥೆ / 137
27. ಪುತ್ತೆ ದೇವಸ್ಥಾನದವುಲಾ ಚೌಟೆರೆನವುಲಾ ಆದಿ ಚರಿತ್ರೆ / 142
28. ಬೆದ್ರದ ಮಾರಿನವು / 161

ಶಾಪ– ಆಣೆ –ಮಾಟ–ಮಂತ್ರ

29. ಶಾಪ ದೀಪಿನಿ ಅತ್ತ್‌ಡ ದೀವೊಣುನಿ / 166
30. ಪ್ರಮಾಣ ಮಳ್ಪುನಿ ಆಜ (ಆಗಿನ) ಪಾಡುನಿ ಅತ್ತ್‌ಡ ಪಾಡೊಣುನಿ / 168
31. ಶಾಪ ಪಿರಿಪುನಿ ಅತ್ತ್‌ಡ ಆಜ ಪಿರಿಪುನಿ / 170
32. ಒಯಿಳ್ ಕೊರ್ಪಿನಿ ಅಂದ್‌ಂಡ ದಾನೆ? / 172
33. ಒಯಿಳ್ ಪಿರಿಪುನಿ ಯೆಂಚ? / 174
34. ಮಾಟ ಮಳ್ಪುನಿ / 176
35. ಮಂತ್ರ / 178
36. ತಂತ್ರ / 180

ಕಥೆಗಳು

37. ರಾಕ್ಷಸನ್ ಸಂಹಾರ ಮಳ್ತಿನವು / 181
38. ದುಷ್ಟೆರೆ ಸ್ವಭಾವ ಯೆಂಚಿತ್ತಿನವು / 183

39. ಕಪ್ಪೆದ ಕಥೆ / 186
40. ಕುದುಕನ ಕಥೆ / 187
41. ಕಪ್ಪೆ ಪಂಡಿತನ ಮಳ್ತಿನವು / 188
42. ಬಡವೆದಿ ಮುಂಡೆನವುಲಾ ಚೆನ್ನನಾಯಿಳೆನ್ ಕೆರಿ ಜೋಕುಳೆನವುಲಾ / 190
43. ದುರ್ಬುದ್ಧಿದ ಕಂಡಣ್ಯನ್ ಪ್ರೀತಿ ಮಳ್ತಿ ಬೊಡೆದಿನವು / 194
44. ಕೃಷ್ಣರಾಯೆರೆ ಕಾಲೊಡು ನಡತಿ ಕಥೆ / 197
45. ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ / 209

ಅನುಬಂಧ 1

- ಟಿಪ್ಪಣಿಯ ಮುಖಪುಟದ ಜರ್ಮನ್ ಭಾಷೆಯ ಶೀರ್ಷಿಕೆ (1886) / 227
- ಮಿಶನರಿ ಶೈಬ್ಲೆಯ ಹಸ್ತಾಕ್ಷರ (1889) / 228
- ಬರಹದ ಒಂದು ಮಾದರಿ –ದೊರಕಿರುವ ಮೊದಲ ಪುಟ (1886) / 229
- ಜರ್ಮನ್, ತುಳುಭಾಷೆಯ ಪೂರಕ ಬರವಣಿಗೆಗಳು
  – ಮೂಲಿಗೆಯ ಪುಟ (1886) / 230
- ಮಿಶನರಿ ಶೈಬ್ಲೆಯ ಭಾವಚಿತ್ರ (1858–1928) / 231
- ಅತ್ತೂರು ಶ್ರೀನಿವಾಸ ಭಟ್ಟರ ಭಾವಚಿತ್ರ (1907) / 231
- ಎಸ್ .ಆರ್.ಫುರ್ಟಾಡೊ ಅವರ ಭಾವಚಿತ್ರ (1912–1995) / 231
- ಮೂಡಬಿದಿರೆಯ ಟಿಪ್ಪಣಿಗಳಿಗೆ ಪೂರಕವಾದ ಮಾರಿಗುಡಿಯ ಭಾವಚಿತ್ರಗಳು (1929) / 232
- ಕುಡ್ಪುವಿನ ಮಡೆಸ್ತಾನದ ಭಾವಚಿತ್ರ (1928) / 233
- ಸುಬ್ರಮಣ್ಯದ ಮಡೆಸ್ತಾನದ ಭಾವಚಿತ್ರ (1929) / 233

ಅನುಬಂಧ 2

ಶಬ್ದಾರ್ಥ / 234

ಅನುಬಂಧ 3

ಪದಸೂಚಿ / 238

ಪ್ರಸ್ತಾವನೆ

ಬಾಸೆಲ್ ಮಿಶನರಿಗಳ ಸಂಗ್ರಹದಿಂದ ಲಭ್ಯವಾದ ಅಪ್ರಕಟಿತ ತುಳು ಟಿಪ್ಪಣಿಗಳು ಪ್ರಸ್ತುತ ಸಂಕಲನದಲ್ಲಿದ್ದು ಸಂಪಾದನೆಯ ಸಂದರ್ಭದಲ್ಲಿ 'ಬಾಸೆಲ್ ಮಿಶನರಿಗಳ ತುಳು ಟಿಪ್ಪಣಿಗಳು' ಎಂಬ ಶೀರ್ಷಿಕೆಯನ್ನು ನೀಡಲಾಗಿದೆ. ಇವುಗಳಿಗೆ ತುಳು ಮಾತ್ರವಲ್ಲದೆ ಕನ್ನಡ ಸಾಂಸ್ಕೃತಿಕ ಜಗತ್ತಿನಲ್ಲೂ ಮಹತ್ವವಿದೆ. ಪ್ರಾಚೀನ ದ್ರಾವಿಡ ಭಾಷೆಗಳಲ್ಲೊಂದಾದ ತುಳುವಿಗೆ ಲಿಪಿಯಿಲ್ಲವೆಂಬ ವಿಚಾರವು ಹಲವಾರು ವರುಷ ಜಿಜ್ಞಾಸೆಗೊಳಗಾಗಿ ತುಳು ಲಿಪಿಯಲ್ಲಿರುವ ಪ್ರಾಚೀನ ಕಾವ್ಯಗಳು ದೊರಕಿ ದಶಕಗಳಾಗಿವೆ. ಡಾ.ವೆಂಕಟರಾಜ ಪುಣಿಂಚತ್ತಾಯರ ಶ್ರಮ ತುಳುವಿಗೊಂದು ಲಿಪಿಯಿರುವುದನ್ನು ನಿರ್ವಿವಾದವಾಗಿ ಸಾಬೀತು ಮಾಡಿರುವುದಲ್ಲದೆ ಸಾಹಿತ್ಯಿಕ ನೆಲೆಯನ್ನೂ ಸಮರ್ಥವಾಗಿ ಒದಗಿಸಿಕೊಟ್ಟಿದೆ.

ಬಾಸೆಲ್ ಮಿಶನರಿಗಳು ತಮ್ಮ ಕಾರ್ಯವನ್ನಾರಂಭಿಸಿದ ಹತ್ತೊಂಬತ್ತನೇ ಶತಮಾನ, ನಿರ್ದಿಷ್ಟವಾಗಿ ೧೮೪೮ರಿಂದೀಚೆಗೆ ತುಳು ಭಾಷೆಯ ಬರವಣಿಗೆಯು ಕನ್ನಡ ಲಿಪಿಯಲ್ಲಿ ಮುದ್ರಣ ರೂಪಕ್ಕೆ ಬರತೊಡಗಿತು. ಆಧುನಿಕ ಸಂದರ್ಭದಲ್ಲಿ ಪಣಿಯಾಡಿ ಕಾಲದಿಂದ ತುಳುವಿನ ಹೊಸ ಸಾಹಿತ್ಯವೂ ಬರತೊಡಗಿ ಕನ್ನಡ ಲಿಪಿಯಲ್ಲೇ ತುಳು ಮುಂದೆ ಸಾಗುತ್ತಾ ತನ್ನತನವನ್ನೂ ತೋರುತ್ತಿದೆ. ಇಂತಹ ಸನ್ನಿವೇಶದಲ್ಲಿ ತುಳುವಿನ ಪ್ರಾಚೀನ ಮತ್ತು ಆಧುನಿಕ ಸಂದರ್ಭದ ನಡುವೆ ಬಂದ ಬರವಣಿಗೆಗಳಿಗೆಲ್ಲ ಮುಖ್ಯವಾದ ಸ್ಥಾನವಿದೆ. ಅವುಗಳಲ್ಲಿ ಅದೆಷ್ಟೋ ಮರವೆಗೆ ಸಂದಿವೆ. ಪ್ರಕಟವಾಗದೇ ಉಳಿದಿರುವ ಹಲವಾರು ಬಗೆಯ ಬರವಣಿಗೆಗಳು ನಮಗಿಂದು ಲಭ್ಯವಾಗದೇ ಹೋಗಿವೆ.

ಈ ಟಿಪ್ಪಣಿಗಳು ಸಾಂಸ್ಕೃತಿಕವಾಗಿ ಒಂದು ನೆನಪನ್ನು ಕಟ್ಟಿಕೊಡುತ್ತವೆ, ಮುಂದಿನ ಸಂಶೋಧನೆಗಳಿಗೆ ಹೊಸ ದಿಕ್ಕನ್ನು ತೋರಿಸಿಕೊಡುತ್ತವೆ. ಇವು ಮುಂದಿನ ತುಳು ಅಧ್ಯಯನಗಳಿಗೆ ಮಾತ್ರವಲ್ಲದೆ ದ್ರಾವಿಡ ಭಾಷೆ ಸಂಸ್ಕೃತಿಗಳ ತೌಲನಿಕ ಅಧ್ಯಯನಗಳಿಗೆ ಮಹತ್ವದ ಆಕರಗಳಾಗಬಲ್ಲ ಅಂಶಗಳನ್ನು ಒಳಗೊಂಡಿವೆ. ಇವುಗಳಲ್ಲಿರುವ ಅನೇಕ ವಿಚಾರಗಳು ಇದೇ ಮೊದಲ ಬಾರಿಗೆ ತುಳು ಬರಹದ ರೂಪದಲ್ಲಿ ಕಂಡುಬರುತ್ತಿವೆ, ಹಲವು ಗಮನಾರ್ಹವಾದ ಸಂಗತಿಗಳನ್ನು ತೆರೆದಿಡುತ್ತವೆ. ಹೊಸ ದಾರಿಯಲ್ಲಿ ಸಾಗಲು ಇಂತಹ ಆಕರಗಳು ಅಗತ್ಯ. ಇವುಗಳನ್ನು ಮೂಲದಲ್ಲಿರುವಂತೆಯೇ ಇಲ್ಲಿ ಮುದ್ರಣಕ್ಕೆ ತರಲಾಗಿದೆ. ಹಾಗೆಯೇ ಪ್ರತಿಯೊಂದು ಟಿಪ್ಪಣಿಯ ಸ್ಥೂಲ ಅಂಶ, ತತ್ಸಂಬಂಧಿ ಮಾಹಿತಿ, ಮಹತ್ವಗಳನ್ನು ಸಂಕ್ಷಿಪ್ತವಾಗಿ ಕನ್ನಡದ ಪೂರಕ ಟಿಪ್ಪಣಿಯ ಮೂಲಕ ಒದಗಿಸಲಾಗಿದೆ. ಇದು ಕನ್ನಡದ ಅಧ್ಯಯನಕಾರರಿಗೂ ಸಹಕಾರಿಯಾಗಬಲ್ಲುದು, ತುಳುವಿನ ಬಗೆಗಿನ ಅರಿವನ್ನು ವಿಸ್ತರಿಸಬಲ್ಲುದು.

ಹತ್ತೊಂಬತ್ತನೇ ಶತಮಾನದಲ್ಲಿ ಮಿಶನರಿ ಚಟುವಟಿಕೆಗಳು ಹಲವು ರೀತಿಯ ಪರಿವರ್ತನೆಗೆ ಕಾರಣವಾದವು. ಅದರಲ್ಲೂ ಅಂದಿನ ಮಂಗಳೂರಿನ ಮುದ್ರಣ, ಕೈಗಾರಿಕೆ, ವೈದ್ಯಕೀಯ, ಸಾಹಿತ್ಯ, ಭಾಷಾ ಸಂಬಂಧೀ ಕಾರ್ಯಗಳು ಇಂದಿನ ಕನ್ನಡ ಪ್ರದೇಶಗಳೆಲ್ಲವನ್ನೂ ಪ್ರಭಾವಿಸಿದ್ದು ನಿಜ. ೧೮೩೪ರಲ್ಲಿ ಭಾರತಕ್ಕೆ ಮತಪ್ರಚಾರಕ್ಕಾಗಿ ಬಂದ ಬಾಸೆಲ್ ಮಿಶನ್ ಸಂಸ್ಥೆಯ ಮಿಶನರಿಗಳು ತುಳುನಾಡಿಗೆ ಬಂದು ಇಲ್ಲಿ ಕಾರ್ಯಾಚರಿಸುವಾಗ ಸ್ಥಳೀಯರೊಂದಿಗಿನ ಒಡನಾಟಕ್ಕಾಗಿ ಕನ್ನಡದೊಂದಿಗೆ ತುಳು ಭಾಷೆಯನ್ನೂ ಕಲಿಯಬೇಕಾಯಿತು. ಒಂದರ್ಥದಲ್ಲಿ ಅವರು ಇಲ್ಲಿನ ಸಂಸ್ಕೃತಿಯನ್ನು ಅಭ್ಯಸಿಸುವುದರೊಂದಿಗೆ ದಾಖಲೀಕರಣವನ್ನೂ ಕೈಗೊಂಡರು.

೧೮೧೫ರಲ್ಲಿ ಜರ್ಮನಿಯ ಸ್ವಿಜರ್ಲೆಂಡಿನ ಬಾಸೆಲ್ ಪಟ್ಟಣದಲ್ಲಿ ಸ್ಥಾಪನೆಯಾದ ಬಾಸೆಲ್ ಇವೆಂಜಲಿಕಲ್ ಮಿಶನ್ ಸಂಸ್ಥೆಯು ಭಾರತದಲ್ಲಿ ಕಾರ್ಯಾಚರಿಸಲು ಜೆ.ಸಿ.ಲೆಹ್ನರ್, ಸಿ.ಎಲ್.ಗ್ರೈನರ್ ಮತ್ತು ಸಾಮುವೆಲ್ ಹೆಬಿಕ್ ಎಂಬ ಮೂವರು ಮಿಶನರಿಗಳ ಮೊದಲ ತಂಡವನ್ನು ಕಳುಹಿಸಿತು. ಇವರು ಸಮುದ್ರ ಮಾರ್ಗದ ಮೂಲಕ ೩೦ ಅಕ್ಟೋಬರ್ ೧೮೩೪ರಂದು ಮಂಗಳೂರನ್ನು ತಲುಪಿದರು.

ಮುಂದಕ್ಕೆ ಬಾಸೆಲ್ ಮಿಶನರಿಗಳು ಜಿಲ್ಲೆಯಲ್ಲಿ ಧರ್ಮಪ್ರಚಾರ, ಶಿಕ್ಷಣ, ಮುದ್ರಣ, ಸಾಹಿತ್ಯ, ಪತ್ರಿಕೆ, ಹಂಚು ಉದ್ಯಮ, ನೇಯ್ಗೆ, ಕೃಷಿ, ವೈದ್ಯಕೀಯ ಮೊದಲಾದ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರ ಧಾರ್ಮಿಕ, ಶೈಕ್ಷಣಿಕ ಕೇಂದ್ರಗಳಿಗೆ ಅಗತ್ಯವಾದ ಕರಪತ್ರ, ಪುಸ್ತಕಗಳನ್ನು ಮುಂಬಯಿ, ಮದ್ರಾಸು, ಬಳ್ಳಾರಿಗಳಲ್ಲಿ ಮುದ್ರಿಸಲಾಗುತಿತ್ತು. ೧೮೪೧ರಲ್ಲಿ ಜಿ.ಎಚ್.ವೈಗ್ಲೆ (G.H. WEIGLE) ಎಂಬ ಮಿಶನರಿ ಅಂದಿನ ಬೊಂಬಾಯಿ ಯಿಂದ ಕಲ್ಲಚ್ಚು (Lethograph) ಮುದ್ರಣ ಯಂತ್ರವೊಂದನ್ನು ತಂದರು. ಅದರಲ್ಲಿ ಬೈಬಲ್ (ಸತ್ಯವೇದ)ನ ಒಂದು ಭಾಗವಾಗಿರುವ 'ಮತ್ತಾಯೆ ಬರೆತಿ ಸುವಾರ್ತಮಾನ'

ತುಳು ಭಾಷೆಯಲ್ಲಿ ಪುಸ್ತಕರೂಪದಲ್ಲಿ ಮುದ್ರಣವಾಗುವುದರೊಂದಿಗೆ ೧೮೪೧ರಲ್ಲಿ ಜಿಲ್ಲೆಯಲ್ಲಿ ಮುದ್ರಣ ಕಾರ್ಯ ಆರಂಭವಾಯಿತು. ಮುಂದೆ ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಕನ್ನಡ, ತುಳು, ಕೊಡವ, ಬಡಗ, ಮಲಯಾಳಂ ಭಾಷೆಗೆ ಸಂಬಂಧಪಟ್ಟ ಹಲವು ಪುಸ್ತಕಗಳು ಬೆಳಕು ಕಂಡವು. ೧೮೪೩ರಲ್ಲಿ ಪ್ರಕಟಗೊಂಡ ಕನ್ನಡದ ಮೊದಲ ಪತ್ರಿಕೆ ಮಂಗಳೂರು ಸಮಾಚಾರ, ಭೂಗೋಳವು (೧೮೪೫), ತುಳು ಪೊಸ ಒಡಂಬಡಿಕೆ (೧೮೪೭), ಕನ್ನಡ ಗಾದೆಗಳು (೧೮೪೭), ರಾವಣ ದಿಗ್ವಿಜಯ ಯಕ್ಷಗಾನ (೧೮೪೮), ದಾಸರ ಪದಗಳು (೧೮೫೦), ಕನಕದಾಸರ ಭಕ್ತಿಸಾರ (೧೮೫೦), ಬಸವಪುರಾಣ (೧೮೫೦), ಚೆನ್ನಬಸವಪುರಾಣ (೧೮೫೧), ಲೋಕಚರಿತ್ರವು (೧೮೫೪) ಮುಂತಾದವು ಕಲ್ಲಚ್ಚಿನಲ್ಲಿ ಮುದ್ರಣಗೊಂಡಿವೆ.

೧೮೫೧ರಲ್ಲಿ ಭಾರತಕ್ಕೆ ಬಂದ ಚಾರ್ಲ್ಸ್ ಜಾರ್ಜ್ ಆಂಡ್ರ್ಯೂ ಪ್ಲೆಬ್ಸ್ಟ್ (CHARLES GEORGE ANDREW PLEBST) ಎಂಬವರ ಮುಂದಾಳತ್ವದಲ್ಲಿ ಇಲ್ಲಿ ೧೮೫೨ರಲ್ಲಿ ಟೈಪೊಗ್ರಫಿಕ್ ಪ್ರೆಸ್‌ನ ಸ್ಥಾಪನೆಯಾಯಿತು. ಆಗ ಹೊಸ ಮುದ್ರಣ ಯಂತ್ರಗಳು, ಅಚ್ಚು ಮೊಳೆಗಳು ಬಳಕೆಗೆ ಬಂದವು. ೧೮೬೭ರಲ್ಲಿ ಕನ್ನಡ ಮತ್ತು ಮಲಯಾಳಂನಲ್ಲಿ Basel Type ಎಂಬ ಸುಂದರ ಮೊಳೆಗಳು ಬಾಸೆಲ್‌ನಲ್ಲಿ ಸಿದ್ಧಗೊಂಡು ಇಲ್ಲಿ ಎರಕ ಹೊಯಿಸಲಾಯಿತು. ಮುಂದೆ ಮುದ್ರಣ ಕಾರ್ಯ ಅಚ್ಚುಕಟ್ಟಾಗಿ ಸಾಗತೊಡಗಿತು. ಅಂದಿನ ಬೊಂಬಾಯಿ ಮತ್ತು ಮದ್ರಾಸ್ ಸರಕಾರದ ಪರವಾಗಿ ಪಠ್ಯ ಪುಸ್ತಕಗಳು ಇಲ್ಲಿ ಪ್ರಕಟಗೊಳ್ಳುತ್ತಿದ್ದವು. ಕನ್ನಡ ಪಂಚಾಂಗ(೧೮೫೭), ವಿಚಿತ್ರ ವರ್ತಮಾನ ಸಂಗ್ರಹ(೧೮೬೨), ಗುಂಡರ್ಟ್‌ನ ಮಲಯಾಳಂ-ಇಂಗ್ಲಿಷ್ ನಿಘಂಟು(೧೮೭೨), ಬ್ರಿಗೆಲ್‌ನ ತುಳು ವ್ಯಾಕರಣ(೧೮೭೨), ಎ.ಸಿ. ಬರ್ನೆಲನ Elements of South Indian Paleography(೧೮೭೪), ತುಳು ಗಾದೆಗಳು(೧೮೭೪), ಪ್ರಾನ್ಸಿಸ್ ಝೇವಿಯರ್ ರವರ ಕೊಂಕಣಿ ನಿಘಂಟು(೧೮೮೩), ಮೆನ್ನರ್‌ನ ತುಳು ನಿಘಂಟು (೧೮೮೬), ಇಂಗ್ಲಿಷ್-ತುಳು ನಿಘಂಟು(೧೮೮೮), ಕಿಟೆಲ್‌ರ ಕನ್ನಡ-ಇಂಗ್ಲಿಷ್ ನಿಘಂಟು (೧೮೯೪) ಹೀಗೆ ಧರ್ಮ, ಶಿಕ್ಷಣ, ಸಂಸ್ಕೃತಿ, ಭಾಷೆಗೆ ಸಂಬಂಧಿಸಿದಂತೆ ಹಲವು ಪುಸ್ತಕಗಳು ಇಲ್ಲಿ ಮುದ್ರಣಗೊಂಡವು. ತುಳು ಸಂಸ್ಕೃತಿಯ ಬಗ್ಗೆ ಮೊದಲು ದಾಖಲೀಕರಣ ಮಾಡಿದ್ದು ಬಾಸೆಲ್ ಮಿಶನರಿಗಳು. ೧೮೪೧ರಿಂದ ೧೮೯೦ರ ಅವಧಿಯಲ್ಲಿ ಅವರು ಸಂಗ್ರಹಿಸಿದ ಸಾಮಗ್ರಿಗಳಿಂದ ತುಳುವಿಗೆ ಸಂಬಂಧಿಸಿದ ಹಲವು ಕೃತಿಗಳು ಪ್ರಕಟವಾದವು ಎಂಬುದು ಗಮನಾರ್ಹ.

ಇವಲ್ಲದೆ ಧರ್ಮ ಪ್ರಸಾರದ ದೃಷ್ಟಿಯಿಂದ ಮಿಶನರಿಗಳ, ಕ್ರೈಸ್ತಧರ್ಮ ಪ್ರಚಾರಕರ ನಡುವೆ ಖಾಸಗಿ ಪ್ರಸಾರಕ್ಕಾಗಿ ಇವರು ಹಲವು ಪುಸ್ತಕಗಳನ್ನು ಮುದ್ರಿಸಿರುವುದು ಕಂಡುಬರುತ್ತದೆ. ಎ.ಮೆನ್ನರ್‌ನ 'ಪಾಡ್ದನೊಳು' (೧೮೮೬) ಹೀಗೆ ಬಂದಿದೆ. 'ತುಳುವರೆಡ್ ನಡಪು ಭೂತಸೇವೆ' (೧೮೯೧)ಯಂತಹಾ ಭೂತಾರಾಧನೆಗೆ ಸಂಬಂಧಪಟ್ಟ

ಕಿರುಪುಸ್ತಕವು ಪ್ರಕಟಗೊಂಡಿದೆ. ಕುತೂಹಲದ ಅಂಶವೆಂದರೆ ೧೮೯೪ರಿಂದ ೧೮೯೭ರವರೆಗೆ 'ಇಂಡಿಯನ್ ಆಂಟಿಕ್ವೆರಿ' ಪತ್ರಿಕೆಯಲ್ಲಿ ಪ್ರಕಟಗೊಂಡ ಎ.ಸಿ.ಬರ್ನೆಲ್‌ನ The Devil Worship of the Tuluvas ಕೂಡಾ ಅಂದು ಪುಸ್ತಕ ರೂಪದಲ್ಲಿ ಬಂದಿದೆ. ಎ.ಸಿ.ಬರ್ನೆಲ್‌ಗೆ ಎ.ಮೆನ್ನರ್‌ನ ಸಹಕಾರವು ಕಂಡುಬರುತ್ತದೆ.

ಮೌಖಿಕ ರೂಪದ ಅದೆಷ್ಟೋ ವಿಚಾರಗಳು ಇದೇ ವೇಳೆಗೆ ಬರವಣಿಗೆಗೆ ಬಂದವು. ಇದು ಈ ಕಾಲಘಟ್ಟದ ಒಂದು ಗಮನಾರ್ಹ ಪ್ರಕ್ರಿಯೆಯಾಗಿದ್ದು ವಿವಿಧ ನೆಲೆಗಳಲ್ಲಿ ನಡೆಯಿತು. ಆಧುನಿಕ ಮುದ್ರಣದ ಮಾದರಿಗಳು ಬರವಣಿಗೆಯ ವಿಧಾನವನ್ನು ನಿರ್ವಚಿಸಿದವು. ವೈಯಕ್ತಿಕ ನೆಲೆಯಲ್ಲೂ ಈ ಬಗೆಯ ಬರವಣಿಗೆ ಅಥವಾ ದಾಖಲಾತಿ ಕಾಣಿಸಿಕೊಂಡದ್ದಿದೆ. ಪ್ರಾರಂಭದಿಂದಲೂ ಇಲ್ಲಿಗೆ ಬಂದ ಮಿಶನರಿಗಳಲ್ಲಿ ಬಹುತೇಕರು ತದನಂತರದ ಮಿಶನರಿಗಳ ಉಪಯೋಗಕ್ಕಾಗಿ ಹಲವು ವಿಷಯಗಳನ್ನು ಸಂಗ್ರಹಿಸಿ ಬರೆದಿಟ್ಟರು. ಹಲವು ಪುಸ್ತಕಗಳನ್ನು, ಕೋಶ, ವ್ಯಾಕರಣಗಳನ್ನು ಪ್ರಕಟಿಸಿದರು. ಅದರಲ್ಲಿ ಬಹುಪಾಲು ಮುಂದೆ ಜನಸಾಮಾನ್ಯರಿಗೂ ತಲುಪಿತು. ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿದೇಶಿ ಮಿಶನರಿಗಳಿಗೆ ತುಳು ಬದುಕಿನ ಬಗ್ಗೆ ತಿಳಿದುಕೊಳ್ಳಲು ಅವರು ಸ್ವತ: ವಕ್ತೃಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳು, ತಮ್ಮ ಹಿಂದಿನವರು ಪ್ರಕಟಿಸಿದ ಪುಸ್ತಕಗಳು, ಕೋಶ, ವ್ಯಾಕರಣಗಳು ಸಹಾಯಕವಾದವು. ಕನ್ನಡ ಮತ್ತು ತುಳು ಸಾಹಿತ್ಯ ಚರಿತ್ರೆಗೆ ಅವರ ಕೊಡುಗೆಗಳನ್ನು ಗಮನಿಸಿದರೆ ಅವರ ದಾಖಲೀಕರಣದ ಕಾರ್ಯ ನಿರಂತರವಾಗಿ ನಡೆಯುತ್ತಿತ್ತೆಂಬುದು ಕಂಡುಬರುತ್ತದೆ.

೧೯೧೪ರಲ್ಲಿ ಪ್ರಾರಂಭವಾದ ಮೊದಲ ಮಹಾಯುದ್ಧದವರೆಗೂ ದಾಖಲೀಕರಣ, ಸಂಪಾದನೆ, ಭಾಷಾಂತರ ಮೊದಲಾದ ಕಾರ್ಯಗಳು ಸತತವಾಗಿ ನಡೆಯಿತು. ಮೊದಲ ಮಹಾಯುದ್ಧದ ವೇಳೆಗೆ ಮಿಶನರಿಗಳು ತಮ್ಮ ಸ್ವದೇಶಕ್ಕೆ ಮರಳಿದುದರಿಂದ ಮಿಶನ್ ಕಾರ್ಯಚಟುವಟಿಕೆಗಳಿಗೆ ಹಿನ್ನಡೆಯುಂಟಾಯಿತು. ಮೊದಲ ಮಹಾಯುದ್ಧದ ನಂತರ ಮರಳಿ ಬಂದು ಕಾರ್ಯಾರಂಭಿಸಿದರಾದರೂ ಈ ಅವಧಿಯಲ್ಲಿ ದಾಖಲೀಕರಣ ವಾಗಲೀ, ಮುದ್ರಣವಾಗಲೀ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಈ ಅವಧಿಯಲ್ಲಿ ತುಳುನಾಡಿನಾದ್ಯಂತ ಇದ್ದ ಅವರ ಕೇಂದ್ರಗಳಲ್ಲಿ ತಮ್ಮ ಸಭೆ, ಶಾಲೆಗಳಿಗೆ ಸಂಬಂಧಪಟ್ಟ ವಿಚಾರಗಳನ್ನು ದಾಖಲಿಸಿಟ್ಟುದು ಕಂಡುಬರುತ್ತದೆ, ಅವು ಮುದ್ರಣರೂಪದಲ್ಲಿ ಬಂದಿಲ್ಲ. ತುಳುನಾಡಿನಾದ್ಯಂತ ಅವರು ಸ್ಥಾಪಿಸಿದ ಕ್ರೈಸ್ತ ದೇವಾಲಯಗಳಲ್ಲಿ ಮತ್ತು ಕೇಂದ್ರ ಕಛೇರಿಗಳಲ್ಲಿ ಇದ್ದ ಅವರ ದಾಖಲೆಗಳು, ಗ್ರಂಥಗಳು, ಹಸ್ತಪ್ರತಿಗಳನ್ನು ಇಂದು ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಪತ್ರಾಗಾರದಲ್ಲಿ ಸಂರಕ್ಷಿಸಿಡ ಲಾಗಿದೆ.

ಮಂಗಳೂರಿನ ಇಂದಿನ ಸ್ಟೇಟ್‌ಬ್ಯಾಂಕ್ ಬಳಿಯ ನೀರೇಶ್ವಾಲ್ಯ ಎಂಬ ಪ್ರದೇಶ ದಲ್ಲಿದ್ದ ಬಾಸೆಲ್ ಮಿಶನರಿಗಳ ಕೇಂದ್ರ ಕಚೇರಿಯು ೧೮೪೦ರಲ್ಲಿ ಇಂದಿನ ಬಲ್ಮಠಕ್ಕೆ

ಸ್ಥಳಾಂತರವಾಯಿತು. ಮುಂದೆ ಬಲ್ಮಠವು ಮಿಶನ್ ಕಾರ್ಯ, ನೇಯ್ಗೆ ಕಾರ್ಖಾನೆ, ಶಾಲೆ, ಮುದ್ರಣಾಲಯ ಮೊದಲಾದ ಚಟುವಟಿಕೆಗಳಿಗೆ ಸಂಬಂಧಪಟ್ಟ ಕೇಂದ್ರಸ್ಥಾನ ವಾಯಿತು. ಇದೇ ಆವರಣದಲ್ಲಿ ೧೮೪೭ರ ವೇಳೆಗೆ 'ಬಾಸೆಲ್ ಇವೆಂಜಿಲಿಕಲ್ ತಿಯೋಲಾಜಿಕಲ್ ಸೆಮಿನೆರಿ' ಸ್ಥಾಪನೆಯಾಯಿತು. ೧೯೬೫ರಿಂದ ಇದು 'ಕರ್ನಾಟಕ ತಿಯೋಲಾಜಿಕಲ್ ಕಾಲೇಜು' ಎಂಬ ಹೆಸರಿನಲ್ಲಿ ಕರ್ನಾಟಕದಲ್ಲಿರುವ ಪ್ರೊಟೆಸ್ಟಂಟ್ ಕನ್ನಡ ಸಭೆಗಳ ಬೋಧಕರಿಗೆ ತರಬೇತಿ ಕೊಡುವ ಸಂಸ್ಥೆಯಾಗಿದೆ. ೧೯೬೮ರಲ್ಲಿ ಬಾಸೆಲ್ ಮಿಶನ್ ಆಡಳಿತವು ದಕ್ಷಿಣ ಸಭಾ ಪ್ರಾಂತ್ಯಕ್ಕೆ ಸಮ್ಮಿಳಿತಗೊಂಡಾಗ ದೈವಜ್ಞಾನ ವಿದ್ಯಾಪೀಠ, ಚರ್ಚ್ ಮತ್ತು ಶಾಲೆಗಳು ಬೇರೆ ಬೇರೆ ಆಡಳಿತದಲ್ಲಿ ನಡೆಯತೊಡಗಿದವು. ೧೯೭೫ರಿಂದ ಮುದ್ರಣಾಲಯವು ಕರ್ನಾಟಕ ತಿಯೋಲಾಜಿಕಲ್ ಕಾಲೇಜಿನ ಆಡಳಿತಕ್ಕೆ ಬಂದಿತು. ಈ ಸಂಸ್ಥೆಯು ಇಂದೂ ದಾಖಲೆಗಳನ್ನು, ಹಸ್ತಪ್ರತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸುತ್ತಿದೆ. ಇಂತಹ ಅಮೂಲ್ಯವಾದ ದಾಖಲೆಗಳನ್ನು ಸಂರಕ್ಷಿಸುತ್ತಾ ಬರುತ್ತಿರುವ ಇದು ಕರ್ನಾಟಕದ ಮುಖ್ಯ ಪತ್ರಾಗಾರಗಳಲ್ಲೊಂದಾಗಿದ್ದು ಸಂಶೋಧಕರಿಗೆ ಅತ್ಯಂತ ಸಹಾಯಕವಾಗಿದೆ.

ಹಸ್ತಪ್ರತಿಗಳ ಸ್ವರೂಪ

ಪ್ರಸ್ತುತ ಸಂಕಲನವು ಕ್ಷೇತ್ರಕಾರ್ಯದ ಮೂಲಕ ಲಭ್ಯವಾದ ಸಂಗ್ರಹ ಮತ್ತು ಪತ್ರಾಗಾರ ಸಂಗ್ರಹದಿಂದ ಆಯ್ದ ಟಿಪ್ಪಣಿಗಳನ್ನು ಒಳಗೊಂಡಿದೆ. ಇದು ೨೦೦೮ರಲ್ಲಿ ಕ್ಷೇತ್ರಕಾರ್ಯದ ವೇಳೆ ದೊರಕಿದ ರೈಟ್.ರೆವೆ.ಎಸ್.ಆರ್. ಫುರ್ಟಾಡೋರವರ ಸಂರಕ್ಷಣೆಯಲ್ಲಿದ್ದ ಮಿಶನರಿಗಳ ಸಂಗ್ರಹದ ಟಿಪ್ಪಣಿಗಳು (ಕರ್ನಾಟಕ ತಿಯೋಲಾಜಿಕಲ್ ಕಾಲೇಜು ಪತ್ರಾಗಾರ, ಕಾಗದ ಪ್ರತಿ, ಸಂಖ್ಯೆ A/2564) ಮತ್ತು ಸಂಸ್ಥೆಯ ಸಂಗ್ರಹದಲ್ಲಿದ್ದ ಟಿಪ್ಪಣಿಗಳು (ಕರ್ನಾಟಕ ತಿಯೋಲಾಜಿಕಲ್ ಕಾಲೇಜು ಪತ್ರಾಗಾರ, ಕಾಗದ ಪ್ರತಿ, ಸಂಖ್ಯೆ A/1441) ಇವುಗಳನ್ನು ಒಂದೆಡೆಗೆ ತರುವುದು ಮಾತ್ರವಲ್ಲದೆ ಇಲ್ಲಿ ಬಂದಿರುವ ವಿಚಾರಗಳಿಗೆ ಪೂರಕವಾದ ಮಾಹಿತಿಗಳನ್ನು ಕ್ಷೇತ್ರಕಾರ್ಯ ಮೂಲಕ ಲಭ್ಯವಾದ ವಿವರಗಳೊಂದಿಗೂ, ಸಂಬಂಧೀ ಮುದ್ರಿತ ಮಾಹಿತಿಗಳೊಂದಿಗೂ ಸಂಪಾದಕರ ಪೂರಕ ಟಿಪ್ಪಣಿಗಳ ಮೂಲಕ ನೀಡುತ್ತಿದೆ.

ಮಿಶನರಿಗಳ ಕಾಲದ ಬರವಣಿಗೆಗಳ ಬಗ್ಗೆ ಕಳೆದ ಕೆಲವು ವರುಷಗಳಿಂದ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಕ್ಷೇತ್ರಕಾರ್ಯದ ವೇಳೆ ದೊರಕಿದ ಹಸ್ತಪ್ರತಿ ಮತ್ತು ಪ್ರಾರಂಭದಿಂದಲೂ ಪತ್ರಾಗಾರದಲ್ಲಿದ್ದ ಹಸ್ತಪ್ರತಿಗಳ ನಡುವಿನ ಅಂತರ್ಸಂಬಂಧವನ್ನು ಗಮನಿಸಿ ಇಲ್ಲಿ ಟಿಪ್ಪಣಿಗಳನ್ನು ಆಯ್ದುಕೊಳ್ಳಲಾಗಿದೆ. ಇವೆರಡೂ ಕಾಲಮಾನ, ವಸ್ತುವಿಚಾರ, ಲಭ್ಯತೆ, ಸಂರಕ್ಷಣೆ ಮತ್ತು ಒಟ್ಟಾರೆ ಸಂರಚನೆಯ ದೃಷ್ಟಿಯಿಂದ ಸಾಮ್ಯತೆಯನ್ನು, ಸಮಾನ ಅಂಶಗಳನ್ನು, ಸಂಬಂಧವನ್ನು ಹೊಂದಿವೆಯೆಂಬುದು

ವಿವಿಧ ಅಂಶಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ. ಈ ಟಿಪ್ಪಣಿಗಳಲ್ಲಿ ಕಂಡುಬರುವ ವಿಚಾರಗಳ ಮಹತ್ವವನ್ನು ಮನಗಂಡು ವಿವಿಧ ಪೂರಕ ಮಾಹಿತಿಗಳೊಂದಿಗೆ ತೌಲನಿಕವಾಗಿ ಅಭ್ಯಸಿಸಿ ನೀಡಲಾಗಿದೆ.

ರೈಟ್ ರೆವೆ.ಎಸ್.ಆರ್.ಫುರ್ಟಾಡೋ(೧೯೧೨-೧೯೬೫)ರವರ ಸಂಗ್ರಹದಿಂದ ಒಟ್ಟು ಎಂಟು ಕಿರುಪುಸ್ತಕಗಳು [A/2564-1ರಿಂದ8] ಲಭ್ಯವಾಗಿದ್ದು ಅವುಗಳಲ್ಲಿ ಮೊದಲ ಆರು ಕಿರುಪುಸ್ತಕಗಳಲ್ಲಿರುವ ಟಿಪ್ಪಣಿಗಳನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಈ ಕಿರುಪುಸ್ತಕಗಳು ಬಾಸೆಲ್ ಮಿಶನರಿಗಳ ಸಂಗ್ರಹವಾಗಿದ್ದು ಮಿಶನ್ ಕಾರ್ಯದ ವಿವಿಧ ಕ್ಷೇತ್ರಗಳಲ್ಲಿ ಸೇವೆಸಲ್ಲಿಸುತ್ತಿದ್ದ ಎಸ್.ಆರ್.ಫುರ್ಟಾಡೊ ಅವರ ಸಂಗ್ರಹಕ್ಕೆ ಬಂದವು. ಇವುಗಳಲ್ಲಿರುವ ಟಿಪ್ಪಣಿಗಳು ಸರಿಸುಮಾರು ಕ್ರಿ.ಶ.೧೮೮೬ರಿಂದ ಕ್ರಿ.ಶ.೧೮೯೫ರ ಅವಧಿಯಲ್ಲಿ ದಾಖಲಾಗಿರುವಂತವು. ಏಳನೆಯ ಕಿರುಪುಸ್ತಕವು 'ತುಳು ವಿಕ್ರಮಾರ್ಕ ಕಥೆ'ಯಾಗಿದ್ದು ಅಪೂರ್ಣವಾಗಿರುವ ಅದನ್ನು ಪ್ರತ್ಯೇಕವಾಗಿ ಪೂರಕ ಮಾಹಿತಿ ಗಳೊಂದಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ೨೦೧೪ರಲ್ಲಿ ಪ್ರಕಟಿಸಿದೆ. ಎಂಟನೆಯ ಕಿರುಪುಸ್ತಕವು ಧರ್ಮಸಂಬಂಧೀ ಸಂಭಾಷಣೆಯನ್ನು ಒಳಗೊಂಡಿದೆ. ಈ ಕಿರುಪುಸ್ತಕಗಳನ್ನು ಅವುಗಳಲ್ಲಿರುವ ಆಂತರಿಕ ಆಧಾರಗಳಾದ ಇಸವಿಗಳು, ಮೊದಲ ಪುಟದ ರೋಮನ್ ಸಂಖ್ಯೆಗಳ ಸಾತತ್ಯ ಹಾಗೂ ಸಂಗ್ರಹದಲ್ಲಿದ್ದ ಅನುಕ್ರಮಣಿಕೆಯನ್ನನುಸರಿಸಿ ಎಂಟು ಎಂದು ಗುರುತಿಸಿಕೊಳ್ಳಲಾಗಿದೆ. ಇವು ಇನ್ನಷ್ಟು ಸಂಖ್ಯೆಯಲ್ಲಿ ಇದ್ದಿರಬಹುದು. ಆದರೆ ಅವು ಲಭ್ಯವಿಲ್ಲ.

ಈ ಕಿರುಪುಸ್ತಕಗಳಲ್ಲಿ ಕಾಗದವನ್ನು ಮಧ್ಯದಲ್ಲಿ ಮಡಿಸಿ ಹೊಲಿಯಲಾಗಿದ್ದು ಪ್ರತಿ ಪುಟವು ಸಾಮಾನ್ಯವಾಗಿ ೨೧ ಸೆ.ಮಿ ಉದ್ದ ಹಾಗೂ ೧೭ ಸೆ.ಮಿ. ಅಗಲವಾಗಿದೆ. ಹೀಗಾಗಿ ಬರವಣಿಗೆಯ ವೇಳೆ ಪುಸ್ತಕವನ್ನು ಹೊಲಿಯುವ ಜಾಗದಲ್ಲಿ ಪ್ರತ್ಯೇಕವಾಗಿ ಸ್ಥಳವನ್ನೇನೂ ಬಿಡಲಾಗಿಲ್ಲ. ಬರೆಯುತ್ತಾ ಸಾಲುಗಳ ಕೊನೆಯಲ್ಲಿ ಒಂದು ಇಂಚಿನಷ್ಟು ಸ್ಥಳ ಬಿಡಲಾಗಿದೆ. ಲೇಖನಿಯಿಂದ ಬರೆಯಲಾಗಿದ್ದು ಅಣಿಲೆಕಾಯಿ ಶಾಯಿಯನ್ನು ಇಲ್ಲಿ ಬಳಸಲಾಗಿದೆ. ಬಹುತೇಕ ಪುಟದ ಹಿಂಬದಿಯ ಅಕ್ಷರಗಳು ಗೋಚರಿಸುತ್ತವೆ. ಅಕ್ಷರಗಳು ಕಂದು ಕಡು ಬಣ್ಣದಲ್ಲಿದ್ದು ಹಲವು ಪುಟಗಳಲ್ಲಿ ಅಕ್ಷರ ಕೊರೆದು ರಂಧ್ರಗಳಾಗಿವೆ. ಕಾಗದ ನಯವಾಗಿದ್ದು ಕಾಲಾನುಕ್ರಮದಲ್ಲಿ ಕಂದು ಬಣ್ಣಕ್ಕೆ ತಿರುಗಿದೆ. ಬಹುತೇಕ ಪ್ರತಿಯೊಂದು ವಿಷಯಕ್ಕೆ ಸರಿಹೊಂದುವಂತೆ ಶೀರ್ಷಿಕೆಗಳನ್ನು ನೀಡಲಾಗಿದೆ. ಬಹಳಷ್ಟು ಶೀರ್ಷಿಕೆಗಳನ್ನು ತುಸು ದೊಡ್ಡದಾಗಿ ಬರೆಯಲಾಗಿದೆ. ಪ್ರಕಟಣೆಗೆ ಸಿದ್ಧಪಡಿಸಿ ಇಟ್ಟ ಮಾದರಿಯ ಬರವಣಿಗೆ ಇದಾಗಿದೆ.

ಮೊದಲನೆಯ ಕಿರುಪುಸ್ತಕದಲ್ಲಿ[A/2564-1]ಅನುಕ್ರಮವಾಗಿ ಶಕುನ, ಮೂಲಿಗೆ, ಸೈತಿನಾಕುಳೆಗ್ ಮಳ್ಪು ಬೊಜ್ಜ, ಸ್ವರ್ಗ ನರಕ, ದೀಪಾವಳಿ ಪರ್ಬ ಎಂಬ ಟಿಪ್ಪಣಿಗಳು ಇವೆ. ಇಲ್ಲಿ ಒಟ್ಟು ಮೂವತ್ತಾರು ಪುಟಗಳಿದ್ದು ಎರಡನೇ ಪುಟ ಮತ್ತು ಕೊನೆಯ

ಎರಡು ಪುಟಗಳನ್ನು ಖಾಲಿ ಬಿಡಲಾಗಿದೆ. ಮೊದಲ ಪುಟದಲ್ಲಿ ಜರ್ಮನ್ ಭಾಷೆಯಲ್ಲಿ Tulugeschichten ಎಂದು ಬರೆದು ಅಡಿಗೆರೆ ಹಾಕಲಾಗಿದ್ದು ಇದು ತುಳುಚರಿತ್ರೆ ಎಂಬ ಅರ್ಥ ನೀಡುತ್ತದೆ. ಹಾಗೆಯೇ 1886ಎಂಬ ಇಸವಿಯಿದೆ. (ನೋಡಿ : ಅನುಬಂಧ ೧) ಇದರ ಬರವಣಿಗೆ ಹಿಂದಿನ ಪುಸ್ತಕದಿಂದ ಮುಂದುವರೆದಂತಿದ್ದು ಮೊದಲ ಬರವಣಿಗೆಗೆ ಶೀರ್ಷಿಕೆಯಿಲ್ಲ. ಹೀಗಾಗಿ ವಿಷಯವನ್ನು ಗಮನಿಸಿ ಸಂಪಾದನೆಯ ವೇಳೆ 'ಶಕುನ' ಎಂಬ ಶೀರ್ಷಿಕೆಯನ್ನು ನೀಡಲಾಗಿದೆ. ಖಾಲಿ ಹಾಳೆಗಳ ಮೇಲೆ ಗೆರೆಗಳನ್ನು ಹಾಕದೆ ಹಾಗೆಯೇ ಬರೆಯಲಾಗಿದೆ. (ನೋಡಿ : ಅನುಬಂಧ ೧) ಪುಟವೊಂದರಲ್ಲಿ ಸರಾಸರಿ ಇಪ್ಪತ್ತು ಸಾಲುಗಳಿದ್ದು ಸಾಲಿನ ಅಂಚಿನಲ್ಲಿ ಸುಮಾರು ಮೂರು ಸೆ.ಮೀ ಜಾಗ ಬಿಡಲಾಗಿದೆ. ಪುಟದ ಮೇಲ್ಭಾಗ ಮತ್ತು ಕೆಳಭಾಗದಲ್ಲೂ ಸುಮಾರು ಒಂದೂವರೆ ಸೆ.ಮಿ ಜಾಗ ಬಿಡಲಾಗಿದೆ. ಮೊದಲನೇ ಟಿಪ್ಪಣಿ ಮುಗಿದ ಬಳಿಕ ಎರಡನೆಯ ಟಿಪ್ಪಣಿ ಪ್ರಾರಂಭವಾಗುವ ಮೊದಲು ಎರಡು ಗೆರೆಗಳಷ್ಟು ಅಂತರ ಬಿಡಲಾಗಿದೆ. ಆದರೆ ಎರಡನೇ ಟಿಪ್ಪಣಿ 'ಮೂಲಿಗೆ'ಯು ಕಾಲು ಪುಟದಲ್ಲಿ ಮುಗಿದಾಗ ಮುಂದಿನ ಜಾಗವನ್ನು ಖಾಲಿ ಬಿಟ್ಟು ನಂತರದ ಪುಟದಿಂದ ಪ್ರಾರಂಭಿಸಲಾಗಿದೆ. ಶೀರ್ಷಿಕೆಗಳನ್ನು ತುಸು ದೊಡ್ಡ ಅಕ್ಷರಗಳಲ್ಲಿ ಬರೆಯಲಾಗಿದೆ. ಮೊದಲನೆಯ ಟಿಪ್ಪಣಿಯಲ್ಲಿ ಪ್ಯಾರಾ ಇಲ್ಲ. ಆದರೆ ಮೂಲಿಗೆಯಲ್ಲಿ ಪ್ಯಾರಾ ಬಳಕೆಯಾಗಿದೆ. ಇದರ ನಂತರದ ಟಿಪ್ಪಣಿ 'ಸ್ವರ್ಗ ನರಕ' ಪ್ರಾರಂಭವಾಗುವ ಮೊದಲು ಖಾಲಿ ಜಾಗ ಬಿಟ್ಟಿಲ್ಲ. ಇಲ್ಲೂ ಪ್ಯಾರಾ ಬಳಕೆ ಕಾಣಿಸುತ್ತದೆ. 'ದೀಪಾವಳಿ'ಯಲ್ಲಿ ಲೇಖನಚಿಹ್ನೆ ಕಂಡು ಬರುತಿದ್ದು ಅಪ್ಪರ್ ಇನ್ಸರ್ಷನ್ ಮಾರ್ಕ್, ಪೂರ್ಣ ವಿರಾಮ, ಅಲ್ಪ ವಿರಾಮಗಳ ಬಳಕೆಯಿದೆ. ಇದು ಕೊನೆಗೊಂಡುದು ಪುಟದ ಮೊದಲ ನಾಲ್ಕು ಗೆರೆಗಳಲ್ಲಾದರೂ ನಂತರ ಆ ಪುಟವನ್ನಿಡೀ ಖಾಲಿ ಬಿಡಲಾಗಿದೆ. ಅಂಚಿನ ಖಾಲಿ ಸ್ಥಳಗಳಲ್ಲಿ ಹಲವೆಡೆ ಜರ್ಮನ್ ಮತ್ತು ತುಳು ಭಾಷೆಯಲ್ಲಿ ವಿವರಣೆಗಳನ್ನು ಬರೆಯಲಾಗಿದ್ದು ಇದಕ್ಕೆ ಪೆನ್ಸಿಲ್ ಬಳಸಿಕೊಳ್ಳಲಾಗಿದೆ. ಈ ವಿವರಣೆಯು ಭಾಷಾಂತರ ಹಾಗೂ ಲಿಪ್ಯಂತರಗಳನ್ನು ಒಳಗೊಂಡಿರುವುದಿದೆ. 'ಮೂಲಿಗೆ' ಎಂಬ ಶೀರ್ಷಿಕೆಯ ಪಕ್ಕದ ಖಾಲಿ ಸ್ಥಳದಲ್ಲಿ ಜರ್ಮನ್‌ನಲ್ಲಿ ಚಾರ್ಮ್, ಸ್ಪೆಲ್ ಎಂದು ಬರೆಯಲಾಗಿದೆ. 'ತೂಕು ಪಾಡುನೆ' ಎಂಬುದನ್ನು ಅಂಚಿನಲ್ಲಿ ರೋಮನ್ ಲಿಪಿಯಲ್ಲಿ 'ಹೋಮ' ಎಂಬುದಾಗಿ ಸೂಚಿಸಲಾಗಿದೆ. ದಂಡ, ತಿಮರೆ ಮೊದಲಾದವುಗಳ ಅರ್ಥವೂ ಹೀಗೆ ಕಂಡುಬರುತ್ತದೆ. ಈ ಟಿಪ್ಪಣಿಗಳನ್ನು ಮುಂದೆ ಅವರು ಅಧ್ಯಯನಕ್ಕೆ ಬಳಸಿಕೊಂಡಂತೆ ತೋರುತ್ತದೆ.

ಎರಡನೆಯ ಕಿರುಪುಸ್ತಕ [A/2564-2]ದ ಮೊದಲ ಪುಟದಲ್ಲಿ ಜರ್ಮನ್ ಭಾಷೆಯಲ್ಲಿ Geschichte der stadt Mudabidri (&Putte), Karkala 1889 ಎಂದು ಬರೆಯಲಾಗಿದ್ದು ಇದರ ಅರ್ಥ ಮೂಡಬಿದಿರೆ, ಪುತ್ತೆ ಪಟ್ಟಣಗಳ ಇತಿಹಾಸ ಎಂದಾಗುತ್ತದೆ. ಇಲ್ಲಿ ಪುತ್ತೆ ಎಂಬುದನ್ನು ಪೆನ್ಸಿಲ್‌ನಲ್ಲಿ ಬರೆಯಲಾಗಿದೆ. ಎಂ.ಶ್ರೈಬ್ಲೆ

(M.Schaible) ಎಂಬ ಮಿಶನರಿಯ ಹಸ್ತಾಕ್ಷರವಿದೆ. (ನೋಡಿ: ಅನುಬಂಧ ೧) ಮುಖಪುಟದ ಹಿಂದಿನ ಪುಟವಾದ ಎರಡನೇ ಪುಟವು ಖಾಲಿಯಿದ್ದು ಒಟ್ಟು ನಲುವತ್ತು ಪುಟಗಳಿವೆ. ಇದರಲ್ಲಿ ಅನುಕ್ರಮವಾಗಿ ಮೂಡಬೆದ್ರದ ಕಥೆ, ಪುತ್ತೆ ದೇವಸ್ಥಾನದವುಲಾ ಚೌಟೆರೆನವುಲಾ ಆದಿ ಚರಿತ್ರೆ, ಬೆದ್ರದ ಮಾರಿನವು ಎಂಬ ಟಿಪ್ಪಣಿಗಳಿವೆ. ಬಹು ಜೀರ್ಣಾವಸ್ಥೆಯಲ್ಲಿರುವ ಪ್ರತಿಯಿದು. ಇಲ್ಲೂ ಹಿಂದಿನ ಕಿರುಪುಸ್ತಕದ ಲಕ್ಷಣಗಳೇ ಇದ್ದು ಗೆರೆಗಳನ್ನು ಹಾಕದೆ ಖಾಲಿ ಹಾಳೆಗಳ ಮೇಲೆ ಹಾಗೆಯೇ ಬರೆಯುತ್ತಾ ಹೋಗಲಾಗಿದೆ. ಇದರಲ್ಲಿ ಶೀರ್ಷಿಕೆಗಳಿಗೆ ಅಡಿಗೆರೆಗಳನ್ನು ಹಾಕಲಾಗಿದೆ.

ಮೂರನೇ ಕಿರುಪುಸ್ತಕ[A/2564-3]ದಲ್ಲಿ ಒಟ್ಟು ಇಪ್ಪತ್ತೆಂಟು ಪುಟಗಳಿದ್ದು ಮೊದಲೆರಡು ಮತ್ತು ಕೊನೆಯ ಎರಡು ಹೀಗೆ ಒಟ್ಟು ನಾಲ್ಕು ಪುಟಗಳನ್ನು ರಕ್ಷಾಪುಟ ಗಳಂತೆ ಖಾಲಿ ಬಿಡಲಾಗಿದೆ. ಇಲ್ಲಿ ಶೀರ್ಷಿಕೆಗಳಿಗೆ ಅಡಿಗೆರೆ ಹಾಕಲಾಗಿದೆ. ಪುಟವೊಂದರಲ್ಲಿ ಸುಮಾರು ಹದಿನೇಳು ಸಾಲುಗಳಿದ್ದು ಪ್ರತಿ ಪುಟದಲ್ಲಿ ಪೆನ್ಸಿಲಿನಲ್ಲಿ ಗೆರೆ ಹಾಕಿ ಬರೆಯಲಾಗಿದೆ. ಸಾಲುಗಳು ಅತಿ ಚಿಕ್ಕದಾಗಿದ್ದು ಪುಟದಲ್ಲಿ ಅಂಚು ಹೆಚ್ಚಾಗಿ ಬಿಟ್ಟಿದೆ. ಹಾಗೆಯೇ ಸಾಲುಗಳ ನಡುವೆ ಅಂತರ ತುಸು ಹೆಚ್ಚಾಗಿದೆ. ಇಲ್ಲಿ ಅತ್ತೂರುದ ಸ್ತಾನ ಗರೊಡಿಡ್ ಕುಕ್ಕಿನಂದಾಯಗ್ ಕೊಡಮಂದಾಯಗ್ ಬೈದೆರ್ಲೆಗ್ ಆಪಿ ಕೋಲದ ಸಂಗತಿ, ಅತ್ತೂರು ದೇವಸ್ಥಾನ ದೇವೆರೆ ಕಥೆ. ಅಳ್ತ ದೇವೆರ್ ವಿಷ್ಣುಮೂರ್ತಿ, ನೂಲಪುಂಣಮೆದ ಕ್ರಮ ದಾನೆಂದ್'ಂಡಾ? ದೇವೆರೆ ಪೂಜೆದ ಕ್ರಮ ದಾನೆಂದ್'ಂಡಾ? ಟಿಪ್ಪಣಿಗಳಿವೆ. ಇಲ್ಲಿ ಪ್ಯಾರಾಗಳಿವೆ. ಅಕ್ಷರ ತಪ್ಪಾದಾಗ ತಿದ್ದಿ ಬರೆದುದು ಮತ್ತು ಅಕ್ಷರವನ್ನು ಹೊಡೆದು ಮೇಲ್ಭಾಗದಲ್ಲಿ ಬರೆದುದು ಕಂಡುಬರುತ್ತವೆ. ನೂಲಪುಂಣಮೆದ ಕ್ರಮ ಎಂದು ಬರೆದ ಬಳಿಕ ಪೂರ್ಣವಿರಾಮ ನೀಡಿ ಅಷ್ಟಕ್ಕೆ ಮಾತ್ರ ಅಡಿಗೆರೆ ಹಾಕಿ ನಂತರ ದಾನೆಂದ್'ಂಡಾ? ಎಂದು ಬರೆಯಲಾಗಿದೆ. ನಂತರದ ಟಿಪ್ಪಣಿಯಲ್ಲೂ ದೇವೆರೆ ಪೂಜೆದ ಕ್ರಮ ಎಂಬುದಕ್ಕೆ ಅಡಿಗೆರೆ ಹಾಕಿ ಪೂರ್ಣವಿರಾಮದ ನಂತರ ದಾನೆಂದ್'ಂಡಾ? ಎಂದು ಬರೆಯಲಾಗಿದೆ. ಇದರಲ್ಲಿ ಪ್ರಶ್ನಾರ್ಥಕ ಚಿಹ್ನೆಯ ಬಳಕೆಯನ್ನು ಕಾಣಬಹುದು. ಇಲ್ಲಿ 'ಆರತಿ' ಎಂಬುದರ ಲಿಪ್ಯಂತರ ಮತ್ತು ಅರ್ಥ ರೋಮನ್ ಲಿಪಿಯಲ್ಲಿದೆ. ಮೊದಲನೇ ಟಿಪ್ಪಣಿ ಆದ ನಂತರ ಎರಡು ಗೆರೆ ಖಾಲಿ ಬಿಟ್ಟು ಮುಂದಿನ ಟಿಪ್ಪಣಿ ಬರೆಯಲಾಗಿದೆ. ಆದರೆ ಮುಂದೆ ಟಿಪ್ಪಣಿಯೊಂದು ಮುಗಿದ ಬಳಿಕ ಹೊಸ ಪುಟದಿಂದ ಮುಂದಿನ ಟಿಪ್ಪಣಿಯನ್ನು ಪ್ರಾರಂಭಿಸಲಾಗಿದೆ.

ನಾಲ್ಕನೇ ಕಿರುಪುಸ್ತಕ[A/2564-4]ದಲ್ಲಿ ಹನ್ನೆರಡು ಪುಟಗಳಿದ್ದು ಪ್ರತಿ ಪುಟದಲ್ಲಿ ಪೆನ್ಸಿಲಿನಲ್ಲಿ ಗೆರೆ ಹಾಕಿ ಬರೆಯಲಾಗಿದೆ. ಮೊದಲ ಮತ್ತು ಕೊನೆಯ ಎರಡೆರಡು ಪುಟಗಳನ್ನು ರಕ್ಷಾಪುಟಗಳಂತೆ ಖಾಲಿ ಬಿಡಲಾಗಿದೆ. ಇಲ್ಲಿ ಮೊದಲ ಪುಟದ ಬರವಣಿಗೆಗೆ ಶೀರ್ಷಿಕೆಯಿಲ್ಲ. ಆದರೆ ವಿಷಯ ಮತ್ತು ಸಂಬಂಧಿಸಿದ ಇತರ ಬರವಣಿಗೆ ಗಳನ್ನು ಗಮನಿಸಿ ಸಂಪಾದನೆಯ ವೇಳೆ ಚೌತಿದ ಕ್ರಮ ಎಂದು ಹೆಸರು ನೀಡಲಾಗಿದೆ.

ನಂತರದ ಪುಟದಲ್ಲಿ 'ಸೋಂಕು ಪ್ರಕಾರ ಆದ್ ಪೋಡಿದ್ ಪೋಯಿನಾಯಗ್ ಭಟ್ಟೆ ಬತ್ತ್‌ದ್ ಶೊರಕ್ ದೆಪ್ಪುನೆತ್ತ ಕ್ರಮ' ಎಂಬ ಶೀರ್ಷಿಕೆ ನೀಡಿ ಒಂದು ಪುಟವನ್ನು ಖಾಲಿ ಬಿಡಲಾಗಿದೆ. ಮುಂದಿನ ಪುಟದಲ್ಲಿ 'ಸುಬ್ರಾಯ ದೇವೆರೆ ಸ್ಥಾನೊಡು ಆಪಿ ಸೃಷ್ಟಿದ ಕ್ರಮೊ' ಎಂದು ಟಿಪ್ಪಣಿಯ ಶೀರ್ಷಿಕೆ ಬರೆದು ಅಡಿಗೆರೆ ಹಾಕಲಾಗಿದೆ. ಇಲ್ಲಿ ಪುಟವೊಂದಕ್ಕೆ ಸರಾಸರಿ ಹದಿನೈದು ಗೆರೆಗಳಿವೆ, ಪ್ಯಾರಾ ಬಳಕೆಯಿದೆ.

ಐದನೇ ಕಿರುಪುಸ್ತಕ[A/2564-5]ದಲ್ಲಿ ಹಿಂದಿನ ಪುಸ್ತಕದ ಕೊನೆಯ ಬರವಣಿಗೆಯಾದ ಸುಬ್ರಾಯ ದೇವೆರೆ ಸ್ಥಾನೊಡು ಆಪಿ ಸೃಷ್ಟಿದ ಕ್ರಮೊ ಮುಂದುವರೆಯುತ್ತದೆ. ನಂತರ ದೇವೇಂದ್ರ ಕಥೆ, ಕಾಮಾಕ್ಷಿ ಗುಡಿ, ಮನ್ನಾರ ಗುಡಿ, ಪಾನಕ ನರಸಿಂಹ ಗುಡಿ, ತಿರುಪತಿ ಗುಡಿ ಟಿಪ್ಪಣಿಗಳು ಇವೆ. ಇವುಗಳನ್ನು ಅಧ್ಯಯನದ ಸಂದರ್ಭದಲ್ಲಿ ಗಮನಿಸಲಾಗಿದ್ದು ಇಲ್ಲಿ ಪ್ರಕಟಣೆಗೆ ಆಯ್ಕೆ ಮಾಡಿಕೊಳ್ಳಲಾಗಿಲ್ಲ. ಇಲ್ಲಿ ಇಪ್ಪತ್ತು ಪುಟಗಳಿದ್ದು ಮೊದಲ ಮತ್ತು ಕೊನೆಯ ಎರಡು ಪುಟಗಳನ್ನು ಖಾಲಿ ಬಿಡಲಾಗಿದೆ. ಮೊದಲ ಟಿಪ್ಪಣಿಯ ಬಳಿಕ ಎರಡು ಗೆರೆ ಬಿಟ್ಟು ದೇವೇಂದ್ರ ಕಥೆ ಇದೆ. ಇಲ್ಲೂ ಪ್ಯಾರಾ ಬಳಕೆಯಿದ್ದು ಪುಟದಲ್ಲಿ ಸರಾಸರಿ ಹದಿನೇಳು ಸಾಲುಗಳಿವೆ. ಖಾಲಿ ಪುಟಗಳಲ್ಲಿ ಗೆರೆಗಳನ್ನು ಹಾಕದೇ ಬರೆಯಲಾಗಿದೆ, ಪ್ರತಿ ಟಿಪ್ಪಣಿಯ ನಂತರ ಎರಡು ಗೆರೆಗಳಷ್ಟು ಅಂತರ ಬಿಡಲಾಗಿದೆ ಹಾಗೂ ಶೀರ್ಷಿಕೆಗಳಿಗೆ ಅಡಿಗೆರೆ ಹಾಕಲಾಗಿದೆ.

ಆರನೇ ಕಿರುಪುಸ್ತಕ[A/2564-6]ದಲ್ಲಿ Bappanad ಎಂಬ ಜರ್ಮನ್ ಭಾಷೆಯ ಶೀರ್ಷಿಕೆ ಮೊದಲ ಪುಟದಲ್ಲಿದ್ದು ಉಳಿದಂತೆ ಮೊದಲ ಮತ್ತು ಕೊನೆಯ ಎರಡು ಪುಟಗಳು ಖಾಲಿಯಿವೆ. ಸರಾಸರಿ ಇಪ್ಪತ್ತೆರಡು ಸಾಲುಗಳಿವೆ. ಇಲ್ಲಿ ಒಟ್ಟು ಮೂವತ್ತೆರಡು ಪುಟಗಳಿದ್ದು ಮೊದಲಿಗೆ ಬಪ್ಪನಾಡ್ ಉಳ್ಳಾಳ್ದಿನ, ಬೊಕ್ಕ ಬಿತ್ತ್‌ಲ್‌ದ ದೈಯೊಂಗುಳೆನವು ಮೂಲಚರಿತ್ರೆ ಇದೆ. ಇಲ್ಲಿ ಬಿತ್ತ್‌ಲ್‌ದ ದೈಯೊಂಗುಳೆನವು ಮೂಲಚರಿತ್ರೆ ಎಂಬುದಕ್ಕೆ ಮಾತ್ರ ಅಡಿಗೆರೆಯಿದೆ. ನಂತರ ಮುಲ್ಕಿ ಬಪ್ಪನಾಡ್ ದೈವಸ್ಥಾನದ ಮೂಲಚರಿತ್ರೆ ಎಂಬ ಟಿಪ್ಪಣಿಯಿದೆ. ಇಲ್ಲಿ ಮುಲ್ಕಿ ಎಂಬುದನ್ನು ಮೊದಲ ಸಾಲಿನಲ್ಲಿ ಬರೆದು ಅಡಿಗೆರೆ ಹಾಕಿ ನಂತರದ ಸಾಲಿನಲ್ಲಿ ಬಪ್ಪನಾಡ್ ದೇವಸ್ಥಾನದ ಮೂಲಚರಿತ್ರೆ ಎಂಬುದನ್ನು ಬರೆದು ಅಡಿಗೆರೆ ಹಾಕಲಾಗಿದೆ. ಬಳಿಕ ಉಂಡಾರ್ ದೇವಸ್ಥಾನದ ಚರಿತ್ರೆ ಎಂಬ ಟಿಪ್ಪಣಿಯಿದ್ದು ಈ ಶೀರ್ಷಿಕೆಯೂ ಅಡಿಗೆರೆಯನ್ನು ಹೊಂದಿದೆ. ಕೊನೆಯಲ್ಲಿ ಕನ್ನಡ ಎಂಬ ಶೀರ್ಷಿಕೆ ಬರೆದು ಅಡಿಗೆರೆ ಹಾಕಲಾಗಿದ್ದು ಇದರಲ್ಲಿ ೧೮೮೩ನೇ ಇಸವಿಯ ಖಾನೇಷುಮಾರಿ ಮಾಹಿತಿಯೊಂದನ್ನು ಪ್ರಶ್ನೋತ್ತರ ರೂಪದಲ್ಲಿ ನೀಡಲಾಗಿದೆ. ಈ ಭಾಗವು ತ್ರುಟಿತಗೊಂಡಿದೆ. ಇಲ್ಲಿ ಖಾಲಿ ಪುಟಗಳಲ್ಲಿ ಗೆರೆಗಳನ್ನು ಹಾಕದೆ ಹಾಗೆಯೇ ಬರೆಯಲಾಗಿದೆ.

ಪತ್ರಾಗಾರದಲ್ಲಿ ಪ್ರಾರಂಭದಿಂದಲೂ ಇದ್ದ ಪ್ರತಿ [A/1441]. ಇದರಲ್ಲಿ ಮುದ್ರಿತ ನೀಲಿ ಗೆರೆಗಳಿದ್ದು ಪುಟವೊಂದರಲ್ಲಿ ಸರಾಸರಿ ಇಪ್ಪತ್ತು ಸಾಲುಗಳಿವೆ. ಸಾಲುಗಳ

ಅಂಚಿನಲ್ಲಿ ಸುಮಾರು ಒಂದೂವರೆ ಸೆ.ಮಿಯಷ್ಟು ಸ್ಥಳ ಬಿಡಲಾಗಿದೆ. ಪ್ರತಿ ಪುಟದ ಮೇಲ್ಭಾಗ ಮತ್ತು ಕೆಳಭಾಗಗಳಲ್ಲೂ ಸ್ಥಳವನ್ನು ಬಿಡಲಾಗಿದೆ. ಪ್ರತಿ ಪುಟವೂ ೨೦ಸೆ.ಮಿ ಉದ್ದ ಮತ್ತು ೧೬ ಸೆ.ಮಿ ಅಗಲವಿದೆ. ಪುಟಗಳನ್ನು ಹೊಲಿದು ಜೋಡಿಸಲಾಗಿದೆ. ಸುಮಾರು ಮೂರು ಕಿರುಪುಸ್ತಕಗಳನ್ನು ಹೊಲಿದು ಬೈಂಡ್ ಮಾಡಿರುವುದರಿಂದಾಗಿ ಒಂದು ದೊಡ್ಡ ಪುಸ್ತಕದ ರೂಪ ಪಡೆದಿದೆ. ಪುಸ್ತಕದಲ್ಲಿ ಬಳಕೆಯಾಗಿರುವ ನೀಲಿ ಶಾಯಿ ಕಾಲಮಾನದ ಹಿನ್ನೆಲೆಯಲ್ಲಿ ಮಸುಕಾಗಿದೆ. ಮೊದಲ ಪುಟದಲ್ಲಿ ಅನುಕ್ರಮಣಿಕೆ ಕಂಡುಬರುತ್ತದೆ. ಇದರಲ್ಲಿ ೨೫೦ ಪುಟಗಳವರೆಗೆ ೩೩ ವಿಷಯಗಳ ಪಟ್ಟಿಯನ್ನು ಮಾತ್ರ ನೀಡಲಾಗಿದೆ. ಇನ್ನಿತರ ವಿಷಯಗಳ ನಮೂದು ಮೊದಲ ಪುಟದಲ್ಲಿಲ್ಲ. ಬಾಸೆಲ್ ಮಿಶನರಿಗಳ ಸಂಗ್ರಹದ ಈ ಪುಸ್ತಕವು ತುಳು ಸಣ್ಣ ಕತೆಯ ಮೂಲಕ ಪ್ರಾರಂಭ ಗೊಳ್ಳುವುದರಿಂದ ಹಾಗೂ ಮುಂದಕ್ಕೆ ಸಣ್ಣಕತೆಗಳಿರುವುದರಿಂದ ಪ್ರಾರಂಭದ ಪುಟದಲ್ಲಿ ಕಿನ್ಯಕತೆಕ್ಕುಲು (ಸಣ್ಣಕತೆಗಳು) ಎಂದೂ ಗುರುತಿಸಲಾಗಿದೆ. ಇವೆರಡೂ ಪುಸ್ತಕಗಳಲ್ಲಿ ಒಂದೇ ಟಿಪ್ಪಣಿ ಬಂದಿರುವ, ಪುನರಾವರ್ತನೆಯಾಗಿರುವ ಉದಾಹರಣೆಗಳಿಲ್ಲವಾದರೂ ಇದರಲ್ಲಿರುವ ಹಲವು ಟಿಪ್ಪಣಿಗಳು ಕಿರುಪುಸ್ತಕದಲ್ಲಿರುವ ಟಿಪ್ಪಣಿಗಳೊಂದಿಗೆ ಗಾತ್ರ, ವಸ್ತು, ಭಾಷೆ, ಶೈಲಿ, ನಿರೂಪಣೆಯ ದೃಷ್ಟಿಯಿಂದ ಸಾತತ್ಯವನ್ನು ಹೊಂದಿವೆ. ಕಾಲದ ದೃಷ್ಟಿಯಿಂದ ಇದು ಎರಡು ಮೂರು ದಶಕಗಳ ನಂತರದ್ದಾಗಿರುವ, ಬಹುತೇಕ ಮೊದಲ ಮಹಾಯುದ್ಧದ ನಿಕಟ ಪೂರ್ವ ಸಂದರ್ಭದ ದಾಖಲಾತಿಯಾಗಿರುವ ಸಾಧ್ಯತೆಯಿದೆ.

ಈ ಪತ್ಯದಿಂದ ಬಡವೆದಿ ಮುಂಡೆನವುಲಾ ಚೆನ್ನನಾಯಿಳೆನ್ ಕೆರಿ ಜೋಕುಳೆನವುಲಾ, ದುರ್ಬುದ್ಧಿದ ಕಂಡಣ್ಯನ್ ಪ್ರೀತಿ ಮಳ್ತಿ ಬೊಡೆದಿನವು, ಕೃಷ್ಣರಾಯರೆ ಕಾಲೊಡು ನಡತಿ ಕಥೆ, ಜೈನೆರ್ ಇರ್ಲ್‌ದಾಯೆ ಉಣ್ಬುಜೆರ್ ಇನ್ಪಿ ಕಾರಣದ ಕಥೆ, ಶಾಪ ದೀಪಿನಿ ಅತ್ತ್‌ಡ ದೀವೊಣುನಿ, ಪ್ರಮಾಣ ಮಳ್ಪುನಿ, ಆಜ (ಆಗಿನ) ಪಾಡುನಿ ಅತ್ತ್‌ಡ ಪಾಡೊಣುನಿ, ಶಾಪ ಪಿರಿಪುನಿ ಅತ್ತ್‌ಡ ಆಜ ಪಿರಿಪುನಿ, ಒಯಿಳ್ ಕೊರ್ಪಿನಿ ಅಂದ್‌ಂಡ ದಾನೆ?, ಒಯಿಳ್ ಪಿರಿಪುನಿ ಯೆಂಚ?, ಮಾಟ ಮಳ್ಪುನಿ, ಮಂತ್ರ, ತಂತ್ರ, ಜಕ್ಕಿನಿನ್ ಬುಡುಪಾವುನು ಯೆಂಚ, ಸೈತಿನಾಕುಳೆಗ್ ಮದ್‌ಮೆ ಮಳ್ಪುನಿ, ತಿರ್ಪತಿ ಯಾತ್ರೆ, ರಾಕ್ಷಸನ್ ಸಂಹಾರ ಮಳ್ತಿನವು, ಒಡಿಪುದ ಪರಿಯಾಯ ಅಂದ್‌ಂಡ ದಾನೆ?, ಮಾರಿ ದೇರುನಿ ಅಂದ್‌ಂಡ ದಾನೆ?, ಅಳಿಯ ಸಂತಾನ ಆಯಿನಿ ಯೆಂಚ?, ತುಳು ಜನತ ಮದ್‌ಮೆ, ತುಳು ಜನತ ಬೊಜ್ಜ, ದುಷ್ಟೆರೆ ಸ್ವಭಾವ ಯೆಂಚಿತ್ತಿನವು, ಕಪ್ಪೆದ ಕಥೆ, ಕುದುಕನವು ಕಥೆ, ಕಪ್ಪೆ ಪಂಡಿತನ ಮಳ್ತಿನವು, ನರಮಾನ್ಯಗ್ ಭೂತ ಪತ್ತುನಿ ಜರ್ಪುನಿ ಅಂದಾ?, ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ, ಭೂತೊಳೆಗ್ ಕೋಲ ಕಟ್ಟುನಿ ಯೇರ್ ಇವುಗಳನ್ನು ಆಯ್ದುಕೊಳ್ಳಲಾಗಿದೆ.

ಹಾಗೆಯೇ ಇಲ್ಲಿ ಅನುಕ್ರಮಣಿಕೆ, ಪುಟ ಸಂಖ್ಯೆಯನ್ನು ನೀಡಿದ ಬಗೆಯನ್ನು ಗಮನಿಸಿದರೆ ಇದು ಅಚ್ಚಿಗೆ ಹೋಗುವ ಮೊದಲಿನ ಸಿದ್ಧತೆಯಂತೆ ಕಾಣುತ್ತದೆ. ಟಿಪ್ಪಣಿಗಳ

ಒಳಗೂ ಅಂತಹಾ ಸೂಚನೆಯಿದೆ. ಉದಾಹರಣೆಗೆ 'ಬಡವೆದಿ ಮುಂಡೆನವುಲಾ ಚೆನ್ನನಾಯಿಳೆನ್ ಕೆರಿ ಜೋಕುಳೆನವುಲಾ' ಎಂಬ ಟಿಪ್ಪಣಿಯ ಕೊನೆಯಲ್ಲಿ "ಓದುನ ಯೆನ ಪ್ರಿಯರೆ" ಎಂಬ ಸಂಬೋಧನೆಯನ್ನು ಕಾಣಬಹುದು.

ಈ ಪುಸ್ತಕದಲ್ಲಿರುವ ಧರ್ಮಸಂಬಂಧಿ ಇತರ ಟಿಪ್ಪಣಿಗಳು ಸಂಬಂಧಕ್ಕೆ ಒಂದು ಸ್ಪಷ್ಟತೆಯನ್ನು ಒದಗಿಸುತ್ತದೆ. ಉದಾಹರಣೆಗೆ ಮಣಿಪುಂಜ(ರಕ್ಷಣೆದ ಮಾರ್ಗ), ಸುವಾರ್ತೆ, ಯೇಸುನು ನಂಬುಲ, ಒರಿಯೇ ಮಧ್ಯಸ್ಥಗಾರೆ, ಪರಮಗುರು, ರಡ್ಡ್ ಮಾರ್ಗ, ಗುಣಿತೊಣಿಯೆರೆ ತಕ್ಕದವು, ನರಮಾನ್ಯೆರೆಗ್ ಅಗತ್ಯದವು ಒಂಜೇ, ಜೀವ ಉಪ್ಪು ನೀರ್, ದೇವೆರ್, ಮುಖ್ಯಪ್ರಶ್ನೆಗ್ ಉತ್ತರ, ಈ ಸಮಾಧಾನೊಡು ಸೈವನಾ?, ನಡಪಂದಿ ರುಪಾಯಿ, ಬಲೆಲಾ ಗೂಡುಲಾ ಉಲ್ಲುಲಾ, ಛತ್ರ, ಸಂತೆ, ನರಮಾನಿ ಪಾಪ ಮಳ್ಪೆರೆ ಕಾರಣ ಇತ್ತಿನಾಯೆ ಆದ್ ದಾಯೆ ಉಂಡಾತೆ?, ಮೂರ್ತಿ ದೇವೆರ್ ಅತ್ತ್, ನುಡಿ ನಡತೆಗ್ ತಕ್ಕದ ಕನ್ನಡಿ, ಗ್ರಹರಾಶಿ ನಕ್ಷತ್ರೊಳೆ ಫಲೊಕುಳು, ಅದೃಷ್ಟದವು, ದೇವೆರ್ ಬೇತೆ ನರಮಾನ್ಯಡುಪ್ಪು ಜೀವಾತ್ಮ ಬೇತೆ, ಅನೇಕ ಜಲ್ಮೊಳು ಇಜ್ಜಿ, ಪಾಪ ಮಳ್ಪುನೆಕ್ ದೇವೆರ್ ಕಾರಣ ಅತ್ತ್, ಕ್ರೈಸ್ತಮತೊನುಲಾ ಹಿಂದು ಮತೊನುಲಾ ಪರೀಕ್ಷೆ ಮಳ್ತಿನವು, ಪಾತೆರೊಳುಲಾ ಪ್ರಾಸುಳುಲಾ, ದೇವೆರೆ ವಾಕ್ಯದ ಪ್ರಶ್ನೆಳು ಇಂತಹಾ ಟಿಪ್ಪಣಿಗಳನ್ನು ಗಮನಿಸಬಹುದು. ಇವುಗಳನ್ನು ಪುಟಸಂಖ್ಯೆಯೊಂದಿಗೆ ಅನುಕ್ರಮಣಿಕೆಯಲ್ಲಿ ನೀಡಿದೆ. ನಂತರದ ಶೀರ್ಷಿಕೆಗಳನ್ನು ಅನುಕ್ರಮಣಿಕೆಯಲ್ಲಿ ನೀಡಿಲ್ಲ. ಇವೆಲ್ಲವನ್ನೂ 'ಬಾಸೆಲ್ ಮಿಶನರಿಗಳ ಕ್ರೈಸ್ತ ಧಾರ್ಮಿಕ ತುಳು ಟಿಪ್ಪಣಿಗಳು' ಎಂಬ ಹೆಸರಿನಲ್ಲಿ ಇದೇ ಸಂಪಾದಕರು ಸಂಕಲಿಸಿದ್ದು ಪ್ರತ್ಯೇಕವಾಗಿ ಮುದ್ರಣಗೊಳ್ಳಲಿದೆ.

೧೮೪೧ರಲ್ಲಿ ಬಲ್ಮಠದಲ್ಲಿ ಸ್ಥಾಪನೆಯಾದ 'ಬಾಸೆಲ್ ಮಿಶನ್ ಪ್ರೆಸ್' (ಬಿ.ಎಂ.ಪಿ) ೧೯೭೭ರಲ್ಲಿ ಅದೇ ಆವರಣದಲ್ಲಿದ್ದ ನೇಯ್ಗೆ ಕಾರ್ಖಾನೆ ಕಟ್ಟಡಕ್ಕೆ ಸ್ಥಳಾಂತರಗೊಂಡು 'ಬಲ್ಮಠ ಮಾಸ್ಟರ್ ಪ್ರೆಸ್' ಎಂಬ ಹೆಸರಿನೊಂದಿಗೆ ಕಾರ್ಯ ನಿರ್ವಹಿಸತೊಡಗಿತು. ಸ್ಥಳಾಂತರಗೊಂಡಾಗ ಮುದ್ರಣಾಲಯದ ಕಛೇರಿ ದಾಖಲೆಗಳು, ಕಾಗದ ಪತ್ರಗಳು, ಪುಸ್ತಕಗಳು, ಹಸ್ತಪ್ರತಿಗಳು ಪತ್ರಾಗಾರಕ್ಕೆ ವರ್ಗಾವಣೆಗೊಂಡಿತು. ಆ ಮುದ್ರಣಾಲಯ ಇಂದು 'ಬಲ್ಮಠ ಇನ್‌ಸ್ಟಿಟ್ಯೂಟ್ ಆಫ್ ಪ್ರಿಂಟಿಂಗ್ ಟೆಕ್ನಾಲಜಿ' ಎಂಬ ಹೆಸರಿನಿಂದ ಮುನ್ನಡೆಯುತ್ತಿದೆ. ಪತ್ರಾಗಾರದಲ್ಲಿ ಸಂರಕ್ಷಿಸಲ್ಪಟ್ಟ, ಮುದ್ರಣ ಸಂಸ್ಥೆಯ ಕಛೇರಿ ದಾಖಲೆಗಳೊಂದಿಗೆ ಸೇರಿಹೋಗಿದ್ದ ಪ್ರಸ್ತುತ ಹಸ್ತಪ್ರತಿಯ ಲಕ್ಷಣವನ್ನು ಗಮನಿಸಿದರೆ ಹಾಳಾಗಿಹೋಗುತ್ತಿರುವ ಬರಹವನ್ನು ಸಂರಕ್ಷಣೆಯ ದೃಷ್ಟಿಯಿಂದ ಪ್ರತಿ ಮಾಡಿ ಇಡುವ ಅಥವಾ ಧರ್ಮಪ್ರಚಾರಕರಿಗಾಗಿ ಸೀಮಿತ ವ್ಯಾಪ್ತಿಯ ಪ್ರಕಟಣೆಗೆ ಅನುವಾಗುವಂತೆ ಪ್ರತಿಮಾಡುವ ಅಂದಿನ ವಿದ್ಯಮಾನಗಳಿಗೆ ಅನುಗುಣವಾಗಿರುವಂತೆ ತೋರುತ್ತದೆ. ಹೀಗೆ ಪ್ರತಿ ಮಾಡುವಲ್ಲಿ ಸಂರಕ್ಷಣೆಯ, ವೈಯಕ್ತಿಕ ಮಾಹಿತಿ ಸಂಗ್ರಹಣೆಯ ಅಥವಾ ಮುದ್ರಣದ ಸಿದ್ಧತೆಯ ಕಾರಣಗಳಿರುವ ಸಾಧ್ಯತೆಗಳಿದ್ದು ಹಳೆಯ ಪುಸ್ತಕಗಳಿಂದ

ಪ್ರತಿ ಮಾಡಿರುವಂತೆಯೂ ತೋರುತ್ತದೆ. ಸಹಜವಾಗಿಯೇ ಇದು ಕಾಲದ ಹೊಡೆತಕ್ಕೆ ಸಿಕ್ಕಿ ನಾಶವಾಗಿ ಹೋಗುತ್ತಿರುವ ಕಿರುಪುಸ್ತಕಗಳಿಂದ ಆಯ್ದು ವಿಷಯಗಳ ಬರವಣಿಗೆಯಾಗಿರಬಹುದು ಅಥವಾ ಮುದ್ರಣಕ್ಕೆ ಅನುವು ಮಾಡಿಟ್ಟು ಸೂಕ್ತ ಸಮಯಕ್ಕೆ ಕಾದಿರಬಹುದು, ಆದರೆ ಪ್ರಕಟಣೆ ಸಾಧ್ಯವಾಗದೇ ಹೋಗಿರಬಹುದು.

ಕ್ಷೇತ್ರಕಾರ್ಯ ಮೂಲಕ ಮಾಹಿತಿ ಸಂಗ್ರಹಿಸಿ ಪುಸ್ತಕ ರೂಪದಲ್ಲಿ ಮುದ್ರಿಸಿ ನಿರ್ದಿಷ್ಟ ವಲಯದೊಳಗೆ ಹಂಚುತ್ತಿದ್ದುದು ಅಂದಿನ ಒಂದು ಪ್ರಕ್ರಿಯೆಯಾಗಿತ್ತು. ಇಂದು ನಮಗೆ ಮುದ್ರಿತ ರೂಪದಲ್ಲಿ ದೊರಕುವ ಎ.ಮ್ಯಾನರ್‌ರ ೧೮೮೬ರ 'ಪಾಡ್ದನೊಳು' ಪುಸ್ತಕವನ್ನು ಕೂಡಾ ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಅದರದೇ ಮುನ್ನುಡಿಯಲ್ಲಿ ಹೇಳಿರುವಂತೆ ಆಗ *'ಮಿಶನ್ ಕಾರ್ಯಕರ್ತರಿಗಾಗಿ' 'ಈ ಕತೆಗಳಿಗೆ ವಿಶಾಲವಾದ ಪ್ರಕಟಣೆಯನ್ನು ನೀಡುವ ಯಾವುದೇ ಉದ್ದೇಶವಿಲ್ಲದೆ' 'ಸಣ್ಣ ಸಂಖ್ಯೆಯ ಪ್ರತಿಗಳನ್ನು'* ಮುದ್ರಿಸಲಾಗಿತ್ತು. ಇದರ ಪ್ರಕಟಣೆಯ ಉದ್ದೇಶವೂ ಸ್ಪಷ್ಟವಾಗಿದ್ದು ಮೆನ್ನರ್ ಹೇಳುವ ಮಾತುಗಳನ್ನು ಇಲ್ಲಿ ನೋಡಬಹುದು:

> *"ವೈಜ್ಞಾನಿಕ ದೃಷ್ಟಿಕೋನದಿಂದ ಈ ಕತೆಗಳೆಲ್ಲವೂ ಅಂತಹಾ ಬೆಲೆಯುಳ್ಳದ್ದಲ್ಲ, ಆದರೆ ಅವು ಭೂತಾರಾಧನೆಯ ಒಳನೋಟವನ್ನು ನೀಡಲು ಮತ್ತು ಮಿಶನ್ ಕಾರ್ಯಕರ್ತನನ್ನು ಈ ವರ್ಗದ ಜನರ ಆಲೋಚನೆಗಳ ಒಳನೋಟ ಪಡೆಯಲು, ಅವರ ಯೋಚನಾ ಸರಣಿಯನ್ನು ಅನುಸರಿಸಲು ಶಕ್ತನನ್ನಾಗಿಸುತ್ತದೆ. ಅದೇ ವೇಳೆಗೆ ಅವು ಆತನನ್ನು ಭಾಷೆಯ ಹೊಸ ಪದಗಳಿಗೆ, ವಾಕ್ಸಂಪ್ರದಾಯ ಮತ್ತು ನುಡಿಗಟ್ಟುಗಳಿಗೆ ತೆರೆದಿಡುತ್ತವೆ. ಬೇರಾವುದೂ ಭೂತಾರಾಧಕರ ಸಂಪ್ರದಾಯ, ಭಾಷೆ ಮತ್ತು ಧರ್ಮದೊಂದಿಗೆ ಅಷ್ಟು ಸಮೀಪದ ಪರಿಚಯವನ್ನು ನೀಡಲಾರವು... ಮಿಶನರಿಗಳಿಗೆ ಮತ್ತು ಮಿಶನ್ ಕಾರ್ಯಕರ್ತರಿಗಾಗಿ ಮಾತ್ರ ವೆಚ್ಚದ ಬೆಲೆಯಲ್ಲಿ ಹೊಂದಿದ್ದೇವೆ ... ಕ್ರೈಸ್ತರಲ್ಲದವರಿಗೆ ಎಂತಹುದೇ ಸಂದರ್ಭದಲ್ಲೂ ಇವುಗಳನ್ನು ಬಾಡಿಗೆಗೆ ನೀಡುವುದು ಅಥವಾ ಮಾರಾಟ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ... ಹಾಳಾಗಿರದ 'ಸೆಕೆಂಡ್ ಹ್ಯಾಂಡ್' ಪ್ರತಿಗಳನ್ನು ಅರ್ಧ ಬೆಲೆಗೆ ಪುನಃ ಖರೀದಿಸಲಾಗುವುದು... ಈ ಕತೆಗಳ ಸಂಕಲನವನ್ನು 'ಬುಕ್ ಡೆಪಾಸಿಟರಿ'ಗೆ ಯಾವತ್ತೂ ನೀಡಬಾರದು... ಕಡ್ಡಾಯವಾಗಿ ಜಿಲ್ಲಾ ಮುಖ್ಯಸ್ಥರು ಪ್ರತಿನಿಧಿಸುವ ತುಳು ಮಿಶನರಿಗಳ ಸ್ವತ್ತಾಗಿ ಉಳಿಯಬೇಕು.."*
> (preface, ಪಾಡ್ದನೊಳು; ೧೮೮೬; ಮೂಲ: ಇಂಗ್ಲಿಷ್– ಅನುವಾದ: ಸಂ.).

ಇಲ್ಲಿ ಸಾಮಾನ್ಯವಾಗಿ ಒಂದರಿಂದ ಆರು ಪುಟಗಳ ವ್ಯಾಪ್ತಿಯೊಳಗೆ ನಿರ್ದಿಷ್ಟ

ವಿಷಯವೊಂದನ್ನು ಶೀರ್ಷಿಕೆಯೊಂದು ಒಳಗೊಳ್ಳುತ್ತದೆ, ಟಿಪ್ಪಣಿಯ ಸ್ವರೂಪ ಪಡೆದುಕೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಸಂಪಾದನೆಯ ವೇಳೆ ಇವುಗಳನ್ನು 'ಟಿಪ್ಪಣಿಗಳು' ಎಂದು ಕರೆಯಲಾಗಿದೆ. ಕೆಲವೊಂದು ಮಾತ್ರ ಹತ್ತಕ್ಕೂ ಹೆಚ್ಚು ಪುಟಗಳನ್ನು ಹೊಂದಿವೆ. 'ಪುತ್ತೆ ದೇವಸ್ಥಾನದವುಲಾ ಚೌಟೆರೆನವುಲಾ ಆದಿ ಚರಿತ್ರೆ', 'ಸರ್‌ಕಾರೊಡು ಮಳ್ಪುವ ವ್ಯಾಜ್ಯದ ಫಲ'ದಂಥ ಕೆಲವೊಂದು ಬರವಣಿಗೆಗಳು ಗಾತ್ರದ ದೃಷ್ಟಿಯಿಂದ ಹಿರಿದಾಗಿದ್ದರೂ ನಿರೂಪಣೆ ಉದ್ದೇಶಗಳ ಹಿನ್ನೆಲೆಯಲ್ಲಿ ಅದೇ ಸ್ವರೂಪ ಹೊಂದಿವೆ. 'ಟಿಪ್ಪಣಿ ಇತ್ತ್ಂಡ ಅಪ್ಪಣೆ ಅರ್ತ ಆಪುಂಡು'(ಟಿಪ್ಪಣಿ ಇದ್ದರೆ ಅಪ್ಪಣೆ ಅರ್ಥವಾಗುತ್ತದೆ) ಎಂಬ ಹೇಳಿಕೆಯೂ ತುಳುನಾಡಿನಲ್ಲಿ ಪ್ರಚಲಿತದಲ್ಲಿದೆ ಎಂಬುದು ಗಮನಾರ್ಹ (ನೋ.ತುಳು ನಿಘಂಟು, ಪು.೧೩೫೬)

ಪ್ರಸ್ತುತ ಸಂಪಾದನೆಯ ವೇಳೆಗೆ ಮುಂದಿನ ಅಧ್ಯಯನಕಾರರಿಗೆ ಅನುಕೂಲವಾಗುವಂತೆ ವಿಭಿನ್ನ ನೆಲೆಗಳಡಿಯಲ್ಲಿ ವಿಷಯವಾರು ವಿಭಾಗೀಕರಣ ಮಾಡಿಕೊಳ್ಳಲಾಗಿದ್ದು ತತ್ಸಂಬಂಧೀ ಉಪಶೀರ್ಷಿಕೆಗಳನ್ನು ಪರಿವಿಡಿಯಲ್ಲಿ ನೀಡಲಾಗಿದೆ. ಮೂಲದ ಅನುಕ್ರಮಣಿಕೆಯನ್ನು ಇಲ್ಲಿ ಅನುಸರಿಸಲಾಗಿಲ್ಲ. ಈ ಮರುವಿಂಗಡಣೆಗಳನ್ನು ಸ್ಥೂಲವಾಗಿ ಮಾಡಿಕೊಳ್ಳಲಾಗಿದ್ದು ಈ ಟಿಪ್ಪಣಿಗಳು ಇನ್ನೂ ಕೆಲವು ಶೀರ್ಷಿಕೆಗಳಡಿಯಲ್ಲಿ ಬರಬಹುದಾದ ಗುಣ ಹೊಂದಿವೆ. ಎರಡೂ ಪತ್ಯಗಳ ಭಾಷೆ, ವಿಷಯ ನಿರೂಪಣೆ, ವಸ್ತುವ್ಯಾಪ್ತಿ, ಶೈಲಿಗಳಿಗಿರುವ ಸಾಮ್ಯತೆಯ ಹಿನ್ನೆಲೆಯಲ್ಲಿ ಇವೆರಡೂ ಪತ್ಯಗಳಿಂದ ಆಯ್ದ ಟಿಪ್ಪಣಿಗಳನ್ನು ಇಲ್ಲಿ ಒಂದೆಡೆಗೆ ತರಲಾಗಿದೆ. ಹೀಗೆ ಒಟ್ಟಿಗೆ ನೀಡಲಾಗಿದ್ದರೂ ಅವುಗಳ ಸ್ವಂತಿಕೆಗೆ ಭಂಗ ಬಂದಿಲ್ಲ, ಅವು ಸ್ವಯಂಪೂರ್ಣವಾಗಿಯೂ ಇರುವಂತೆ ಅಲ್ಲಲ್ಲೇ ಸಂಪಾದಕರ ಪೂರಕ ಟಿಪ್ಪಣಿಗಳು ಮತ್ತು ಮೂಲದ ಸಂಖ್ಯೆಗಳು ಸಹಾಯವನ್ನು ಮಾಡುತ್ತವೆ. ಇಲ್ಲಿ ಮೂಲದ ಪುಟಸಂಖ್ಯೆ ಮತ್ತು ಶೀರ್ಷಿಕೆ ಸಂಖ್ಯೆಗಳ ಬಗ್ಗೆ ಸ್ಪಷ್ಟತೆಯಿಲ್ಲದೆ ಇರುವುದರಿಂದ ಪತ್ರಾಗಾರದ ಸಂರಕ್ಷಣೆಯ ದೃಷ್ಟಿಯಿಂದ ನೀಡಿರುವ ಪುಟಸಂಖ್ಯೆಗಳನ್ನು ಉಲ್ಲೇಖಿಸಲಾಗಿದೆ. ಈ ಸಂಪಾದಿತ ಪತ್ಯದ ಚೌಕಟ್ಟಿಗನುಗುಣವಾಗಿ ಶೀರ್ಷಿಕೆಗಳ ಸಂಖ್ಯೆಯನ್ನು ಮಾತ್ರ ಮರುಜೋಡಿಸಿಕೊಳ್ಳಲಾಗಿದೆ.

ಹಸ್ತಪ್ರತಿ ಸಂಗ್ರಹ ಸಂರಕ್ಷಣೆ ಅಧ್ಯಯನದ ಸೂಕ್ಷ್ಮ ಮತ್ತು ಆಧುನಿಕ ವೈಧಾನಿಕತೆಗಳ ಹಿನ್ನೆಲೆಯಲ್ಲಿ ಈ ಪತ್ಯಗಳನ್ನು ಕೂಲಂಕಶವಾಗಿ, ವಿಸ್ತೃತವಾಗಿ ಅಭ್ಯಾಸ ಮಾಡಲಾಗಿದೆ. ಈ ಹಸ್ತಪ್ರತಿಗಳಲ್ಲಿ ಉಲ್ಲೇಖಿತವಾದ ಇಸವಿಗಳು, ಮಿಶನರಿ ಶೈಬ್ಲೆಯ ಹೆಸರು, ಕಾಗದ ಮತ್ತು ಬರವಣಿಗೆಯ ಪ್ರಾಚೀನತೆ, ಕಾಲ, ಸ್ಥಳಗಳು ಮೊದಲ ಹಂತದಲ್ಲಿ ಹಸ್ತಪ್ರತಿಗಳ ಕಾಲನಿರ್ಣಯಕ್ಕೆ ಸಹಾಯಕವಾದವಾದರೂ ಸೂಕ್ಷ್ಮವಾದ ಪರಿಗಣನೆಗೆ ಇಲ್ಲಿಯ ಲಿಪಿಬಳಕೆ, ಅಕ್ಷರವಿನ್ಯಾಸ, ಸಮಕಾಲೀನ ಮಾದರಿಗಳೊಂದಿಗೆ ತುಲನೆ, ಬಳಸಿದ ಶಾಯಿ, ಹಸ್ತಪ್ರತಿಯ ಕಾಲ, ಕಾಗದ, ಬರವಣಿಗೆ, ಕಾಗದ ಜೋಡಣೆ, ಇಲ್ಲಿರುವ ಅಳತೆಮಾನ, ರುಪಾಯಿ ಮೌಲ್ಯ, ಹಸ್ತಪ್ರತಿ ದೊರಕಿದ ಬಗೆ, ಸಂಗ್ರಾಹಕರ ಆಸಕ್ತಿ,

ಸಂರಕ್ಷಣೆಯ ವಿಧಾನ, ಮಿಶನರಿಗಳೊಂದಿಗಿನ ಸಂಬಂಧ, ಅವರ ಕಾರ್ಯ ಚಟುವಟಿಕೆಗಳು ಇತ್ಯಾದಿಗಳೆಲ್ಲವೂ ಸಹಾಯಕ್ಕೆ ಬಂದವು.

ರೈಟ್ ರೆವೆ.ಎಸ್.ಆರ್ ಫುರ್ಟಾಡೊ–ರೆವೆ.ಎಮ್.ಶ್ರೈಬ್ಲೆ–ಅತ್ತೂರು ಕೈಲಾಜೆ ಶ್ರೀನಿವಾಸ ಭಟ್ಟ

ರೈಟ್ ರೆವೆ.ಎಸ್.ಆರ್. ಫುರ್ಟಾಡೋರವರು ತಮ್ಮ ಸೇವಾವಧಿಯಲ್ಲಿ ಸಂಗ್ರಹಿಸಿದ ಪುಸ್ತಕ, ಹಸ್ತಪ್ರತಿಗಳ ಸಮಗ್ರ ಸಂಗ್ರಹವು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವರ ಹಿರಿಯ ಮಗ ರೈಟ್ ರೆವೆ.ಡಾ.ಸಿ.ಎಲ್. ಫುರ್ಟಾಡೊರವರ ಮೂಲಕ ಕರ್ನಾಟಕ ತಿಯೋಲಾಜಿಕಲ್ ಪತ್ರಾಗಾರಕ್ಕೆ ಸೇರ್ಪಡೆಗೊಂಡಿತು. ರೈಟ್ ರೆವೆ. ಎಸ್.ಆರ್. ಫುರ್ಟಾಡೊರವರು ೧೮೩೪ರಲ್ಲಿ ಭಾರತಕ್ಕೆ ಬಂದ ಮೊದಲ ಮೂರು ಮಿಶನರಿಗಳಲ್ಲಿ ಒಬ್ಬರಾದ ರೆವೆ.ಸಾಮುವೆಲ್ ಹೆಬಿಕರ ಅನುಯಾಯಿಯಾಗಿದ್ದ ರೆವೆ.ಸೆಬೆಸ್ಟಿಯಾನ್ ಫುರ್ಟಾಡೋರವರ ಮೊಮ್ಮಗ. ರೆವೆ.ಸೆಬೆಸ್ಟಿಯಾನ್ ಫುರ್ಟಾಡೋರವರು ಬಾಸೆಲ್ ಮಿಶನ್ ಕ್ರೈಸ್ತ ಸಭೆಗಳ ಪ್ರಥಮ ದೇಶೀಯ ಸಭಾಪಾಲಕರೂ ಆಗಿದ್ದರು.

ರೈಟ್ ರೆವೆ.ಎಸ್.ಆರ್. ಫುರ್ಟಾಡೋರವರು ನಿರಂತರ ಅಧ್ಯಯನಶೀಲರಾಗಿದ್ದು ಪುಸ್ತಕಗಳನ್ನು, ಪತ್ರಿಕಾ ವರದಿಗಳನ್ನು ಸಂಗ್ರಹಿಸುವ ಹವ್ಯಾಸ ಹೊಂದಿದ್ದವರು. ಅವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಅಲ್ಲಲ್ಲಿ ಸಿಕ್ಕಿದ ಮಿಶನರಿಗಳ ಹಸ್ತಪ್ರತಿಗಳನ್ನು ಜೋಪಾನವಾಗಿರಿಸಿದ್ದರು. ಅವರು ಶಿಕ್ಷಕರಾಗಿ, ಬೋಧಕರಾಗಿ, ಉಪನ್ಯಾಸಕರಾಗಿ, ಧರ್ಮಾಧ್ಯಕ್ಷರಾಗಿ, ಸಾಹಿತಿಯಾಗಿ ಸುಮಾರು ಐವತ್ತು ವರ್ಷಗಳ ಕಾಲ ಕ್ರೈಸ್ತ ಸಭೆಗಳ ಕಾರ್ಯ ನಿರ್ವಹಿಸಿ ಜೀವನದ ಕೊನೆಗಳಿಗೆಯವರೆಗೂ ಓದು, ಬರವಣಿಗೆಗಳಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡಿದ್ದರು.

೧೯೧೨ರಲ್ಲಿ ಜನಿಸಿದ ಇವರು ಪ್ರೌಢ ವಿದ್ಯಾಭ್ಯಾಸದ ಬಳಿಕ ೧೯೩೧–೧೯೩೨ರಲ್ಲಿ ಮಂಜೇಶ್ವರ ಮತ್ತು ಹೊಸದುರ್ಗ ಶಾಲೆಗಳಲ್ಲಿ ಸಹಾಯಕ ಶಿಕ್ಷಕರಾದರು. ೧೯೩೩–೧೯೩೫ರಲ್ಲಿ ಶಿಕ್ಷಕ ತರಬೇತಿ ಮುಗಿಸಿ ಮೂಡಬಿದ್ರೆಯ ಶಾಲೆಯಲ್ಲಿ ಶಿಕ್ಷಕರಾದರು. ೧೯೩೫ರಿಂದ ೧೯೩೭ರ ಅವಧಿಯಲ್ಲಿ ಬೋಧಕರಾಗಿ ತರಬೇತಿ ಪಡೆದು ಹೊಸದುರ್ಗ, ಕಾಂಞಂಗಾಡ್ ಶಾಲೆ ಮತ್ತು ಕ್ರೈಸ್ತ ಸಭೆಯಲ್ಲಿ, ೧೯೩೮ರಲ್ಲಿ ಉಡುಪಿಯ ಪಾಂಗಾಳ ಗುಡ್ಡೆಯಲ್ಲಿ, ೧೯೪೩ರಿಂದ೧೯೪೭ರ ತನಕ ಉಚ್ಚಿಲದಲ್ಲಿ, ೧೯೪೮ರಲ್ಲಿ ಕಾರ್ಕಳ, ಬೈಲೂರಿನಲ್ಲಿ ಕಾರ್ಯ ನಿರ್ವಹಿಸಿದರು. ೧೯೪೯ರಿಂದ ೧೯೫೫ರ ತನಕ ಮಂಗಳೂರು ವೈ.ಎಮ್.ಸಿ.ಎ.(ಯಂಗ್ ಮೆನ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್)ಯ ಕಾರ್ಯದರ್ಶಿಯಾಗಿ ಮತ್ತು ಸಿ.ಎಸ್.ಎಸ್.ಎಮ್.(ಚೈಲ್ಡ್ ಸ್ಪೆಷಲ್ ಸರ್ವಿಸ್ ಮಿಶನ್) ಸಂಸ್ಥೆಯಲ್ಲಿ ಮಕ್ಕಳ ಮಿಶನರಿಯಾಗಿಯೂ ಸೇವೆ ಸಲ್ಲಿಸಿದರು. ೧೯೫೦ರಲ್ಲಿ ಬೆಂಗಳೂರಿನ ಸೆಮಿನೆರಿಯಲ್ಲಿ ಬಿ.ಡಿ (ಬ್ಯಾಚುಲರ್ ಆಫ್

ಡಿವಿನಿಟಿ) ಪದವಿಯನ್ನು ಪಡೆದ ನಂತರ ೧೯೫೫ರಿಂದರ್೧೭೧ರವರೆಗೆ ಮಂಗಳೂರಿನ ಕರ್ನಾಟಕ ತಿಯೋಲಾಜಿಕಲ್ ಕಾಲೇಜ್‌ನಲ್ಲಿ ದೈವಜ್ಞಾನದ ಉಪನ್ಯಾಸಕರಾಗಿದ್ದರು. ೧೯೭೧ರಿಂದ ೧೯೭೮ರ ತನಕ ಕರ್ನಾಟಕ ದಕ್ಷಿಣ ಸಭಾಪ್ರಾಂತ್ಯದ ಧರ್ಮಾಧ್ಯಕ್ಷರಾಗಿದ್ದು ನಿವೃತ್ತರಾದ ಇವರು ೧೯೭೯ರಿಂದ ೧೯೮೩ರವರೆಗೆ ಸಿನೋಡ್ ಅಧ್ಯಕ್ಷರ ಪ್ರತಿನಿಧಿ ಯಾಗಿದ್ದರು. ಇವರು ೧೯೯೫ರಲ್ಲಿ ನಿಧನರಾದರು. (ನೋ. ಅನುಬಂಧ ೧)

ಇವರು ಬರೆದ 'ಕ್ರೈಸ್ತ ಧರ್ಮ ಸುಧಾರಣಾ ಚರಿತ್ರೆ'(೧೯೮೫), 'ಭಾರತದ ಮುಖ್ಯ ಧರ್ಮಗಳು' (೧೯೮೮), ಕ್ರೈಸ್ತ ಧರ್ಮದ ಇತಿಹಾಸ(೧೯೯೦) ಮುಂತಾದವು ಗಳು ಈಗಲೂ ದೈವಜ್ಞಾನ ವಿದ್ಯಾರ್ಥಿಗಳಿಗೆ ಪಠ್ಯಗಳಾಗಿವೆ. ೧೯೫೦ರಲ್ಲಿ ಸೆರಾಂಪೂರ್ ವಿಶ್ವವಿದ್ಯಾಲಯದ ಬಿ.ಡಿ. ಪದವಿಗೆ ಬರೆದ 'ಭೂತ ವರ್ಷಿಪ್ ಆಫ್ ತುಳುವಾಸ್' ದಕ್ಷಿಣ ಕನ್ನಡ ಜಿಲ್ಲೆಯ ಭೂತಾರಾಧನೆಗೆ ಸಂಬಂಧ ಪಟ್ಟಿದೆ. ಅಲ್ಲದೆ ಅವರು ಬರೆದಿಡುತ್ತಿದ್ದ ದಿನಚರಿಗಳಲ್ಲಿಯೂ, ಕಾಗದ ಬರವಣಿಗೆಗಳಲ್ಲಿಯೂ ಅವರ ಹವ್ಯಾಸ, ಆಸಕ್ತಿಗಳು ಗೋಚರವಾಗುತ್ತವೆ. ಅವರ ಸ್ವಂತ ಬರವಣಿಗೆಗಳಲ್ಲಿ ತುಳು ಭಾಷೆ ಹಾಗೂ ಸಂಸ್ಕೃತಿಯ ಬಗ್ಗೆ ಹಲವಾರು ವಿಷಯಗಳಿವೆ. ಆದರೆ ಅವರ ಸ್ವಂತ ಬರವಣಿಗೆಗಳಿಗೂ ಈ ಪುಸ್ತಕಗಳ ಕಾಗದದ ಕಾಲಮಾನ, ಬರವಣಿಗೆ ಶೈಲಿ, ಕೈಬರಹದ ಮಾದರಿ, ಟಿಪ್ಪಣಿಯ ರೀತಿ, ವೈಧಾನಿಕತೆಗಳಿಗೂ ಅಗಾಧವಾದ ವ್ಯತ್ಯಾಸವಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಅವೆಲ್ಲವೂ ಸಮಕಾಲೀನ ವಿಚಾರಗಳನ್ನು ಒಳಗೊಂಡಿರುವಂತವು. ಅವರು ಸಂರಕ್ಷಿಸಿಟ್ಟಿದ್ದ ಮಿಶನರಿಗಳ ಬರವಣಿಗೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ವ್ಯತ್ಯಾಸವನ್ನು ಕಂಡುಕೊಳ್ಳಲಾಗಿದೆ.

ಇಲ್ಲಿ ಉಲ್ಲೇಖವಾಗಿರುವ ಶೈಬ್ಲೆ ಎಂಬ ಹೆಸರು ಗಮನಾರ್ಹವಾದುದು. ಟಿಪ್ಪಣಿಗಳಲ್ಲಿರುವ ಇಸವಿಗಳು ಮತ್ತು ಸ್ಥಳಗಳ ಉಲ್ಲೇಖಗಳು ಶೈಬ್ಲೆ ಕೆಲಸ ಮಾಡುತ್ತಿದ್ದ ಸ್ಥಳ ಮತ್ತು ಕಾಲಗಳಿಗೂ ಸರಿಹೊಂದುತ್ತದೆ ಎಂಬುದು ಬಹುಮುಖ್ಯ ವಿಚಾರ. ರೆವೆ.ಎಮ್.ಶೈಬ್ಲೆ ಅಷ್ಟೊಂದು ಪರಿಚಿತವಲ್ಲದ ಹೆಸರು. ಈ ಮಿಶನರಿಯ ಕುರಿತಾದ ಮಾಹಿತಿ ಕ್ರೈಸ್ತ ಹಿತವಾದಿ ಪತ್ರಿಕೆ ದಶಂಬರ ೧೯೨೮ರ ಸಂಚಿಕೆ ಮತ್ತು ಬಾಸೆಲ್ ಮಿಶನ್ ವರದಿಗಳಿಂದ ತಿಳಿದುಬರುತ್ತದೆ. ರೆವೆ.ಎಮ್.ಶೈಬ್ಲೆ ಎಂಬ ಮಿಶನರಿಯು ೧೮೫೮ರಲ್ಲಿ ಜರ್ಮನಿಯ ಟ್ಯುಬಿಂಗೆನ್‌ನಲ್ಲಿ ಜನಿಸಿದ್ದು ೧೮೮೩ರಲ್ಲಿ. ಭಾರತಕ್ಕೆ ಬಂದರು. ಕಾರ್ಕಳದಲ್ಲಿ ೧೮೮೩ ರಿಂದ ೧೮೯೯ರವರೆಗೆ, ಮುಲ್ಕಿಯಲ್ಲಿ ೧೮೯೦ರಿಂದ ೧೮೯೩ರವರೆಗೆ ಸೇವೆ ಸಲ್ಲಿಸಿ ೧೮೯೩ ರಿಂದ ೧೮೯೭ರ ಅವಧಿಯಲ್ಲಿ ಸ್ವದೇಶಕ್ಕೆ ಹಿಂತಿರುಗಿದ್ದರು. ಮರಳಿ ಬಂದ ನಂತರ ಮಂಗಳೂರಿನಲ್ಲಿ ೧೮೯೭ರಿಂದ ೧೯೦೬ರವರೆಗೆ ಕಾರ್ಯ ನಿರ್ವಹಿಸಿದರು. ಬಳಿಕ ತಮ್ಮ ಸ್ವದೇಶಕ್ಕೆ ಹಿಂತಿರುಗಿ ಜರ್ಮನಿಯ ಕಾಸೆಲ್ ಎಂಬಲ್ಲಿ ಮಿಶನ್ ಕೆಲಸದಲ್ಲಿ ತೊಡಗಿಕೊಂಡಿದ್ದರು. ನಿವೃತ್ತಿಯ ಒಂದು ವರುಷದ ಬಳಿಕ ೨೨ ಅಕ್ಟೋಬರ್ ೧೯೨೮ರಲ್ಲಿ ಟ್ಯುಬಿಂಗೆನ್‌ನ ಸ್ವಗೃಹದಲ್ಲಿ

ನಿಧನ ಹೊಂದಿದರು. ಹತ್ತೊಂಬತ್ತು ವರ್ಷ ತುಳುನಾಡಿನಲ್ಲಿದ್ದ ಇವರು ಸಭೆಗಳಲ್ಲಿ ಬೋಧಕರಾಗಿ ಸೇವೆ ಸಲ್ಲಿಸಿದ್ದು ೧೮೪೯ರಿಂದ ಜಿಲ್ಲಾ ಸಭೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕ್ರೈಸ್ತರ ಧರ್ಮಗ್ರಂಥವಾದ ಸತ್ಯವೇದದ ಹಳೆಒಡಂಬಡಿಕೆಯ ಒಂದು ಭಾಗವಾದ ಕೀರ್ತನೆಗಳು (Psalms) ಎಂಬುದನ್ನು ತುಳುವಿಗೆ ಪರಿಷ್ಕರಣೆಯೊಂದಿಗೆ ತರ್ಜುಮೆ ಮಾಡಿದ್ದರು. ಬಾಸೆಲ್ ಮಿಶನ್ ಬುಕ್ & ಟ್ರಾಕ್ಟ್ ಡೆಪೊಸಿಟರಿ, ಮಂಗಳೂರು ಇವರಿಂದ ೧೮೮೯ರಲ್ಲಿ 'ಅರಸು ಮಗ ಉಂಗಿಲದ ಸಾಮ್ಯ' (The King's Son And His Ring) ಎಂಬ ಪುಸ್ತಕವು ಪ್ರಕಟವಾಗಿದೆ. ತುಳು ಭಾಷೆ, ಕನ್ನಡ ಲಿಪಿಯಲ್ಲಿರುವ ಇದನ್ನು ಶೈಬ್ಲೆ ಬರೆದಿದ್ದಾರೆ ಎಂಬ ದಾಖಲಾತಿಯಿದೆ. ಒಂದು ಸಣ್ಣ ನೀತಿ ಕಥೆಯಿಂದ ಪ್ರಾರಂಭವಾಗುವ ಇದು ಧರ್ಮಸಂಬಂಧೀ ವಿಚಾರಗಳನ್ನು ಒಳಗೊಂಡಿದೆ. ಇದರಲ್ಲಿ ಇಪ್ಪತ್ತೆಂಟು ಪುಟಗಳಿವೆ.

ಶೈಬ್ಲೆ ಬಗೆಗೆ ಬಾಸೆಲ್ ಮಿಶನ್ ವಾರ್ಷಿಕ ವರದಿಗಳಲ್ಲಿ ಲಭ್ಯವಿರುವ ಕೆಲವು ಮಾಹಿತಿಗಳನ್ನು ಪೂರಕವಾಗಿ ಗಮನಿಸಬಹುದು. ೧೮೮೩ರ, ೪೪ನೇ ವಾರ್ಷಿಕ ವರದಿಯೊಳಗೆ ಕಾರ್ಕಳದ ವರದಿಯಲ್ಲಿ "ನವಂಬರ್ ೧೮೮೩ರ ಮೊದಲಿಗೆ ಶೈಬ್ಲೆ ಇಲ್ಲಿಗೆ ಆಗಮಿಸಿದರು" ಮತ್ತು "ತುಳು ಕಲಿಯುತ್ತಿದ್ದಾರೆ" ಎಂಬ ಉಲ್ಲೇಖಗಳಿವೆ (ಪು.೩೦). ೧೮೮೪ರ ವರದಿಯಲ್ಲಿ ಕಾರ್ಕಳದ ಕಾರ್ಯಗಳು, ಮೂಲ್ಕಿಯ ಮಿಶನರಿ ಸಿ.ಜಿ.ಎಬ್ಲೆನ್(C.G.EBLEN)ಜೊತೆಗೆ ೩೯ ದಿನ ಜೊತೆಯಾಗಿದ್ದುದು ಮತ್ತು ತುಳು ಕಲಿಯುತ್ತಿರುವ ಮಾಹಿತಿಯಿದೆ(ಪು.೩೯). ೧೮೮೫ರ ವರದಿಯಲ್ಲಿ ಮಿಶನರಿ ಸಿ.ಜಿ.ಎಬ್ಲೆನ್ ತಾನು ನಿಟ್ಟೆಗೆ ಶೈಬ್ಲೆಯೊಂದಿಗೆ ಹೋದಾಗಿನ ಅನುಭವ (ಪು.೧೬-೧೭) ಹೇಳಿದ್ದರೆ ಶೈಬ್ಲೆ ರೆಂಜಾಳದ ಭೂತಕೋಲ (Demon Festival)ನ ಅನುಭವದ ಬಗ್ಗೆ ಹೇಳಿದ್ದಾರೆ (ಪು.೧೭-೧೮). ಶೈಬ್ಲೆ ೧೮೮೬ರ ವರದಿಯಲ್ಲಿ ಕಾರ್ಕಳದ ತನ್ನ ಅನುಭವವನ್ನು ಬರೆಯುತ್ತಾರೆ(ಪು.೧೩) ಹಾಗೆಯೇ ಕಾರ್ಕಳದ ಪ್ರಮುಖ ಕಾರ್ಯಗಳು, ಸುಬ್ರಹ್ಮಣ್ಯ ದೇವಸ್ಥಾನ, ಭೂತಕೋಲ, ಸಂತೆಗಳಲ್ಲಿ ಪ್ರವಚನ ನೀಡಿದ ಉಲ್ಲೇಖಗಳಿವೆ(ಪು.೫೦-೫೧). ೧೮೮೭ರ ವರದಿಯಲ್ಲಿ ಶೈಬ್ಲೆಯು ಬ್ರಾಹ್ಮಣರು ನೀಡಿದ ವಿವರಗಳು, ಪ್ರೇತವಿವಾಹದ ವಿಚಾರವನ್ನು ಹೇಳಿದ್ದಾರೆ(ಪು.೧೨-೧೩). 'ಕ್ರೈಸ್ತಹಿತವಾದಿ ಪತ್ರಿಕೆ'ಯಲ್ಲಿ ಅವರ ನಿಧನದ ಮಾಹಿತಿಯನ್ನು 'ಪರಂಧಾಮವನ್ನೈದಿದ ರೆವೆ.ಎಮ್.ಶೈಬ್ಲೆ ದೊರೆಯವರು' ಎಂಬ ಶೀರ್ಷಿಕೆಯಡಿಯಲ್ಲಿ ನೀಡಿದ್ದು ಅದು ಹೀಗಿದೆ:

> "ಅವರು ಮೊದಲನೇ ಸಾರಿ ೧೮೮೩ನೇ ಇಸವಿಯಲ್ಲಿ ಯೌವನ ಮಿಶ್ಯನರಿಯಾಗಿ ಇಂಡಿಯಕ್ಕೆ ಬಂದರು. ಪ್ರಾರಂಭದಲ್ಲಿ ಕಾರ್ಕಳದಲ್ಲಿದ್ದು ತುಳು ಭಾಷೆಯನ್ನು ಕಲಿತು ಅದರಲ್ಲಿ ಪ್ರವೀಣರಾಗಿ ಕಾರ್ಕಳದಲ್ಲಿಯೂ ಮುಲ್ಕಿಯಲ್ಲಿಯೂ ಇದ್ದು ಸುವಾರ್ತಾ ಪ್ರಸರಣಾ ಕಾರ್ಯದಲ್ಲಿಯೂ ಸಭಾ ಸೇವೆಯಲ್ಲಿಯೂ ನಿರತರಾಗಿದ್ದರು. ೧೮೯೩ರಲ್ಲಿ ಮೊದಲನೇ

ಸಾರಿ ಅವರು ರಜೆಯ ಮೇಲೆ ಪತ್ನಿ ಸಮೇತ ತನ್ನ ದೇಶಕ್ಕೆ ತೆರಳಿದರು. ಆದರೆ ಅವರ ಪತ್ನಿಯ ಅಸ್ವಸ್ಥದ ನಿಮಿತ್ತ ತಕ್ಕ ಕಾಲದಲ್ಲಿ ರಜೆಯನ್ನು ತೀರಿಸಿ ತಿರಿಗಿ ಇಂಡಿಯಕ್ಕೆ ಬರಲಿಕ್ಕಾಗಲಿಲ್ಲ. ಆದುದರಿಂದ ಅವರು ರಜಾಕಾಲವನ್ನು ಮುಂದರಿಸಿ ಕೆಲವು ಕಾಲ ವಿಲಾಯತಿಯಲ್ಲಿಯೇ ಇರಬೇಕಾಯಿತು. ಈ ಸಮಯದಲ್ಲಿ ಅವರು ಕೀರ್ತನಾ ಪುಸ್ತಕವನ್ನು ತುಳು ಭಾಷೆಗೆ ಭಾಷಾಂತರಿಸಿದರು. ಅವರು ತುಳು ಭಾಷೆಯಲ್ಲಿ ಎಷ್ಟು ನಿಪುಣರಾಗಿದ್ದರೆಂಬದು ಚೊಕ್ಕ ತುಳುವಿನ ಈ ಗ್ರಂಥವನ್ನು ಓದುವುದ ರಿಂದ ತಿಳಿದುಕೊಳ್ಳಬಹುದು. ನಮಗೆ ತಿಳಿದ ಬೇರೆ ಯಾವ ದೇಶೀಯ ಭಾಷೆಯಲ್ಲಿಯಾದರೂ ಕೀರ್ತನೆಯ ಗ್ರಂಥವು ಇಷ್ಟು ಚಲೋದಾಗಿ ಭಾಷಾಂತರವಾಗಲಿಲ್ಲವೆಂಬದಾಗಿ ಅನುಭವಸ್ಥರು ಹೇಳುವರು." (ಕ್ರೈಸ್ತಹಿತವಾದಿ ಪತ್ರಿಕೆ ಸಂಪುಟ ೫, ಸಂಚಿಕೆ ೧೧, ದಶಂಬರ್ ೧೯೨೮, ಪು.೮೫, ಮಂಗಳೂರು)

ಸ್ವಿಜರ್‌ಲ್ಯಾಂಡಿನ ಬಾಸೆಲ್ ಮಿಶನ್ ಪತ್ರಾಗಾರ(MISSION 21)ದಲ್ಲಿರುವ ದಾಖಲೆಗಳಲ್ಲಿ ಶೈಬ್ಲೆ ಬಗ್ಗೆ ಕೆಲವು ಮಾಹಿತಿಗಳು ಲಭ್ಯವಿದ್ದು ಅವು ಜರ್ಮನ್ ಭಾಷೆಯಲ್ಲಿವೆ. ಅಲ್ಲಿ ಸೇವೆ ಸಲ್ಲಿಸುತ್ತಿರುವ ಕು.ಅನ್ನಾ ಸೊಮರ್ (ANNA SOMMER) ರವರು ಅವುಗಳನ್ನು ಒದಗಿಸಿಕೊಟ್ಟರು. ಅದರೊಂದಿಗೆ ಕುತೂಹಲಕರವಾದ ಮಾಹಿತಿ ಯೊಂದನ್ನು ಅವರು ನೀಡಿದರು. ಮ್ಯಾಥ್ಯೂಸ್ ಶೈಬ್ಲೆ (MATHAUS SCHAIBLE) ಜರ್ಮನಿಯ ಗೌಗೆನ್ವಲ್ಡ್ (GAUGENWALD)ನಲ್ಲಿ ದಿ.೦೬.೦೨.೧೮೪೫ರಂದು ಜನಿಸಿದರು. ಬಾಸೆಲ್‌ನ ಸೆಮಿನರಿಗೆ ೧೬.೦೮.೧೮೭೭ರಲ್ಲಿ ಪ್ರವೇಶ ಪಡೆದು ದೈವಜ್ಞಾನ ತರಬೇತಿ ಹೊಂದಿ ೦೫.೦೭.೧೮೮೩ರಂದು ಬೋಧಕರಾಗಿ ದೀಕ್ಷೆ ಪಡೆದರು. ೧೮೮೩ನೇ ಇಸವಿಯ ಅಕ್ಟೋಬರ್ ತಿಂಗಳಿನಲ್ಲಿ ಕಾರ್ಕಳಕ್ಕೆ ಮೊದಲ ಬಾರಿಗೆ ಬಂದ ಶೈಬ್ಲೆ ಮೊದಲಿಗೆ ಭಾಷೆಯನ್ನು ಕಲಿತರು. ಬಳಿಕ ವಿವಿದೆಡೆಗಳಲ್ಲಿ ಕ್ರೈಸ್ತ ಧರ್ಮ ಬೋಧನೆಯನ್ನು ಮಾಡುತ್ತಿದ್ದರು. ಶೈಬ್ಲೆ ೧೮೮೫ರ ಜೂನ್‌ನಿಂದ ನವಂಬರ್‌ವರೆಗೆ ಮಂಗಳೂರಿನಲ್ಲಿ ಇದ್ದರು. ೧೮೮೭ರ ಮೇ ತಿಂಗಳಿನಲ್ಲಿ ಅಗಸ್ತೆ ಫಿಂಕ್ (AUGUSTE FINCK) ಎಂಬವರೊಂದಿಗೆ ಅವರ ವಿವಾಹ ನಿಶ್ಚಯವಾಯಿತು. ಫಿಂಕ್ ಅವರು ೧೮೮೭ರ ಅಕ್ಟೋಬರ್ ತಿಂಗಳಿನಲ್ಲಿ ಮಂಗಳೂರಿಗೆ ಆಗಮಿಸಿದರು ಹಾಗೂ ದಿ.೨೮.೧೦.೧೮೮೭ರಂದು ಅವರ ವಿವಾಹವು ಮಂಗಳೂರಿನಲ್ಲಿ ನಡೆಯಿತು. ಇವರಿಬ್ಬರೂ ಕಾರ್ಕಳದಲ್ಲಿ ೦೭.೦೫.೧೮೯೦ರವರೆಗೆ ಕಾರ್ಯ ನಿರ್ವಹಿಸಿದರು. ೦೭.೦೫.೧೮೯೦ರಂದು ಮೂಲ್ಕಿಗೆ ತೆರಳಿ ಕ್ರೈಸ್ತಸಭೆ ಹಾಗೂ ಶಾಲೆಗಳ ಮುಖ್ಯಸ್ಥ ರಾಗಿಯೂ ಕಾರ್ಯ ನಿರ್ವಹಿಸಿದರು.

ಈ ದಂಪತಿಗಳಿಗೆ ಒಟ್ಟು ನಾಲ್ವರು ಮಕ್ಕಳು. ಮೊದಲ ಇಬ್ಬರು ಪುತ್ರರು ಮತ್ತು

ಮತ್ತಿಬ್ಬರು ಪುತ್ರಿಯರು. ನಾಲ್ವರ ಜನನ ಮತ್ತು ನಾಮಕರಣವಾದುದು ಇಲ್ಲಿಯೇ ಆದರೂ ಅವರು ಜರ್ಮನಿಯಲ್ಲಿ ಬೆಳೆದರು. ಮೊದಲ ಮಗ ಟ್ರೌಗಟ್ ಶೈಬ್ಲೆ (TRAUGOTT SCHAIBLE) (ಜನ್ಮಸ್ಥಳ : ಕಾರ್ಕಳ, ಹುಟ್ಟಿದ ದಿನಾಂಕ : ೧೬.೦೯.೧೮೮೮), ಎರಡನೇ ಮಗ ಬೆಂಜಮಿನ್ ಶೈಬ್ಲೆ (BENJAMIN SCHAIBLE) (ಮುಲ್ಕಿ, ೨೪.೦೮.೧೮೯೦), ಮೂರನೆಯವರು ಮಗಳು ಕ್ಲಾರಾ ಶೈಬ್ಲೆ (KLARA SCHAIBLE) (ಮುಲ್ಕಿ, ೦೯.೦೮.೧೮೯೧), ನಾಲ್ಕನೇ ಮಗಳು ಯೊಹನ್ನಾ ಶೈಬ್ಲೆ (JOHANNA SCHAIBLE) (ಮುಲ್ಕಿ, ೨೭.೧೧.೧೮೯೨). ಈ ದಂಪತಿಗಳು ತಮ್ಮ ನಾಲ್ವರು ಮಕ್ಕಳೊಂದಿಗೆ ೧೮೯೪ರಲ್ಲಿ ಜರ್ಮನಿಗೆ ತೆರಳಿದರು. ಮುಂದಿನ ಮೂರು ವರ್ಷ ಉನ್ನತ ತರಬೇತಿ ಪಡೆದು ೨೭.೦೪.೧೮೯೭ರಂದು ದಂಪತಿಗಳು ಮಾತ್ರ ಮಂಗಳೂರಿಗೆ ಹಿಂತಿರುಗಿದರು. ಮಕ್ಕಳು ಜರ್ಮನಿಯಲ್ಲಿಯೇ ಉಳಿದರು. ಮಂಗಳೂರಿನಲ್ಲಿ ಫೆಬ್ರವರಿ ೧೯೦೬ರವರೆಗೆ ವಾಸ್ತವ್ಯವಿದ್ದು ಕೆಲಸ ನಿರ್ವಹಿಸಿದರು. ೧೮೯೯ರಲ್ಲಿ ಮಂಗಳೂರು ಜಿಲ್ಲೆಯ ಕ್ರೈಸ್ತಸಭೆಗಳ ಮುಖ್ಯಸ್ಥರಾದರು. ಜರ್ಮನಿಗೆ ಮರಳಿದ ನಂತರವೂ ಸಂಚಾರಿ ಪ್ರಚಾರಕರಾಗಿ ಕೆಲಸ ಮಾಡಿದರು. ೧೯೨೭ರಲ್ಲಿ ನಿವೃತ್ತಿ ಪಡೆದು ೨೭.೧೦.೧೯೩೮ರಂದು ಟ್ಯುಬಿಂಗನ್(TUBINGEN)ನಲ್ಲಿ ನಿಧನ ಹೊಂದಿದರು.

ಸೊಮರ್ ಅವರು ಇದರೊಂದಿಗೆ "ಶೈಬ್ಲೆಯವರು ಅನುವಾದಕರಾಗಿಯೂ ಕಾರ್ಯನಿರ್ವಹಿಸಿದ್ದಂತೆ ತೋರುತ್ತದೆ. ನಮ್ಮಲ್ಲಿ ಅವರ ತುಳು ಎಥ್ನೋಗ್ರಾಫಿಕ್ ಮೇಲಿನ ಲೇಖನ (ಮೂಲ ಲೇಖಕರು ಶ್ರೀನಿವಾಸ ಭಟ್ಟ) ಹಾಗೂ ಭಾರತದಲ್ಲಿ ಮಿಶನರಿ ಚಟುವಟಿಕೆಯ ಬಗೆಗಿನ ಲೇಖನವಿರುವ ಮಾಹಿತಿಯಿದೆ" ಎಂಬ ಕುತೂಹಲಕಾರಿ ಯಾದ ಮಾಹಿತಿಯೊಂದನ್ನು ನೀಡಿದ್ದರು. ನಂತರ ಬಲ್ಮಠದ ಪತ್ರಾಗಾರದಲ್ಲಿ ಲಭ್ಯವಿರುವ ಅದಕ್ಕೆ ಸಂಬಂಧಿಸಿದ ಜರ್ಮನ್ ದಾಖಲೆಗಳನ್ನು ಪರಿಶೀಲಿಸಿದಾಗ

1. "Bodscha" Feierlichkeit bei der Leichenverbrennung ,

2. "Sonku", d.h. Geisterfurcht, Besessenneit und Austereibung, (im District Sudkanara mit der Hauptstadt Mangalur Geisterfurcht, Besessenheit und Austreibung Erlebt und aufgezeichnet von Sprachlehrer Sriniwasa Bhatta)

3."Mulige" d.h. Zauberarznei, oder Sympathie ಎಂಬ ಮೂರು ಜರ್ಮನ್ ಲೇಖನಗಳು ದೊರೆತವು. ಮೂರನೇ ಲೇಖನವು ಸಂಪೂರ್ಣವಾಗಿ ಇಲ್ಲಿ ಪ್ರಕಟವಾಗುತ್ತಿರುವ 'ಮೂಲಿಗೆ'[A/2564-1]ಟಿಪ್ಪಣಿಯ ಅನುವಾದವಾಗಿದೆ. ಹಾಗೆಯೇ 'ಸೋಂಕು ಪ್ರಕಾರ ಆದ್ ಪೋಡಿದ್ ಪೋಯಿನಾಯಗ್ ಭಟ್ಟೆ ಬತ್ತ್‌ದ್ ಶೊರಕ್ ದೆಪ್ಪುನೆತ್ತ ಕ್ರಮ'[A/2564-4]ಎಂಬ ಶೀರ್ಷಿಕೆ ಮಾತ್ರ ನೀಡಿ ಒಂದು ಪುಟವನ್ನು ಖಾಲಿ

ಬಿಡಲಾಗಿದ್ದರೆ ಇಲ್ಲಿ 'ಸೋಂಕು' ಹೆಸರಿನ ಲೇಖನವಿದೆ. ಇದು ಇನ್ನಷ್ಟು ಕಿರುಪುಸ್ತಕಗಳು ಕಳೆದುಹೋಗಿರಬಹುದು ಎಂಬುದನ್ನು ಪುಷ್ಟೀಕರಿಸುತ್ತದೆ. 'ಬೊಜ್ಜ' ಸಾರಾಂಶ ರೂಪದಲ್ಲಿ ಅಂತ್ಯಕ್ರಿಯೆ ಉತ್ತರಕ್ರಿಯೆಯ ವಿವರಗಳನ್ನು ನೀಡುತ್ತದೆ. ಇವುಗಳ ಮೂಲ ಲೇಖಕ ಶ್ರೀನಿವಾಸ ಭಟ್ಟ ಹಾಗೂ ಅನುವಾದಕ ರೆವೆ. ಶೈಬ್ಲೆ ಎಂಬ ಉಲ್ಲೇಖವಿದೆ. ಇವು ಪ್ರಕಟಗೊಂಡಿರುವ ಬಗೆಗೆ ಮಾಹಿತಿ ದೊರೆತಿಲ್ಲ. ಶೈಬ್ಲೆ ಈ ಲೇಖನದ ಕೊನೆಯಲ್ಲಿ "ಶ್ರೀನಿವಾಸ ಭಟ್ಟ ಹೇಳಿದ್ದೆಲ್ಲವೂ ಸತ್ಯವೆಂದು ನಂಬಬಹುದು... ತುಳುನಾಡಿನ ಭೂತಾರಾಧನೆ ಬಗ್ಗೆ ನಾವು ಇವರ ಬಳಿ ಮಾಹಿತಿ ಪಡೆಯುತ್ತಿದ್ದೆವು... ಅವರು ಹೇಳಿದ ವಿವರಗಳು ಹಾಗೂ ನಾವು ಇತರರಿಂದ ಪಡೆದ ಮಾಹಿತಿಗಳು ಒಂದೇ ರೀತಿಯಾಗಿರುತಿತ್ತು... ಇವರ ವರದಿಯನ್ನು ನಾವು ನಂಬಬಹುದು... ಇವರು ತನ್ನ ಉದ್ಯೋಗದಲ್ಲಿ ನಂಬಿಗಸ್ಥ ವ್ಯಕ್ತಿ.... ನಂಬಲರ್ಹ ಉತ್ತಮ ವ್ಯಕ್ತಿ" ಎಂದು ಗುರುತಿಸಿರುವುದು ಗಮನಾರ್ಹ. ಇದನ್ನು ಬರೆದಿರುವುದು ಅತ್ತೂರಿನಲ್ಲಿ ಎಂಬ ಉಲ್ಲೇಖವೂ ಇದೆ.

ಬಹುತೇಕ ಇಲ್ಲಿ ಉಲ್ಲೇಖಗೊಂಡಿರುವ ಶ್ರೀನಿವಾಸ ಭಟ್ಟರು ಕೆಲವೊಂದನ್ನು ಬರೆದಿರುವ ಸಾಧ್ಯತೆಯಿದೆ. ಇವರ ಫೊಟೊ ಬಾಸೆಲ್ ಮಿಶನ್ ದಾಖಲೆಗಳಲ್ಲಿ ಲಭ್ಯವಿದೆ, **(ನೋ.ಅನುಬಂಧ ೧)** ಆದರೆ ಅವರ ಮನೆತನ, ಹಿನ್ನೆಲೆ ಇತ್ಯಾದಿಗಳ ಬಗ್ಗೆ ಮಾಹಿತಿಗಳು ದೊರಕಿಲ್ಲ. ಅಂದಿನ ಸಂದರ್ಭದಲ್ಲಿ ಮಿಶನರಿಗಳಿಗೆ ತುಳು ಕಲಿಸುವ ಒಂದು ವ್ಯವಸ್ಥೆಯಿತ್ತು. ಇದನ್ನು ನಂತರವೂ ಗುರುತಿಸಿದ್ದಿದೆ. "ಹೊಸತಾಗಿ ಸೀಮೆಯಿಂದ ಬಂದ ಮಿಶನರಿಗಳಿಗೆ ತುಳು ಭಾಷೆಯನ್ನು ಕಲಿಯಲು ಕಾರ್ಕಳವನ್ನೇ ಕೇಂದ್ರವನ್ನಾಗಿ ಮಾಡಿದ್ದರಿಂದ ತರುಣ ಮಿಶನೆರಿಗಳು ಇಲ್ಲಿಯೇ ಅತ್ಯಲ್ಪ ಕಾಲಾವಧಿಯಲ್ಲಿ ತುಳು ಭಾಷೆಯನ್ನು ಕಲಿತು ಸುವಾರ್ತಾ ಸೇವೆಯನ್ನು ಮಾಡಲು ಸಿದ್ಧರಾಗುತ್ತಿದ್ದರು. ನಿಟ್ಟೆ ಗ್ರಾಮದ ಅತ್ತೂರು ಕೈಲಾಜೆ ಶಿವಳ್ಳಿ ಬ್ರಾಹ್ಮಣ ಶ್ರೀನಿವಾಸ ಭಟ್ಟರೇ ತುಳು ಭಾಷೆಯನ್ನು ಕಲಿಸುವ ಮುನ್ಶಿ. ಇವರು ಲೋಕ ವ್ಯವಹಾರದಲ್ಲೂ ಪಾರಂಗತರು." (ಸ್ಮರಣ ಸಂಚಿಕೆ ಬೆತಾನ್ಯ ದೇವಾಲಯ, ಕಾರ್ಕಳ ೧೯೭೧). ಇದರೊಂದಿಗೆ ಇಲ್ಲಿ ಮಿಶನರಿಗಳು ಮತ್ತು ಅತ್ತೂರಿನ ಸಂಬಂಧವೂ ಗೋಚರವಾಗುತ್ತದೆ. ಅಲ್ಲದೆ ಕಾರ್ಕಳದ ಕ್ರೈಸ್ತ ದೇವಾಲಯ ಉದ್ಘಾಟನೆಗೆ ಬಂದ ಇವರು ಮಾಡಿದ ಭಾಷಣದ ಒಂದು ಉಲ್ಲೇಖವು 'ಸತ್ಯದೀಪಿಕೆ'ಪತ್ರಿಕೆಯಲ್ಲಿ ಲಭ್ಯವಿದೆ. ಅಂದಿನ ವರದಿಯೊಂದರ ಮಾದರಿಯಾಗಿಯೂ ಮೂಲದಲ್ಲಿರುವಂತೆಯೇ ಅದನ್ನಿಲ್ಲಿ ಪೂರ್ತಿಯಾಗಿ ಗಮನಿಸಿಕೊಳ್ಳಬಹುದು:

> *"ಕಳೆದ ಮಾರ್ಚ್ ತಿಂಗಳ 22ನೇ ಆದಿತ್ಯವಾರವು ಕಾರ್ಕಳದಲ್ಲಿರುವ ಕ್ರೈಸ್ತ ಸಭೆಯವರಿಗೆ ಒಂದು ಸಂತೋಷದ ದಿನವಾಗಿತ್ತು. ಅಂದು ಕಾರ್ಕಳಕ್ಕೆ ಸುತ್ತಮುತ್ತಲಿರುವ ಮೂಡಾರ್, ಹಿರ್ಗಾನ, ಬೈಲೂರು ನಂದೊಳಿಗೆ ಮೊದಲಾದ ಸ್ಥಳಗಳಿಂದ ಸಭೆಯವರೂ ಸ್ನೇಹಿತರೂ*

ಶಾಲೆಯ ಮಕ್ಕಳೂ ಬಂದಿದ್ದರು. ಆ ದಿನ ಬೆಳಿಗ್ಗೆ 10 ಘಂಟೆಗೆ ಎಲ್ಲರೂ ಮೊದಲು ಪ್ರಾರ್ಥನೆ ನಡೆಯುತ್ತಿದ್ದ ಬಂಗಲೆಯಲ್ಲಿ ಕೂಡಿ ಬಂದಲ್ಲಿ ಸ್ಥಳೀಕ ಉಪದೇಶಕರಾದ ಪೌಲಯ್ಯನವರು ಒಂದು ಸ್ತೋತ್ರ ಗೀತವನ್ನು ಹಾಡಿಸಿ ಪ್ರಾರ್ಥನೆ ಮಾಡಿದ ನಂತರ ಅಲ್ಲಿಂದ ಹೊಸ ದೇವಾಲಯದ ಬಾಗಿಲಿನವರೆಗೆ ಕಿನ್ನರಿಗಳನ್ನು ಬಾರಿಸುತ್ತಾ ಕೂಡಿದ ಸಭೆಯವರೆಲ್ಲ ಗುಂಪಾಗಿ ಬರುವವರಾದರು. ಈ ನೋಟವು ಅತಿ ಮನೋಹರವಾಗಿತ್ತು. ದೇವಾಲಯದ ಬಾಗಲಿನ ಬಳಿಯಲ್ಲಿ ಸುಮಾರು 24 ವರ್ಷಗಳಿಂದ ಮಿಶನೆರಿಗಳಿಗೆ ತುಳು ಭಾಷೆಯನ್ನು ಕಲಿಸುತ್ತಿದ್ದ ಶ್ರೀನಿವಾಸ ಭಟ್ಟರು ಮುಂದೆ ನಿಂತು ಹೇಳಿದ್ದು– ಈ ಸ್ಥಳವು ಮಿಶನೆರಿಗಳು ಬರುವ ಮುಂಚೆ ಕೇವಲ ಭೂತ ಪ್ರೇತಗಳ ವಾಸಸ್ಥಾನವಾಗಿತ್ತು. ಈಗ ದೇವಾಲಯ ಕಟ್ಟಿರುವ ಇದೇ ಸ್ಥಳಕ್ಕೆ ರಾಕ್ಷಸನ ಕಟ್ಟೆ ಎಂಬ ಹೆಸರಿತ್ತು.. ನೆರೆಹೊರೆಯವರು ಮಧ್ಯಾಹ್ನದ ಹೊತ್ತಿಗೆ ಈ ದಾರಿಯಾಗಿ ಹೋಗುತ್ತಿದ್ದಿಲ್ಲ.. ಆದರೆ ಈಗ ಎಲ್ಲಾ ಪೂರ್ಣ ಬೇರೆಯಾಯಿತು. ಈಗ ಯಾರಿಗಾದರೂ ಯಾವ ಸಮಯವಾದರೂ ಈ ಮಾರ್ಗವಾಗಿ ಹೋಗುವುದಕ್ಕೆ ಏನೇನೂ ಭಯವಿಲ್ಲ. ಈ ಸ್ಥಳದಲ್ಲಿ ಸತ್ಯ ದೇವಾರಾಧಾನೆ ನಡಿಯುತ್ತದೆಂಬದಕ್ಕೂ ಈ ಊರಿನಲ್ಲಿಯೂ ಕ್ರಿಸ್ತನಿಗೆ ಪಿಶಾಚನ ಮೇಲೆ ಜಯ ಸಿಕ್ಕಿತೆಂಬದಕ್ಕೂ ಇದು ಒಂದು ದೃಷ್ಟಾಂತ. ಮತ್ತು ದೇವಾಲಯದ ಕಟ್ಟೋಣ ಹ್ಯಾಗೆ ನೆರವೇರಿ ಬಂತು ಎಂದೂ ಈ ಕಟ್ಟೋಣಕ್ಕೆ ಇನ್ನೂ ಹೊರಗಿನ ಪ್ರಕಾರ ವಾಗಿ ಎಲ್ಲರೂ ಕೈಕೊಡತಕ್ಕದೆಂದೂ ಇಂಥಿಂಥ ರೀತಿಯಲ್ಲಿ ಕೈಕೊಡ ಬಹುದೆಂದೂ ಹೇಳಿ ಸಭೆಯವರನ್ನು ಪ್ರೇರೇಪಿಸುವವರಾದರು.

ಅನಂತರ ಸ್ಥಳೀಕ ಸಭಾ ಬೋಧಕರಾದ ಫಿಶರ್ ದೊರೆಗಳವರು ಬಾಗಲು ತೆರೆದ ಮೇಲೆ ಎಲ್ಲರೂ ಅದರೊಳಗೆ ಪ್ರವೇಶಿಸಿ ಕೂತುಕೊಂಡರು ಬಳಿಕ ಬೋಧಕರು ಆಶೀರ್ವಾದವನ್ನು ನುಡಿದ ಮೇಲೆ ಸಂಗೀತ ಪ್ರಾರ್ಥನೆ ನಡಿಯಿತು. ಬಳಿಕ ಅವರು 1 ಪೇತ್ರ 1, 16; ಯೋಸೇಫಯ್ಯನವರು 1 ಕೊರಿ. 6, 19, ಬುಸ್ಸ್ ದೊರೆಗಳು 1 ಪೇತ್ರ 2, 5, ಪೌಲಯ್ಯ ನವರು ಕೀರ್ತನೆ 26, 8, ಸಾಮುವೇಲಯ್ಯನವರು ಯೇಶಾಯ 57, 15-16 ಈ ವೇದೋಕ್ತಿಗಳನ್ನು ಓದಿ ಉಪದೇಶ ಕೊಟ್ಟರು.

ಕಟ್ಟಕಡೆಗೆ ಪ್ರಾರ್ಥನೆ ಮಾಡಿ ಮುಗಿಸಿದ್ರು. ಮಧ್ಯ ಮಧ್ಯದಲ್ಲಿ ಚಿಕ್ಕ ಮಕ್ಕಳ ಗಾಯನವೂ ಇತ್ತು. ಆ ದಿನದ ಆರಾಧನೆಯಲ್ಲಿ ಸುಮಾರು 9 ರುಪಾಯಿ 12 ಆಣೆ ವಂತಿಗೆ ಕೂಡಿತು. ನೆರೆದು ಬಂದವರಿಗೆ ಸಕ್ಕರೆಯೂ ತಾಂಬಲವೂ ಹಂಚಲಾಯಿತು." (ಸತ್ಯದೀಪಿಕೆ; ಮೇ 1903, ಪುಸ್ತಕ 7 ಸಂಚಿಕೆ 21, ಪುಟ 165)

ರೆವೆ.ಎಮ್.ಶೈಬ್ಲೆ ಕಾರ್ಯನಿರ್ವಹಿಸುತ್ತಿದ್ದ ಸ್ಥಳ ಮತ್ತು ಇಸವಿಗೆ ಬಹುತೇಕ ಟಿಪ್ಪಣಿಯ ಉಲ್ಲೇಖ ಹೊಂದಿಕೆಯಾಗುತ್ತದೆ. ಅವರು ಕಾರ್ಕಳದಲ್ಲಿ ೧೮೮೩ ರಿಂದ ೧೮೮೯ರವರೆಗೆ, ಮುಲ್ಕಿಯಲ್ಲಿ ೧೮೯೦ರಿಂದ ೧೮೯೩ರವರೆಗೆ ಸೇವೆ ಸಲ್ಲಿಸಿದ್ದರು. ಅಲ್ಲಿರುವಾಗಲೇ ಇಲ್ಲಿರುವ ಕೆಲವು ಟಿಪ್ಪಣಿಗಳನ್ನು ಬರೆಸಿರುವ ಸಾಧ್ಯತೆಯಿದೆ. ಸ್ವತ: ಬರೆದಿರುವ ಸಾಧ್ಯತೆ ಕಡಿಮೆ. ಬಾಸೆಲ್ ಮಿಶನ್ ವರದಿಗಳಲ್ಲಿ, ಚರ್ಚುಗಳ ನಡಾವಳಿ ಪುಸ್ತಕಗಳಲ್ಲಿ ಲಭ್ಯವಿರುವ ಮಾಹಿತಿ, ಶೈಬ್ಲೆ ಉಲ್ಲೇಖಗಳೂ ಈ ಬರವಣಿಗೆಯ ಕಾಲಕ್ಕೆ ಸರಿಹೊಂದುತ್ತವೆ. ಹಾಗೆಯೇ ಈ ಮುಖಪುಟದ ಹಸ್ತಾಕ್ಷರ ಮತ್ತು ಒಳಗಿನ ಪುಟಗಳಲ್ಲಿರುವ ಜರ್ಮನ್ ಬರವಣಿಗೆಗಳು ಇದಕ್ಕೆ ಪುಷ್ಟಿ ನೀಡುತ್ತವೆ. ಜೊತೆಗೆ ಸಮಕಾಲೀನ ಚರ್ಚ್ ನಡಾವಳಿ ಪುಸ್ತಕ (೧೮೭೭-೧೯೦೫)ದಲ್ಲಿ, ಕಾರ್ಕಳದ ನಾಮಕರಣ ದಾಖಲೆಗಳಲ್ಲಿ (೧೮೭೩-೧೯೧೬) ಅಲ್ಲಲ್ಲಿ ಇರುವ ಶೈಬ್ಲೆ ಬರವಣಿಗೆಯಲ್ಲಿ ಸಾಮ್ಯತೆಯನ್ನು ಗುರುತಿಸಬಹುದಾಗಿದೆ. ರೆವೆ.ಎಮ್.ಶೈಬ್ಲೆ ಕಾರ್ಯ ನಿರ್ವಹಿಸಿದ ಸ್ಥಳ ಮತ್ತು ದೊರೆತಿರುವ ಪುಸ್ತಕಗಳ ಟಿಪ್ಪಣಿಗಳ ಸ್ವರೂಪದ ಸಾಮ್ಯತೆ ಮತ್ತು ಅಂತರ್ಸಂಬಂಧವಿದ್ದಿರಬಹುದು ಕೆಲವು ಅವರಿಗೆ ಸಂಬಂಧಿಸಿದ ಬರವಣಿಗೆಗಳಾಗಿರ ಬಹುದು, ಅದನ್ನವರು ಅಧ್ಯಯನಕ್ಕೆ ಬಳಸಿಕೊಂಡಿದ್ದರು ಎಂದಷ್ಟೇ ಹೇಳುವುದು ಸೂಕ್ತವಾದುದು. ಆದರೆ ಇಲ್ಲಿರುವ ಬರವಣಿಗೆಗಳೆಲ್ಲವೂ ಶೈಬ್ಲೆಯವರಿಗೆ ಸಂಬಂಧಿಸಿದ್ದೇ ಎಂದು ಹೇಳುವುದು ಇಲ್ಲಿನ ಪ್ರಯತ್ನವಲ್ಲ. ಹಾಗೆ ಹೇಳುವುದೂ ಅಗತ್ಯವಿಲ್ಲ. ಹಾಗೆನ್ನುವುದಕ್ಕಿಂತಲೂ ಒಟ್ಟು ಮಿಶನರಿಗಳ ಸಂಗ್ರಹದಲ್ಲಿ ಈ ಟಿಪ್ಪಣಿಗಳು ಬಂದಿವೆ ಮತ್ತು ಅವುಗಳು ಹಲವು ವಿಚಾರಗಳನ್ನು ತೆರೆದಿಡುತ್ತವೆ ಎಂದು ಗುರುತಿಸಿಕೊಳ್ಳುವುದೇ ಸೂಕ್ತವಾದುದು.

ಬಾಸೆಲ್ ಮಿಶನರಿಗಳು ತುಳುನಾಡಿಗೆ ಬಂದು ಇಲ್ಲಿನ ಸಂಸ್ಕೃತಿಯನ್ನು ಅರ್ಥ ಮಾಡಿಕೊಳ್ಳಲೆಂದು ಇಲ್ಲಿನ ಸ್ಥಳೀಯ ವಕ್ತೃಗಳ ಮೂಲಕ ಬರೆಸಿರುವ ಈ ಬರವಣಿಗೆಗಳು ಇಂದಿಗೂ ಉಳಿದು ಬಂದಿರುವುದು ಸ್ಪಷ್ಟ. ಹಾಗೆಂದು ಅವರಿಗೆ ಕನ್ನಡ ಲಿಪಿಯ ಮೂಲಕ ತುಳು ಬರೆಯಲು ತಿಳಿದಿರಲಾರದು ಎಂದಲ್ಲ, ಸಂಬಂಧ ಪಟ್ಟವರು ಇವುಗಳನ್ನು ಓದಿರುವುದಕ್ಕೆ ಸಾಕ್ಷಿಯೆಂಬಂತೆ ಅವರು ಅಲ್ಲಲ್ಲಿ ಮಾಡಿಕೊಂಡಿರುವ ನೋಟ್‌ಗಳು, ನೀಡಿರುವ ಅರ್ಥಗಳು, ಅಡಿಗೆರೆಗಳು ಕಂಡುಬರುತ್ತವೆ. (ನೋಡಿ : ಅನುಬಂಧ ೧) ಇದು ಬಾಸೆಲ್ ಮಿಶನರಿಗಳ ಆಸಕ್ತಿಯ ಫಲವಾಗಿ ಬರಹ ರೂಪಕ್ಕೆ ಬಂದಿರಬಹುದು. ಇಂತಹ ಹಲವು ಪುಸ್ತಕಗಳು ಅಂದು ಇದ್ದಿರಬಹುದು, ಇಲ್ಲಿನ ಅಪೂರ್ಣ ಬರವಣಿಗೆ ಇಂದು ಲಭ್ಯವಾಗದೇ ಹೋಗಿರಬಹು ದಾದ ಪುಸ್ತಕಗಳನ್ನು ಸೂಚಿಸುತ್ತದೆ. ಅವು ಬಹುತೇಕ ಕಾಲಗರ್ಭದಲ್ಲಿ ಲುಪ್ತವಾಗಿ ಹೋಗಿರಬಹುದಾದ ಸಾಧ್ಯತೆಯೇ ಹೆಚ್ಚು. ಇಂತಹಾ ಬರವಣಿಗೆಗಳು ವೈಯಕ್ತಿಕ ಟಿಪ್ಪಣಿಗಳ ಸಂಗ್ರಹವಾದುದರಿಂದ ಅದು ಮರೆಯಲ್ಲಿ ಉಳಿಯುವುದು, ಕಾಲಾನುಕ್ರಮ ದಲ್ಲಿ

ಮರೆಯಾಗಿಯೇ ಹೋಗುವುದು ಸಹಜ. ಹಾಗೆಯೇ ಈ ಬಗೆಯ ಬರೆದಿಡುವ ಹವ್ಯಾಸಕ್ಕೆ ಎಚ್. ಎಲ್. ನಾಗೇಗೌಡರ 'ಪ್ರವಾಸಿ ಕಂಡ ಇಂಡಿಯಾ' ಸಂಪುಟಗಳಲ್ಲಿ ಹಲವು ಉಲ್ಲೇಖಗಳು ಸಿಗುತ್ತವೆ. ಆ ಸಂದರ್ಭದ ಹಿನ್ನೆಲೆಯಲ್ಲಿ ಗಮನಿಸಿದಾಗ ಬರ್ನೆಲ್, ಮೆನ್ನರ್ ಮೊದಲಾದವರ ಕಾರ್ಯದ ಮಾದರಿಯ ಇನ್ನೊಂದು ನೆಲೆ ಇಲ್ಲಿನದಾಗಿ ಕಂಡುಬರುತ್ತದೆ.

ಪಠ್ಯ-ಟಿಪ್ಪಣಿಗಳ ಅಂತರ್ಸಂಬಂಧ -ಸಮಕಾಲೀನತೆ

ಪ್ರಸ್ತುತ ಸಂಕಲನದ ಶೀರ್ಷಿಕೆಯನ್ನು ಸಂಪಾದನೆಯ ವೇಳೆ ನೀಡಲಾಗಿದೆ. ಇವೆರಡೂ ಹಸ್ತಪ್ರತಿಗಳು ಮತ್ತು ಅವುಗಳಲ್ಲಿರುವ ಟಿಪ್ಪಣಿಗಳ ಅಂತರ್ಸಂಬಂಧ, ಸಮಕಾಲೀನತೆ ಸಂಬಂಧ ಪ್ರಸ್ತುತತೆಗಳು ಇಲ್ಲಿನ ಬರವಣಿಗೆಗಳಲ್ಲಿ ಹಾಸುಹೊಕ್ಕಾಗಿ ಬಂದಿರುವ ಹಲವು ಅಂಶಗಳಲ್ಲಿ ಸ್ಪಷ್ಟವಾಗುತ್ತದೆ. ಈ ಟಿಪ್ಪಣಿಗಳಲ್ಲಿರುವ ಸ್ಥಾನ ನಿರ್ದೇಶನಗಳು, ಪ್ರದೇಶ ನಿರ್ವಚನಗಳು, ಸಾಮಿಪ್ಯ, ಹೊಕ್ಕುಬಳಕೆ, ಸುಪರಿಚಿತತೆ, ಸಂಬಂಧ, ಮನೋಧರ್ಮ, ಸ್ವ ಮತ್ತು ಅನ್ಯದ ನಿರ್ವಚನ, ಧರ್ಮನಿರ್ದೇಶನ, ಧೋರಣೆ, ಸ್ವಧರ್ಮದ ಒಲವು, ಸ್ವಮತದ ಮೇಲ್ಮೆಯ ಪುನರುಕ್ತಿ, ತೌಲನಿಕ ಅಭ್ಯಾಸದ ಹೊಳಹು, ಪ್ರವಚನಕ್ಕೆ ಸಹಾಯಕವಾಗುವ ಬಗೆ, ಧರ್ಮ ಪ್ರಚಾರ, ಬೈಬಲ್‌ನ ಉಲ್ಲೇಖ ಈ ಹಿನ್ನೆಲೆಯಲ್ಲಿ ಗಮನಾರ್ಹವೆನಿಸುತ್ತವೆ. ಇವೆಲ್ಲಾ ಬರವಣಿಗೆಗಳು ಪ್ರವಚನಕ್ಕಾಗಿ ಬಳಕೆಯಾಗುವ ಬಗೆಯಲ್ಲಿದೆ. ಇಲ್ಲಿ ಪುನರಾವರ್ತನೆಗೊಳ್ಳುವ ಅನೇಕ ವಿಚಾರಗಳು ಅಂತರ್ಸಂಬಂಧ ಸೂಚಕಗಳೂ ಆಗಿವೆ. ಈ ಬರವಣಿಗೆಗಳಲ್ಲಿ ಅಲ್ಲಲ್ಲಿ ಕಾಣಿಸುವ ಮಿಶನ್ ಮತ್ತು ಮಿಶನರಿಗಳ ಉಲ್ಲೇಖವು ಬಾಸೆಲ್ ಮಿಶನರಿಗಳನ್ನು ಸೂಚಿಸುತ್ತದೆ.

ಇಲ್ಲಿ ಸ್ಥಾನ ನಿರ್ದೇಶನದ ವೇಳೆಗೆ ತಮ್ಮ ಸುಪರಿಚಿತ ಪ್ರದೇಶವನ್ನು ಬಳಸಿರುವ ಹಲವು ಉದಾಹರಣೆಗಳಿವೆ. ಕೆಲವು ಟಿಪ್ಪಣಿಗಳ ಶೀರ್ಷಿಕೆಯೂ ಇದನ್ನು ಸೂಚಿಸುತ್ತದೆ. ಒಡಿಪು, ಅತ್ತೂರು, ಬಪ್ಪನಾಡ್, ಉಂಡಾರ್, ಮೂಡಬೆದ್ರ, ಬೆದ್ರ, ಪುತ್ತೆಗಳಂತಹಾ ಸ್ಥಳೀಯ ಪ್ರದೇಶಗಳು ಇದಕ್ಕೆ ಉದಾಹರಣೆಗಳಾಗಿವೆ. 'ಒಡಿಪುದ ಪರಿಯಾಯ ಅಂದ್‌ಂಡ ದಾನೆ?' ಎಂಬ ಟಿಪ್ಪಣಿಯಲ್ಲಿ "*ಯಿಂಚ ಪರಿಯಾಯ ಕುಳ್ಳು ಸ್ವಾಮಿ ಆ ದಿನತಾನಿ ಕಾಂಡೆ ರಾತ್ರೆ ಉಪ್ಪುನಗನೇ ಕಾಪುದ ಕೈತಳ್ ಉಪ್ಪು ದಂಡ್‌ತೀರ್ಥ ಯಿನ್ನಿ ಕೆರೆಟ್ ಮಿಯೊಣ್ದು, ಪಿರ ಬತ್ತ್‌ದ್ ಮಿಶ್ಯೊನು ಕಂಪವುಂಡುದ ಕೈತಳ್ ಮಾರ್ಗದ ಬರಿಟುಪ್ಪು ಜೋಡು ಕಟ್ಟೆದಪ್ಪ ಉಂತುವೆರ್...*"(ಹೀಗೆ ಪರ್ಯಾಯ ಪೀಠವೇರುವ ಸ್ವಾಮಿ ಆ ದಿನ ನಸುಕಿನಲ್ಲಿಯೇ ಕಾಪುವಿನ ಸಮೀಪದಲ್ಲಿರುವ ದಂಡತೀರ್ಥ ಎಂಬ ಕೆರೆಯಲ್ಲಿ ಸ್ನಾನ ಮಾಡಿ ಬಂದು ಮಿಶನ್ ಕಂಪೌಂಡ್‌ನ ಸಮೀಪದಲ್ಲಿ ಮಾರ್ಗದ ಬದಿಯಲ್ಲಿರುವ ಜೋಡುಕಟ್ಟೆಯ ಬಳಿ ನಿಲ್ಲುತ್ತಾರೆ... [A/1441 pp. 404-408]) ಎಂದು ಗುರುತಿಸಿಕೊಳ್ಳಲಾಗಿದೆ. ಉಡುಪಿಯ ಮಿಶನ್ ಕಂಪೌಂಡ್ ಮಿಶನರಿಗಳ ಚಟುವಟಿಕೆಯ

ತಾಣವಾಗಿದ್ದಿತು. ಉಡುಪಿಯಲ್ಲಿ ಮಿಶನರಿಗಳ ಚಟುವಟಿಕೆಯು ೧೮೫೫ರಲ್ಲಿ ಪ್ರಾರಂಭವಾಗಿದ್ದು ಮುಂದಕ್ಕೆ ಹಲವು ಹಂತಗಳಲ್ಲಿ ಬೆಳೆದಿದೆ. ಇಂತಹಾ ನಮೂದುಗಳು ಆ ಸಂಬಂಧವನ್ನು ಮತ್ತಷ್ಟು ಸ್ಪಷ್ಟಪಡಿಸುತ್ತವೆ.

ಈ ಪತ್ರಗಳ ಒಳಗೆ ಮಿಶನರಿಗಳೊಂದಿಗಿನ ಸಂಬಂಧವೂ ಸೂಚಿತವಾಗುತ್ತದೆ. ಹಾಗೆಯೇ ಧರ್ಮದ ಶ್ರೇಷ್ಠತೆಯನ್ನು ನಿರೂಪಿಸುವ ಉಲ್ಲೇಖಗಳಿವೆ. ಧರ್ಮ ಸಂಬಂಧೀ ವಿವರಗಳನ್ನು ತೌಲನಿಕವಾಗಿ ನೀಡಿರುವುದಿದೆ. ಉದಾಹರಣೆಗೆ 'ಭೂತೊಳೆಗ್ ಕೋಲ ಕಟ್ಟುನಿ ಯೇರ್' ಎಂಬ ಟಿಪ್ಪಣಿಯಲ್ಲಿ *"ಆಂಡ ಈ ಕಾಲೊಡು ದೇವೆರ್ ಮಿಶ್ಯೋನುದಾಕುಳೆ ಮುಖೊಟು..."*(ಆದರೆ ಈ ಕಾಲದಲ್ಲಿ ದೇವರು ಮಿಶ್ಯೋನಿನವರ ಮೂಲಕ...[A/1441 pp. 466-467]) ಎಂಬಲ್ಲಿ ಮಿಶನ್ ಕಾರ್ಯಗಳ ಮೂಲಕ ಆಗಿರುವ ಬದಲಾವಣೆಯ ಸೂಚನೆಯಿದ್ದರೆ ಮತಪ್ರಚಾರ ತದನಂತರದ ಬೆಳವಣಿಗೆಯ ಕುರಿತ ಉಲ್ಲೇಖವೂ ಇನ್ನೊಂದೆಡೆ ಕಂಡುಬರುತ್ತದೆ. 'ನರಮಾನ್ಯಗ್ ಭೂತ ಪತ್ತುನಿ ಜರ್ಮನಿ ಅಂದಾ?' ಟಿಪ್ಪಣಿಯಲ್ಲಿ *"ಒರ ಒರ ಅಪರೂಪೊಡು ಭೂತ ಕುಲೆತ ಉಪದ್ರೊಗಾವಡ್, ಧನಿಕುಳೆ ಉಪದ್ರೊಗಾವಡ್, ತಪ್ಪಾವೊಣಿಯೆರೆ ಕ್ರಯಿಸ್ತೆರೆ ಪಾಲ್‌ಗ್ ಬರ್ಪೆರ್. ತನುಕುಳೆ ಅನಪತಿ ಪರಿಹಾರ ಆಯಿ ಮಿತ್ತ್ ಅತ್ತ್‌ಡ ತನುಕುಳು ಯೆಂಣಿ ಕಾರ್ಯ ಕೈಕೂಡ್ದು ಬತ್ತ್‌ಜಿಡ ಪಿರ ಜಾರುವೆರ್. ಯಿಜ್ಜಿಡ ತನುಕುಳೆಗ್ ಉಂದೆಟ್ ಉದ್ಯೋಗದ ಮಾನ ಮರ್ಯಾದಿ ಮಿನಿ ದಾಲ ದಾಂತೆ ಪಾತೆರ ಮಿನಿ ನಡಪಂದಿನೆಡ್ದ್, ತನುಕುಳೆ ದುಂಬುದ ಮತನೇ ಯೆಡ್ಡೆ ಅಂದ್‌ದ್‌ಲಾ ಪಲಾಯನ ಮಳ್ಪುವೆರ್. ಪಾಕ ಜನ ತನುಕುಳು ಬಜೀ ಬಡವೆರಾದಿತ್ತ್‌ಂಡಲಾ ಮಿಶ್ಯೊನುದಾಕುಳೆ ಉಪಕಾರಲೊನು ಯೆಂಣ್‌ದ್ ಒಂಜೊಂಜಿ ಕೆಲಸೊನು ಪತ್ತೊಣ್ದು, ತನುಕುಳೆ ಬಾಲೆಳೆನ್ ಶಾಲೆಗ್ ಒಚ್ಚಿದ್ದ್ ಕೊರಿಯೆರ್. ಕಾಲದ ಮಿತ್ತ್ ಬಾಲೆಳು ಪುಲ್ಲಿಯಾಡ್ದು ಅನೇಕೆರ್ ಕರ್ತವ ಭಕ್ತೆರಾದ್ ಮರ್ಯಾದಿಡ್ ಬದಿಕಿನಾಕುಳು, ನನ ಬದುಕುಳಾದುಳ್ಳೆರ್. ಅಂಡ ಪಾಕದಾಕುಳು ಆವಡ್, ಬಾಲೆಳು ಮಿನಿ ಆವಡ್, ಅಂಚೆಗ್‌ಲಾ ಅತ್ತ್ ಯಿಂಚೆಗ್‌ಲಾ ಅತ್ತ್, ಒರ್ಲ ತಪ್ಪಡ ಯಿರ್ಲ ಉಪ್ಪಡ ಯಿನ್ಪಿಲೆಕ್ಕನೆ ಯಿತ್ತಿ ಲೆಕ್ಕನೇ ಉಳ್ಳೆರ್. ಉಂದು ಮಾತ ಪಿದಯಿದಾಕುಳೆ ಜಾತಿಡ್ ಗೀಲ್ ಜಾತಿದ ವಿಷಯೊಡು ಪಂಡಿನಿ ಹೊರ್ತು ಕ್ರಯಿಸ್ತೆರೆ ಪಾಲ್‌ಗ್, ಗುತ್ತು ಮನತನದಾಕುಳು, ಐಶ್ವರ್ಯವಂತೆರ್, ವಿದ್ವಾಂಸೆರ್, ಯೀ ತುಳು ಸೀಮೆಡ್ ಬೈದಿನಿ ಬಹಳ ಅಪರೂಪ. ಉಂದೆಟ್ ನಮ ದಾನೆ ಪಿದುಕೊಣೊಡು– ದೇವೆರ್ ಗೀಲ್ ಜಾತಿದ ಬಜೀ ಬಡವೆರೆನ್‌ಲಾ ಪ್ರೀತಿ ಮಳ್ಪುವೆ, ಕರುಣ ತೋಜಾವೆ ಯಿನ್ಪಿನರ್ವೇ."* (ಅಪರೂಪಕ್ಕೊಮ್ಮೊಮ್ಮೆ ಭೂತ ಕುಲೆಗಳ ಉಪಟಳವನ್ನಾಗಲೀ, ಧಣಿಗಳ ಉಪದ್ರವವನ್ನಾಗಲೀ ತಪ್ಪಿಸಿಕೊಳ್ಳಲು ಕ್ರೈಸ್ತರ ಪಾಲಿಗೆ ಬರುತ್ತಾರೆ. ತಮ್ಮ ಸಂಕಷ್ಟ ಪರಿಹಾರವಾದ ಮೇಲೆ ಅಥವಾ ತಾವು ಎಣಿಸಿದ ಕಾರ್ಯ ಕೈಗೂಡಿ ಬರದೇ ಹೋದರೆ ಹಿಂದೆ ಸರಿಯುತ್ತಾರೆ. ಇಲ್ಲವಾದರೆ ತಮಗೆ ಇದರಿಂದ ಉದ್ಯೋಗ ಮಾನ

ಮರ್ಯಾದಿಗಳೇನೂ ಇಲ್ಲದೆ, ಮಾತು ನಡೆಯದೇ ಹೋದುದರಿಂದ ತಮ್ಮ ಹಿಂದಿನ ಮತವೇ ಒಳ್ಳೆಯದೆಂದೂ ಪಲಾಯನ ಮಾಡುತ್ತಾರೆ. ಹಲವು ಮಂದಿ ತಾವು ಬರೀ ಬಡವರಾಗಿದ್ದರೂ ಮಿಶ್ಯನ್‌ನವರ ಉಪಕಾರಗಳನ್ನು ಗಮನಿಸಿ ಒಂದೊಂದು ಕೆಲಸವನ್ನು ಹಿಡಿದುಕೊಂಡು ತಮ್ಮ ಮಕ್ಕಳನ್ನು ಶಾಲೆಗೆ ಒಪ್ಪಿಸಿಕೊಟ್ಟರು. ಕಾಲ ಕಳೆದಂತೆ ಮಕ್ಕಳು, ಮೊಮ್ಮಕ್ಕಳು ಅನೇಕರು ಕರ್ತವನ ಭಕ್ತರಾಗಿ ಮರ್ಯಾದಿಯಿಂದ ಇನ್ನೂ ಬದುಕಿದವರಾಗಿದ್ದಾರೆ. ಆದರೆ ಹಲವು ಮಂದಿಯಾಗಲೀ, ಮಕ್ಕಳಾಗಲೀ ಆಚೆಗೂ ಅಲ್ಲ ಈಚೆಗೂ ಅಲ್ಲ, 'ಒಂದು ಬಳ್ಳ ತಪ್ಪದು, ಎರಡು ಬಳ್ಳ ಇರದು' ಎನ್ನುವ ಹಾಗೆ ಇದ್ದ ಹಾಗೆಯೇ ಇದ್ದಾರೆ. ಇದು ಎಲ್ಲವೂ ಹೊರ ಜಾತಿಯ, ಕೀಳು ಜಾತಿಯ ವಿಷಯದಲ್ಲಿ ಹೇಳಿದ್ದೇ ಹೊರತು ಕ್ರೈಸ್ತರ ಪಾಲಿಗೆ ಗುತ್ತು ಮನೆತನದವರು, ಶ್ರೀಮಂತರು, ವಿದ್ವಾಂಸರು ಈ ತುಳು ಸೀಮೆಯಲ್ಲಿ ಬಂದುದು ಬಹಳ ಅಪರೂಪ. ಇದರಲ್ಲಿ ನಾವು ಏನು ತಿಳಿದುಕೊಳ್ಳಬೇಕು–ದೇವರು ಕೀಳು ಜಾತಿಯ ಬರೀ ಬಡವರನ್ನೂ ಪ್ರೀತಿಸುತ್ತಾನೆ, ಕರುಣೆ ತೋರುತ್ತಾನೆ ಎನ್ನುವುದೇ...[A/1441 pp.430-435]). ಮತಾಂತರ ಮತ್ತು ತದನಂತರದ ಬೆಳವಣಿಗೆಗಳು ಬಹು ಚರ್ಚೆಯ ಸಂಕೀರ್ಣ ವಿಷಯಗಳು. ಅಂದಿನ ಸಮಕಾಲೀನ ಸಂದರ್ಭದ ಅರ್ಥೈಸುವಿಕೆಗೆ ಸಹಾಯಕವಾಗಬಲ್ಲ ಉಲ್ಲೇಖವಿದು. ಶ್ರೀನಿವಾಸ ಹಾವನೂರ ಅವರ 'ಹೊಸಗನ್ನಡದ ಅರುಣೋದಯ'ದಲ್ಲಿರುವ ವಿಚಾರಗಳನ್ನೂ ಇದಕ್ಕೆ ಪೂರಕವಾಗಿ ಗಮನಿಸಬಹುದು.

ಈ ಟಿಪ್ಪಣಿಗಳ ನಡುವೆ ಅಲ್ಲಲ್ಲಿ ಸ್ವ ಮತ್ತು ಅನ್ಯದ ನಿರ್ವಚನ ಕಂಡುಬರುತ್ತದೆ. ತೌಲನಿಕ ದೃಷ್ಟಿಯು ಎದ್ದು ಕಾಣಿಸುವ ಅಂಶವಾಗಿದೆ. ತಮ್ಮದಲ್ಲದ ಧರ್ಮವನ್ನು ನಿರ್ದೇಶಿಸುವ, ಗಮನಿಸುವ ಹಲವು ಉದಾಹರಣೆಗಳು ಸಿಗುತ್ತವೆ. 'ಒಡಿಪುದ ಪರಿಯಾಯ ಅಂದ್‌ಂಡ ದಾನೆ?' ಟಿಪ್ಪಣಿಯಲ್ಲಿ *"ಹಿಂದುಳು ಸ್ವಾಮಿಳೆಗ್ ದೇವೆರೆ ಲೆಕ್ಕನೇ ಮಾನ ಮರ್ಯಾದಿ ಕೊರ್ಪೆರ್. ಬ್ರಾಣೆರಾಂಡಲಾ ಸ್ವಾಮಿಳೆ ಪಾದದ ದುಂಬು ಅಡ್ಡ ಬೂರುವೆರ್. ಪಾದ ಮುಟ್ಟೆಯೆರೆ ಬಲ್ಲಿ."* (ಹಿಂದುಗಳು ಸ್ವಾಮಿಗಳನ್ನು ದೇವರಂತೆಯೇ ಗೌರವಿಸುತ್ತಾರೆ. ಬ್ರಾಹ್ಮಣರಾದರೂ ಸ್ವಾಮಿಗಳ ಪಾದದ ಮುಂದೆ ಅಡ್ಡ ಬೀಳುತ್ತಾರೆ. ಪಾದವನ್ನು ಮುಟ್ಟುವಂತಿಲ್ಲ [A/1441 pp. 404-408]) ಎಂಬಲ್ಲಿ ಧರ್ಮದ ನಿರ್ದೇಶನ ಸ್ಪಷ್ಟವಾಗುತ್ತದೆ.

ಬರವಣಿಗೆಯೊಳಗೆ ಅಂದು ಸ್ವಧರ್ಮದ ಮೇಲ್ಮೆಯನ್ನು ಸೂಚಿಸುವ ಉಲ್ಲೇಖವೂ ಇದೆ. 'ಮನ್ನಾರ ಗುಡಿ' ಟಿಪ್ಪಣಿಯಲ್ಲಿ *"...ಐಡ್ದಾವರ ಅರಸು ತರತರತವು ಬೋಡಾಯಿನಾತ್ ಕಾನಿಗೆಳೆನ್ ಪತ್ತೊಂಡು ಸೇವೆ ಮಳ್ಪೆರೆ ಆ ಗುಡಿಕ್ ಬತ್ತೆ. ಆಂಡ ಆ ಅರಸು ಕೈತಳ್ ಸತ್ಯ ದೇವೆರೆನ್ ನಂಬಿಂಚೆತ್ತಿ ಬುದ್ಧಿವಂತೆ (ಜ್ಞಾನಿ) ಒರಿ ಇತ್ತೆ....."* (..ಆದ್ದರಿಂದ ಅರಸ ತರ ತರದ ಬೇಕಾದಷ್ಟು ಕಾಣಿಕೆಗಳನ್ನು ಹಿಡಿದುಕೊಂಡು ಸೇವೆ ಮಾಡಲು ಆ ಗುಡಿಗೆ ಬಂದ. ಆದರೆ ಅರಸನೊಂದಿಗೆ ಸತ್ಯ ದೇವರನ್ನು ನಂಬಿದ್ದಂತಹ

ಬುದ್ಧಿವಂತ (ಜ್ಞಾನಿ) ಒಬ್ಬನಿದ್ದ [A/2564-5]) ಎಂದಿದ್ದು ದೇಗುಲವೊಂದರ ಅವ್ಯವಹಾರವನ್ನು ಬಯಲಿಗೆಳೆಯುವುದು ಅರಸನ ಬಳಿಯಿದ್ದ 'ಸತ್ಯ ದೇವರ (ಏಸುಕ್ರಿಸ್ತ)ನ್ನು ನಂಬಿದ ಜ್ಞಾನಿ' ಎಂದು ಸೂಚಿಸಲಾಗಿದೆ.

ನೇರವಾಗಿ 'ಸತ್ಯವೇದ' ಎಂದರೆ ಬೈಬಲ್‌ನ ಪ್ರಸ್ತಾಪವೂ ಟಿಪ್ಪಣಿಗಳಲ್ಲಿ ಕಂಡುಬರುತ್ತದೆ. ಜೊತೆಗೆ ಬರೆಯುವ ಉದ್ದೇಶ ಮನೋಧರ್ಮಗಳೂ ಅಲ್ಲಲ್ಲಿ ಗೋಚರವಾಗುತ್ತವೆ. ಆ ಟಿಪ್ಪಣಿಗಳ ಬಳಕೆಯ ಸಾಧ್ಯತೆಯೂ ಅರಿವಾಗುತ್ತದೆ. ಹಾಗೆಯೇ ಸ್ಥಳೀಯ ಪದಗಳನ್ನು ಭಾಷಾಂತರಿಸಿಕೊಳ್ಳುವ ಬಗೆಯನ್ನು ಇಲ್ಲಿ ಗಮನಿಸಬಹುದು. ಸ್ಥಳೀಯ ಭಾಷೆಯನ್ನು ಒಗ್ಗಿಸಿಕೊಳ್ಳುವ ಪ್ರಯತ್ನಗಳಿಗೂ ಇದು ಉದಾಹರಣೆ ಯಾಗುತ್ತದೆ. ಬೈಬಲ್ (ಸತ್ಯವೇದ), ಏಸುಕ್ರಿಸ್ತ (ಸತ್ಯ ದೇವರು), ದೇವರು(ಕರ್ತವೆ), ಧರ್ಮದ ಸಾರಾಂಶ (ವಿಶ್ವಾಸ ಪ್ರಮಾಣ), ದಶಾಜ್ಞೆ(ಪತ್ತ್ ಅಪ್ಪಣೆ) ಮೊದಲಾದ ಪದಗಳನ್ನು ಗಮನಿಸಬಹುದು. 'ತಿರುಪತಿ ಗುಡಿ' ಟಿಪ್ಪಣಿಯಲ್ಲಿ ಹೀಗಿದೆ: *"ಉಂದೆತ ಮುದೆಲ್‌ನ್ ಸತ್ಯವೇದೊಡು ಸರಿಯಾದ್ ದಾಲಾ (ಅನುಮಾನ) ಸಂಕಲ್ಪ ದಾಂತೆ ತೋಜಾವೊಲಿ."*(ಇದರ ಮೂಲವನ್ನು ಸತ್ಯವೇದದಲ್ಲಿ ಸರಿಯಾಗಿ ಏನೂ ಅನುಮಾನ ವಿಲ್ಲದಂತೆ ತೋರಿಸಬಹುದು. [A/2564-5]).

'ಮಂತ್ರ' ಎಂಬ ಟಿಪ್ಪಣಿಯಡಿಯಲ್ಲಿ *"ತಾಜ ಮಂತ್ರಲಾ ಉಂಡು. ಈ ಮಂತ್ರ ನರಮಾನ್ಯರೆಗ್ ಈ ಲೋಕೊಡು ಬೋಡೇ ಬೋಡು. ನರಮಾನಿ ದೇವೆರೆನ್ ಪೂರ್ತಿ ಮನಸ್‌ಡ್ದ್ ಸುಗಿಪುನವುಲಾ ಒಂಜಿ ಮಂತ್ರ. ಕರ್ತವೆ ಕಲ್ಪಾದ್ ಕೊರಿ ಪ್ರಾರ್ಥನೆಲಾ ಒಂಜಿ ಮಂತ್ರ. ಕರ್ತವ ವಿಶ್ವಾಸ ಪ್ರಮಾಣಲಾ ಪತ್ತ್ ಅಪ್ಪಣೆಲಾ ನಿಜ ಮಂತ್ರ. ಈ ತಾಜ ಮಂತ್ರೊಡ್ದು ನಿಜ ಕ್ರಯಿಸ್ತೆರ್ ಮಹಾ ಮಲ್ಲ ಪರಮಾತ್ಮನೇ ವಶ ಮಲ್ತೊಣೊಲಿ."* (ಒಳ್ಳೆಯ ಮಂತ್ರವೂ ಇದೆ. ಈ ಮಂತ್ರ ಜನರಿಗೆ ಈ ಲೋಕದಲ್ಲಿ ಬೇಕೇ ಬೇಕು. ಜನರು ದೇವರನ್ನು ಪೂರ್ತಿ ಮನಸ್ಸಿನಿಂದ ಸ್ತುತಿಸುವುದೂ ಒಂದು ಮಂತ್ರ. ಕರ್ತವನು ಕಲಿಸಿಕೊಟ್ಟ ಪ್ರಾರ್ಥನೆಯೂ ಒಂದು ಮಂತ್ರ. ಕರ್ತನ ವಿಶ್ವಾಸ ಪ್ರಮಾಣವೂ ದಶಾಜ್ಞೆಯೂ ನಿಜ ಮಂತ್ರ. ಈ ಒಳ್ಳೆಯ ಮಂತ್ರದಿಂದ ನಿಜ ಕ್ರೈಸ್ತರು ಪರಮಾತ್ಮನನ್ನೇ ವಶ ಮಾಡಿಕೊಳ್ಳಬಹುದು...[A/1441 pp. 390-392]) ಎಂದು ಹೇಳಲಾಗಿದೆ.

ಕೆಲವೆಡೆ ಒಂದಕ್ಕೊಂದು ಸಂಬಂಧವಿರುವ ಟಿಪ್ಪಣಿಗಳು ಒಟ್ಟಿಗೆ ಕಾಣಿಸಿಕೊಳ್ಳುತ್ತವೆ. ಮಂತ್ರ, ತಂತ್ರಗಳು ಇಂತಹುದೇ ಟಿಪ್ಪಣಿಗಳಾಗಿವೆ. 'ತಂತ್ರ' ಟಿಪ್ಪಣಿಯ ಉಲ್ಲೇಖವನ್ನಿಲ್ಲಿ ಗಮನಿಸಬಹುದು. *"ಆದಿಡ್ ಅಪ್ಪೆ ಅಮ್ಮಾಡ್ಲು ಪಾಪೊಡು ಬೂರುಲೆಕ್ಕ ಸೈತಾನೆ ತಂತ್ರ ಗೊಬ್ಬಿಯೆ. ಯೆಹೂದ್ಯೆರ್ ಕರ್ತವನ್ ತಂತ್ರೊಡು ತಿಕ್ಕಾವೆರೆ ತೂಯೆರ್. ಯೂದೆ ಯಿಸ್ಕಾರಿಯೋತು ಕರ್ತವನ್ ತಂತ್ರೊಡು ಒಚ್ಚಿದ್ ಕೊರಿಯೆ. ದಾವೀದ್ ಅರಸು ಉರಿಯನ್ ತಂತ್ರೊಡು ಕೆರ್ಪಾಯೆ. ಯಾಕೋಬು ತನ ಪಲಯ ಆಶೀರ್ವಾದೊನು ತಂತ್ರೊಡು ವೈಸೊಂಡೆ."* (ಆದಿಯಲ್ಲಿ ಮಾತಾಪಿತೃಗಳು ಪಾಪದಲ್ಲಿ ಬೀಳುವಂತೆ

ಸೈತಾನ ತಂತ್ರ ಮಾಡಿದ. ಯಹೂದ್ಯರು ಕರ್ತವನನ್ನು ತಂತ್ರದಲ್ಲಿ ಸಿಲುಕಿಸಲು ನೋಡಿದರು. ಇಸ್ಕಾರಿಯೋತ್ ಯೂದನು ಏಸುವನ್ನು ತಂತ್ರದಿಂದ ಹಿಡಿದುಕೊಟ್ಟ. ದಾವೀದ ಅರಸು ಉರಿಯನನ್ನು ತಂತ್ರದಿಂದ ಕೊಲ್ಲಿಸಿದ. ಯಾಕೋಬ ತನ್ನ ಅಣ್ಣನ ಆಶೀರ್ವಾದವನ್ನು ತಂತ್ರದಿಂದ ಪಡೆದುಕೊಂಡ...[A/1441 pp. 392-393])

ಇಲ್ಲಿ ದಾಖಲು ಮಾಡುವವರ ಮನೋಧರ್ಮ ನಂಬಿಕೆಯೂ ಬರುತ್ತದೆ. ಉದಾಹರಣೆಗೆ 'ಅತ್ತೂರುದ ಸ್ತಾನ ಗರೋಡಿ ಕುಕ್ಕಿನಂದಾಯಗ್ ಕೊಡಮಂದಾಯಗ್ ಬೈದರ್ಲೆಗ್ ಆಪಿ ಕೋಲದ ಸಂಗತಿ'ಯಲ್ಲಿ *"ಮನದಾನಿ ಕಾಂಡೆ ಪಿರ ಲಕ್ಕೊಂಡ್ದು ಪೋನಗ ಇನಿ ಮಾತ್ರ ಈ ಕೋಲೊಗು ಸಾವು ಬರಡ್ ನಿಗ್ರೆ ಕಜ್ವೆರ್‌ದ್ ಸೈಯ್ಯರೆ ತೀರುಜಿ ಅಂದ್‌ದ್ ಭೂತೊಳೆಗ್ ಸಾರ ಸಾರ ನೆರೊಂಡ್ದು, ದೂರೊಂಡ್ದು, ಮಾಲೊಂಡ್ದು ಮೆಲ್ಲ ಮೆಲ್ಲನೆ ಇಲ್ಲಗ್ ಪೋಪೆರ್."* (ಮರುದಿನ ಬೆಳಗ್ಗೆ ಮರಳಿ ಎದ್ದು ಹೋಗುವಾಗ ಈ ದಿನ ಮಾತ್ರ ಈ ಕೋಲಕ್ಕೆ ಸಾವು ಬರಲಿ ಎಂದು ಭೂತಗಳಿಗೆ ಸಾವಿರ ಸಾವಿರ ಬೈದುಕೊಂಡು, ದೂರಿಕೊಂಡು, ವಾಲಿಕೊಂಡು ಮೆಲ್ಲ ಮೆಲ್ಲಗೆ ಮನೆಗೆ ಹೋಗುವರು. [A/2564-3]).

ಹಾಗೆಯೇ ಇನ್ನೊಂದೆಡೆ 'ಮಾರಿ ದೇರುನಿ ಅಂದ್‌ಂಡ ದಾನೆ?' ಎಂಬ ಟಿಪ್ಪಣಿಯಲ್ಲಿ *"ಆಂಡ ಯಿಂಚಿತ್ತಿ ರೋಗ ಬತ್ತಿ ಕಾಲೊಡು ಮಾರಿಗ್ ದರ್ಶನೊಗು ಮಿನಿ ಉಂತು ಸೇವೆದ ನರಮಾನಿಳೆಗ್ ಮಲ್ಲ ಪಡವೇ ಸೈ. ಈ ಮಾರಿದ ಒಟ್ಟುಗು ದಿಂಜ ಗಂಡ ಗಣೊಕುಳು (ಪಿಶಾಚಿಲು) ಉಳ್ಳಗೆ. ಐಕುಳು ಯಿಂಚಿತ್ತಿ ಸಮಯೊಡು ಆಹಾರ ನಟ್ಟುನಿ ಜೋರುಗೆ. ಉಂದು ನರಮಾರಿಳೆ ತಂತ್ರ ಬೇತೆ (ಯಿತರ) ಸಮಯೊಡು ಯೇರ್ ಮೂಸುವೆರ್."* (ಆದರೆ ಇಂತಹ ರೋಗ ಬಂದ ಸಮಯದಲ್ಲಿ ಮಾರಿಗೆ ದರ್ಶನಕ್ಕೆ ನಿಲ್ಲುವ ಸೇವೆಯ ನರರಿಗೆ ದೊಡ್ಡ ಲಾಭವೇ ಸರಿ. ಈ ಮಾರಿಯ ಜೊತೆಗೆ ಬಹಳಷ್ಟು ಗಂಡ ಗಣಗಳು (ಪಿಶಾಚಿಗಳು) ಇವೆಯಂತೆ. ಅವುಗಳು ಇಂತಹ ಸಮಯದಲ್ಲಿ ಆಹಾರ ಬೇಡುವುದು ಜೋರಂತೆ. ಇದು ಮನುಷ್ಯರ ತಂತ್ರ ಇತರ ಸಮಯದಲ್ಲಿ ಯಾರು ಮೂಸುತ್ತಾರೆ. [A/1441 pp. 408-410]) ಎಂಬುದು ಕಂಡುಬರುತ್ತದೆ.

ಪ್ರತಿಕ್ರಿಯೆಯ ಧಾಟಿಯೂ ಇದರಲ್ಲಿದೆ. ಕತೆ ಹೇಳುವುದರೊಂದಿಗೆ ಬರೆಯುವವರ ಉದ್ದೇಶವೂ ಸೇರುವ ಉದಾಹರಣೆಗಳಿವೆ. 'ಅತ್ತೂರು ದೇವಸ್ಥಾನ ದೇವೆರೆ ಕಥೆ. ಅಳ್ತ ದೇವೆರ್ ವಿಷ್ಣುಮೂರ್ತಿ' ಟಿಪ್ಪಣಿಯಲ್ಲಿ ಹೀಗಿದೆ: *"ಈ ಸರ್ತಿದೆಕ್ಕ್ ಮಾತ್ರ ಯೆಂಚಲಾ ಕೊರೊಡು ಅಂದ್‌ದ್ ಹಟ ಮಳ್ತ್‌ದ್, ಉಪದ್ರ ಕೊರುದು ಮಾತೆರೆಡ್ಡ್‌ಲಾ ವೊಂತಿಗೆ ಉಸುಲು ಮಳ್ತೆರ್......ದೇವರೆ ಮೂರ್ತಿ ಕಂಣ್ ಮುಚ್ಚಿದ್ ಮನಿಪಂದೆ ಕುಳ್ಳೊಂಡ್ದುಂಡು. ಕಂಣ್ ಕೂರುಂಡು. ನನ ಪಾಕ ವರ್ಸದ ಮಿತ್ತ್ ಜೆಪ್ಪುಂಡು"* (ಈ ಬಾರಿಯದಕ್ಕೆ ಮಾತ್ರ ಹೇಗಾದರೂ ಕೊಡಬೇಕು ಎಂದು ಹಟ ಮಾಡಿ, ಕಿರುಕುಳ ಕೊಟ್ಟು

ಎಲ್ಲರಿಂದಲೂ ವಂತಿಗೆ ವಸೂಲು ಮಾಡಿದರು... ...ದೇವರ ಮೂರ್ತಿ ಕಣ್ಣು ಮುಚ್ಚಿ ಸುಮ್ಮನೆ ಕುಳಿತುಕೊಂಡಿದೆ. ಕಣ್ಣು ತೂಕಡಿಸುತ್ತದೆ. ಇನ್ನು ಹಲವು ವರ್ಷದ ನಂತರ ಮಲಗುತ್ತದೆ... [A/2564-3])

ಇಲ್ಲಿನ ಅಂತರ್ ಪಠ್ಯ ಸಂಬಂಧ ವಿಶೇಷವಾಗಿ ಗಮನ ಸೆಳೆಯುತ್ತದೆ. ಈ ಸಂಬಂಧವು ಟಿಪ್ಪಣಿಗಳೊಳಗೆ, ಎರಡೂ ಪಠ್ಯಗಳೊಳಗೆ ಮತ್ತು ಅಂದಿನ ಈ ಪರಂಪರೆಯ ಇನ್ನಿತರ ಬರವಣಿಗೆಗಳೊಂದಿಗಿದೆ. ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಸಾಮಿಪ್ಯವಿರುವ, ಸಾತತ್ಯವಿರುವ ಟಿಪ್ಪಣಿಗಳು ಪುಸ್ತಕ ಹಾಗೂ ಕಿರುಪುಸ್ತಕಗಳಲ್ಲಿ ದೊರಕಿರುವುದು ಗಮನಾರ್ಹ. ತಿರುಪತಿ ಯಾತ್ರೆಯ ಬಗೆಗೆ 'ತಿರ್ಪತಿ ಯಾತ್ರೆ' [A/1441 pp.397-401] ಎಂಬ ಟಿಪ್ಪಣಿಯು ಒಂದೆಡೆಗಿದ್ದರೆ ತಿರುಪತಿ ಗುಡಿಯ ಬಗೆಗೆ ಇನ್ನೊಂದೆಡೆಗೆ 'ತಿರುಪತಿ ಗುಡಿ' [A/2564-5] ಎಂಬ ಟಿಪ್ಪಣಿಯಿದೆ. ಅದೇ ರೀತಿ ತುಳುವರ ಉತ್ತರಕ್ರಿಯೆಯ ಬಗ್ಗೆ 'ತುಳು ಜನತ ಬೊಜ್ಜ' [A/1441 pp.419-422] ಎಂಬ ಟಿಪ್ಪಣಿ ಒಂದೆಡೆಗೂ 'ಸೈತಿನಾಕುಳೆಗ್ ಮಳ್ಪು ಬೊಜ್ಜ' [A/2564-1] ಇನ್ನೊಂದೆಡೆಗೂ ಕಂಡುಬರುತ್ತದೆ. ಇವೆರಡರ ಭಾಷೆ ಶೈಲಿ ಮತ್ತು ವಸ್ತು ವಿಷಯಗಳು ಒಂದಕ್ಕೊಂದು ಪೂರಕವಾಗಿವೆ. ಭೂತಾರಾಧನೆಗೆ ಸಂಬಂಧಪಟ್ಟಂತೆ ಎರಡೂ ಪಠ್ಯಗಳಲ್ಲಿ ಬರವಣಿಗೆಗಳಿವೆ. ಸಮಾನ ಆಸಕ್ತಿ ಮತ್ತು ವಿಷಯ ನಿರೂಪಣೆಯ ಟಿಪ್ಪಣಿಗಳು ಇಲ್ಲಿವೆ. ಭೂತಾರಾಧನೆ ಮತ್ತು ತತ್ಸಂಬಂಧಿ ನಂಬಿಕೆಗಳಿಗೆ ಸಂಬಂಧಪಟ್ಟಂತೆ 'ಅತ್ತೂರುದ ಸ್ತಾನ ಗರೋಡಿ ಕುಕ್ಕಿನಂದಾಯಗ್ ಕೊಡಮಂದಾಯಗ್ ಬೈದೆರ್ಲೆಗ್ ಆಪಿ ಕೋಲದ ಸಂಗತಿ' [A/2564-3], 'ಬಪ್ಪನಾಡ್ ಉಳ್ಳಾಳ್ದಿನ ಬೊಕ್ಕ, ಬಿತ್ತ್‌ಲ್‌ದ ದೈಯೊಂಗುಳೆನವು ಮೂಲ ಚರಿತ್ರೆ' [A/2564-6], 'ಜಕ್ಕಿನಿನ್ ಬುಡುಪಾವುನು ಯೆಂಚ?' [A/1441 pp. 393-396], 'ಮಾರಿ ದೇರುನಿ ಅಂದ್‌ಂಡ ದಾನೆ?'[A/1441 pp. 408-410], 'ನರಮಾನ್ಯಗ್ ಭೂತ ಪತ್ತುನಿ ಜರ್ಪುನಿ ಅಂದಾ?' [A/1441 pp.430-435], 'ಭೂತೊಳೆಗ್ ಕೋಲ ಕಟ್ಟುನಿ ಯೇರ್' [A/1441 pp. 466-467]ಗಮನಾರ್ಹವಾದವು.

ಅಂತೆಯೇ 'ದೇವೇಂದ್ರ ಕಥೆ' [A/2564-5], 'ದೇವೆರೆ ಲಕ್ಷಣೊಳು' [A/1441 pp.31-35], 'ತ್ರಿಮೂರ್ತಿಳೆ ಕಥೆ' [A/1441 pp.35-45], 'ಬ್ರಹ್ಮ ಕಥೆ' [A/1441 pp.45-47], 'ಈಶ್ವರ ಕಥೆ' [A/1441 pp.47-56]ಗಳು ಸಮಾನ ರೀತಿಯ ನಿರೂಪಣೆ ಹೊಂದಿವೆ. ವಸ್ತು, ಶೈಲಿ, ಭಾಷಾ ಬಳಕೆಗಳೂ ಸಮಾನವಾಗಿವೆ. ಅವುಗಳನ್ನು ಮುಂದಿನ ಸಂಕಲನದಲ್ಲಿ ಪ್ರಕಟಿಸುವ ಉದ್ದೇಶವಿರುವುದರಿಂದ ಇಲ್ಲಿ ಬಳಸಿಕೊಳ್ಳಲಾಗಿಲ್ಲ.

ಒಂದೇ ವಿಷಯಕ್ಕೆ ಸಂಬಂಧಪಟ್ಟಂತೆ ಬರುವ ಟಿಪ್ಪಣಿಗಳ ನಡುವಿನ ಸಾತತ್ಯವೂ ಗಮನಾರ್ಹವಾದುದು. ಉದಾಹರಣೆಗೆ 'ಸ್ವರ್ಗ ನರಕ'[A/2564-1]ದಲ್ಲಿ ಕಂಡುಬರುವ ಮಗ ಮಾಡುವ ಉತ್ತರಕ್ರಿಯೆಯ ಫಲದ ವಿಚಾರವು ಅದೇ ಕಿರುಪುಸ್ತಕದಲ್ಲಿರುವ 'ಸೈತಿನಾಕುಳೆಗ್ ಮಳ್ಪು ಬೊಜ್ಜ' [A/2564-1] ಟಿಪ್ಪಣಿಯೊಂದಿಗೂ, ಇನ್ನೊಂದು

ಪತ್ಯದಲ್ಲಿರುವ 'ತುಳು ಜನತ ಬೊಜ್ಜ'[A/1441 pp.419-422]ದೊಂದಿಗೂ ಸಾತತ್ಯವನ್ನು ಸಾಧಿಸುತ್ತದೆ. 'ಸೈತಿನಾಕುಳೆಗ್ ಮಳ್ಪು ಬೊಜ್ಜ' ಟಿಪ್ಪಣಿಯಲ್ಲಿ *"ಐಡ್ದ್ ಬೊಕ್ಕ ಆಕುಳು ಇಂಬ್ಯನ್ ಪುಗರ್‌ದ್ ನಿನ ಅಮ್ಮೆ ಸ್ವರ್ಗೊಗು ಶೇರಿಯೆ ಅಂದ್‌ದ್ ಆಶೀರ್ವಾದ ಕೊರ್ಪೆರ್...ನಿನ್ನ ಅಮ್ಮಗ್ ಸದ್ಗತಿ ಆಂಡ್. ಸ್ವರ್ಗೊಗು ಶೇರಿಯೆ. ಈ ಇಂಚಿತ್ತಿ ಪೊರ್ಲುದ ಕೆಲಸ ಮಳ್ತಿನೆಡ್ದ್ ಸುಪುತ್ರೆ ಅಂದ್‌ಂಡ ಯೆಡ್ಡೆ ಮಗೆ ಅಂದ್‌ದ್ ಪಣ್ಪಾವೊಂಡ."* (ಅದರ ನಂತರ ಅವರು ಇವನನ್ನು ಹೊಗಳಿ ನಿನ್ನ ತಂದೆ ಸ್ವರ್ಗಕ್ಕೆ ಸೇರಿದ. ನೀನು ಇಂತಹಾ ಒಳ್ಳೆಯ ಕೆಲಸ ಮಾಡಿದ್ದರಿಂದಾಗಿ ಸುಪುತ್ರನೆನಿಸಿಕೊಂಡೆ... [A/2564-1]) ಎಂದು ಹೇಳಿದೆ. ಅದೇ 'ಸ್ವರ್ಗ ನರಕ' ಟಿಪ್ಪಣಿಯಲ್ಲಿ *"ಸೈತಿನಾಯೆ ತಾನ್ ಜೀವೊಡು ಉಪ್ಪುನಗ ನೀತಿ ಸತ್ಯದ ನಡತೆಡ್ ನಡತ್‌ದಿನಾಯೆ ಆದಿತ್ತ್ಂಡ ಇಂಚಿತ್ತಿನಾಯಗ್ ಆಯ ಮಗೆಲಾ ದೇವೆರೆ ಮಿತ್ತ್ ವಿಶ್ವಾಸ ದೀದ್ ನರಮಾನ್ಯರೆಗ್ ಮೆಚ್ಚುಲೆಕ್ಕ ವಾ ಒಂಜಿ ಕೆಲಸಲಾ ಡಂಭಾಚಾರೊಡು ಮಳ್ಪಂದೆ ತಾನ್ ಮಳ್ಪುನವು ದೇವೆರೆಗ್ ಮೆಚ್ಚೊಡು, ಆಯಗ್ ಸಂತೋಷ ಆವೊಡು, ಆಯೆ ಯೆನ ಅಮ್ಮಗ್ ಸ್ವರ್ಗಲೋಕ ಕೊರೊಡು ಅಂದ್‌ದ್ ಭಕ್ತಿಡ್ ಮಾತಲಾ ಮಳ್ತೊಂಡ್ದು ಬರ್ಪೆಡ ಆಯ ಅಮ್ಮಗ್ ಸ್ವರ್ಗ ತಿಕ್ಕುಂಡು ಇನ್ಪೆರ್."* (ಸತ್ತವನು ತಾನು ಜೀವದಿಂದಿರುವಾಗ ನೀತಿ ಸತ್ಯದ ನಡತೆಯಲ್ಲಿ ನಡೆದವನಾಗಿದ್ದರೆ ಇಂತವನಿಗೆ ಆತನ ಮಗನೂ ದೇವರ ಮೇಲೆ ವಿಶ್ವಾಸವಿರಿಸಿ ಜನರು ಮೆಚ್ಚುವಂತೆ ಯಾವೊಂದು ಕೆಲಸವೂ ಡಂಭಾಚಾರದಿಂದ ಮಾಡದೆ ತಾನು ಮಾಡುವುದು ದೇವರಿಗೆ ಮೆಚ್ಚಬೇಕು, ಆತನಿಗೆ ಸಂತೋಷವಾಗಬೇಕು, ಆತ ತನ್ನ ಅಪ್ಪನಿಗೆ ಸ್ವರ್ಗಲೋಕ ನೀಡಬೇಕು ಎಂದು ಭಕ್ತಿಯಿಂದ ಎಲ್ಲವನ್ನೂ ಮಾಡುತ್ತಾ ಬಂದರೆ ಆತನ ಅಪ್ಪನಿಗೆ ಸ್ವರ್ಗ ಸಿಗುತ್ತದೆ ಎನ್ನುತ್ತಾರೆ...[A/2564-1]) ಎಂಬ ವಿಚಾರವಿದೆ. ಇದೇ ಮಾದರಿಯನ್ನು ಮದುವೆ, ಆಚರಣೆ, ಆರಾಧನೆ, ಸ್ಥಳಪುರಾಣಗಳಿಗೆ ಸಂಬಂಧಿಸಿದ ಟಿಪ್ಪಣಿಗಳಲ್ಲಿಯೂ ಕಾಣಬಹುದು.

ಹಲವೆಡೆ ಬರುವ ವ್ಯಾಜ್ಯದ ಪ್ರಸ್ತಾಪಗಳಲ್ಲಿಯೂ ಇಂತಹಾ ಸಂಬಂಧವು ಕಂಡುಬರುತ್ತದೆ. 'ಅಳಿಯ ಸಂತಾನ ಆಯಿನಿ ಯೆಂಚ?' [A/1441 pp. 410-416] ಟಿಪ್ಪಣಿಯಲ್ಲಿ ಬರುವ *"ತುಳು ಜನೊಕುಳೆಡ್ ವ್ಯಾಜ್ಯೊಡು ಪರಾಕ್ರಮಿಳು ಒಕ್ಕಲಾಕುಳೇ ಸೈ"* ಎಂಬಂತಹ ಹೇಳಿಕೆಗಳು, ಪೂರಕ ಘಟನಾವಳಿಗಳು, ವ್ಯಾಜ್ಯದ ವಿವರ ಮತ್ತು ನಾಟಕೀಯವಾದ ದೀರ್ಘ ಟಿಪ್ಪಣಿ 'ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ' [A/1441 pp. 435-466] ಸಂಪೂರ್ಣವಾಗಿ ವ್ಯಾಜ್ಯಫಲಕ್ಕೆ ಸಂಬಂಧಿಸಿರುವುದು ಕಂಡು ಬರುತ್ತದೆ. ಅಲ್ಲದೆ ಬಾಸೆಲ್ ಮಿಶನ್‌ನವರು ವ್ಯಾಜ್ಯ ಸಂಬಂಧೀ ಹಲವು ಕಿರುಪುಸ್ತಕಗಳನ್ನು ಪ್ರಕಟಿಸಿರುವುದು ಗಮನಾರ್ಹ. 'ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ'ಕ್ಕೂ ಬಾಸೆಲ್ ಮಿಶನ್ ಕನ್ನಡದಲ್ಲಿ ಪ್ರಕಟಿಸಿದ 'ಇಬ್ಬರ ನ್ಯಾಯ ಒಬ್ಬನಿಗಾಯ'ಕ್ಕೂ ಸಾಮ್ಯತೆಗಳಿವೆ. ಇವೆರಡರಲ್ಲೂ ವ್ಯಾಜ್ಯದ ಕೇಡುಗಳನ್ನು ತೋರ್ಪಡಿಸುವ ಕಥೆಯಿದೆ. ಇದರ ಎರಡನೇ

ಮುದ್ರಣ ೧೯೨೬ರಲ್ಲಾಯಿತು. 'ದಿ ಈವಿಲ್ಸ್ ಆಫ್ ಲಾ ಸ್ಯೂಟ್' ಎಂಬ ಇನ್ನೊಂದು ಕಿರುಪುಸ್ತಕ ಇಂಗ್ಲಿಷ್‌ನಲ್ಲಿದೆ. ಇವುಗಳ ಮೊದಲ ಮುದ್ರಣದ ಮಾಹಿತಿಗಳು ಲಭ್ಯವಿಲ್ಲ.

ಒಂದೆಡೆ ಪ್ರಸ್ತಾಪಗೊಳ್ಳುವ ಪದಗಳನ್ನು ಇನ್ನೊಂದೆಡೆಯಲ್ಲಿ ಸಾಂದರ್ಭಿಕವಾಗಿ ವಿವರಿಸುವ ಉದಾಹರಣೆಗಳಿವೆ. ಇವು ಎರಡೂ ಪಠ್ಯಗಳ ಅಂತರ್ಸಂಬಂಧದ ಸೂಚಕಗಳೂ ಆಗುತ್ತವೆ. ಕಿರುಪುಸ್ತಕದ ಮೊದಲ ಟಿಪ್ಪಣಿಯಾದ 'ಶಕುನ' [A/2564-1]ದಲ್ಲಿ 'ಬುಡುದಾರೆದ ಮದುಮೆ'ಯ ಉಲ್ಲೇಖ ಬರುತ್ತದೆ. 'ತುಳು ಜನತ ಮದ್‌ಮೆ' [A/1441 pp.416-419]ಟಿಪ್ಪಣಿಯಲ್ಲಿ ಬುಡುದಾರೆಯ ವಿವರವನ್ನು ನೀಡಲಾಗಿದೆ. 'ಅತ್ತೂರುದ ಸ್ತಾನ ಗರೋಡಿ ಕುಕ್ಕಿನಂದಾಯಗ್ ಕೊಡಮಂದಾಯಗ್ ಬೈದೆರ್ಲೆಗ್ ಆಪಿ ಕೋಲದ ಸಂಗತಿ' [A/2564-3] ಟಿಪ್ಪಣಿಯಲ್ಲಿ ಕುಂಬಾರ್ರೆ, ಕುಂಬಾರುವೆರ್ ಪದಗಳಿದ್ದರೆ 'ಭೂತೊಳೆಗ್ ಕೋಲ ಕಟ್ಟುನಿ ಯೇರ್' [A/1441 pp.466-467]ನಲ್ಲಿ ಭೂತ ಕಟ್ಟುವ ವರ್ಗಗಳ ವಿವರಣೆಯೊಂದಿಗೆ ಪದವಿಚಾರವೂ ಕಾಣಿಸುತ್ತದೆ. 'ನರಮಾನ್ಯಗ್ ಭೂತ ಪತ್ತುನಿ ಜರ್ಪುನಿ ಅಂದಾ?' [A/1441 pp.430-435]ಟಿಪ್ಪಣಿಯಲ್ಲಿ ಅದರ ವಿಮರ್ಶೆಯೂ ಕಂಡುಬರುತ್ತದೆ. 'ತಿರ್ಪತಿ ಯಾತ್ರೆ' ಟಿಪ್ಪಣಿಯು ಅಂದಿನ ಸಮಕಾಲೀನ ಸ್ಥಿತ್ಯಂತರದ ಸನ್ನಿವೇಶವನ್ನೂ ಸೂಚಿಸುತ್ತದೆ. ಇದು *"ಅಂಡ ಯಿತ್ತೆ ಪುಗೆ ಭಂಡಿ ಯಿತ್ತ್‌ದ್ ತಕ್ಕ ಬಂದೋಬಸ್ತ್ ಉಪ್ಪುನೆಡ್ದ್ ಅಪಾಯ ಕಡಮೆ."*(ಆದರೆ ಈಗ ಹೊಗೆಬಂಡಿ ಇದ್ದು ಸೂಕ್ತ ಬಂದೋಬಸ್ತು ಇರುವುದರಿಂದ ಅಪಾಯ ಕಡಿಮೆ" [A/1441 pp.397-401]ಎಂಬ ವಾಕ್ಯದೊಂದಿಗೆ ಕೊನೆಯಾಗುತ್ತದೆ. ತಿರುಪತಿ ಮತ್ತು ತುಳುನಾಡಿನ ಸಂಬಂಧ ಬಹು ಪ್ರಾಚೀನವಾದುದಾಗಿದ್ದು ಪಾಡ್ದನಗಳಲ್ಲೂ ಇದರ ಉಲ್ಲೇಖಗಳಿವೆ. ಹಾಗಾಗಿಯೇ ಮಿಶನರಿಗಳಿಗೂ ಇದು ಆಸಕ್ತಿಯ ವಿಚಾರವಾಗಿದ್ದು ಎರಡೂ ಪಠ್ಯಗಳಲ್ಲಿ ಇಂತಹಾ ಪರಸ್ಪರ ಸಂಬಂಧವಿರುವ ವಿಚಾರಗಳು ಕಾಣಿಸುತ್ತವೆ. ತಿರುಪತಿಗೆ ಸಮೀಪದ ರೇಣುಗುಂಟ ರೈಲ್ವೇಸ್ಟೇಶನ್ ಮೂಲಕ ಅಂದು ಸಂಪರ್ಕ ಪ್ರಾರಂಭವಾಗಿದ್ದಿತು. ತುಳುನಾಡಿಗೆ ಸಂಬಂಧಪಟ್ಟಂತೆ ಆ ವೇಳೆಗಾಗಲೇ ರೈಲ್ವೇಯ ಪರಿಚಯವಾಗತೊಡಗಿದ್ದು ಪ್ರಯಾಣಿಕರ ಸಂಚಾರವೂ ಪ್ರಾರಂಭವಾಗಿದ್ದಿತು.

ಅಂದಿನ ಕಾಲದ ಖರ್ಚು ವೆಚ್ಚದ ಉಲ್ಲೇಖಗಳೂ ಇಲ್ಲಿ ಹಲವು ಟಿಪ್ಪಣಿಗಳಲ್ಲಿ ಕಂಡು ಬರುತ್ತವೆ. ಈ ಬಗೆಯ ಖರ್ಚುವೆಚ್ಚಗಳ ವಿವರ ಅಂದಿನ ಇನ್ನಿತರ ಸಮಕಾಲೀನ ದಾಖಲೆಗಳಲ್ಲಿರುವ ಮಾಹಿತಿಗಳಿಂದ ಖಚಿತವಾಗುತ್ತದೆ. ಮದುವೆ, ಉತ್ತರಕ್ರಿಯೆ, ಮಾಟಮಂತ್ರ, ಅಳಿಯಕಟ್ಟಿನ ವಿವರ, ವ್ಯಾಜ್ಯ ಹೀಗೆ ವಿವಿಧ ಸಂದರ್ಭಗಳ ಖರ್ಚಿನ ವಿವರಗಳು ಇಲ್ಲಿವೆ. ಉದಾಹರಣೆಗೆ 'ತುಳು ಜನತ ಮದ್‌ಮೆ' ಟಿಪ್ಪಣಿಯಲ್ಲಿ *"ಯಿಲ್ಲ ಕರ್ತವಗ್, ಯೀ ಲೇಸ್‌ದ ಪಂಡ್‌ದ್ ನೂದು ಯಿನ್ನೂದು ರುಪಾಯಿ ಮಿತ್ತ್ ತಾಗುನವುಲಾ ಉಂಡು. ಲೇಸ್‌ಗ್ ಬತ್ತಿ ಪ್ರತಿ ಯಿಲ್ಲದಾಕುಳು ಚಕ್ರ, ಚವಲ, ರುಪಾಯಿಲಾ ಮುಯ್ಯಿ ದೀಪಿನವು ಉಂಡು. (ಪಣವು ದೀಪಿನಿ) ಈ ಮುಯ್ಯಿಡ್ ಶುಮಾರ್ ನೂದು*

ರುಪಾಯಿ ಮುಟ್ಟಲಾ ಒಟ್ಟಾಪುಂಡು. ಉಂದು ಲೇಸ್‌ದ ಕರ್ತವಗ್ ಸಕಾಯ ಆಪುಂಡು." (ಮನೆಯ ಯಜಮಾನನಿಗೆ ಈ ಔತಣಕ್ಕಾಗಿ ನೂರು ಇನ್ನೂರು ರುಪಾಯಿಗೂ ಹೆಚ್ಚು ವ್ಯಯವಾಗುವದೂ ಇದೆ. ಔತಣಕ್ಕೆ ಬಂದ ಪ್ರತಿ ಮನೆಯವರು ಚಕ್ರ, ಚವಲ, ರುಪಾಯಿಯೂ ಉಡುಗೊರೆ ಇಡುವುದು ಉಂಟು. ಈ ಉಡುಗೊರೆಯಲ್ಲಿ ಸುಮಾರು ನೂರು ರುಪಾಯಿ ತನಕವೂ ಒಟ್ಟಾಗುವುದಿದೆ. ಇದು ಔತಣ ನೀಡಿದವನಿಗೆ ಸಹಾಯವಾಗುತ್ತದೆ... [A/1441 pp.416-419]) ಎಂಬ ಉಲ್ಲೇಖವಿದೆ.

ಚಕ್ರ ಎಂಬುದು ರೂಪಾಯಿಯ ನಾಲ್ಕನೇ ಒಂದು ಭಾಗವನ್ನು ಸೂಚಿಸುತ್ತದೆ. ಚಕ್ರಂತ ಪಾವಲಿ ಎಂದರೆ ರೂಪಾಯಿಯ ನಾಲ್ಕನೇ ಒಂದು ಭಾಗ ಬೆಲೆಯ ನಾಣ್ಯವಾಗಿದ್ದಿತು. ಚವಲ ಎಂಬ ನಾಣ್ಯವು ರೂಪಾಯಿಯ ಎಂಟನೇ ಒಂದು ಭಾಗವನ್ನು ಸೂಚಿಸುತ್ತದೆ. ಇವು ಅಂದಿನ ಹಣದ ಸೂಚಕ. ಆಣೆ ರೂಪಾಯಿಯ ಹದಿನಾರನೇ ಒಂದು ಭಾಗವಾಗಿದ್ದು ಬಳಕೆಯಲ್ಲಿ ಹಾಸುಹೊಕ್ಕಾಗಿರುವ ಅಂಶಗಳನ್ನು ಇಲ್ಲಿ ಕಾಣಬಹುದು. ಊಟ ಔತಣದ ಖರ್ಚುಗಳು, ಬಟ್ಟೆಬರೆಗಳ ಬೆಲೆ, ಉಡುಗೊರೆಯ ಮೌಲ್ಯ, ಕಾಣಿಕೆಯ ಪ್ರಮಾಣ, ದಕ್ಷಿಣೆಯ ದರ ಪ್ರಮಾಣಗಳು, ಅಳತೆಯ ಮಾನ ಪ್ರಮಾಣಗಳೂ ಅಂದಿನ ಸಮಕಾಲೀನತೆಯ ತಿಳುವಳಿಕೆಗೆ ಸಹಾಯಕವಾಗುತ್ತವೆ.

ಇನ್ನೊಂದು ಉಲ್ಲೇಖ 'ತುಳು ಜನತ ಬೊಜ್ಜ'ದಲ್ಲಿದ್ದು ಈ ಹಿನ್ನೆಲೆಯಲ್ಲಿ ಗಮನಿಸಬಹುದು. "*ಯೀ ವಣಸ್‌ಗ್ ಮದ್‌ಮೆದ ವಣಸ್‌ದ ಲೆಕ್ಕನೆ ಸುಮಾರ್ 100-200 ರುಪಾಯಿ ಖರ್ಚಿ ತಾಗುನವು ಉಂಡು. ಮದ್‌ಮೆಗ್ ದೀಯಿಲೆಕ್ಕ ಪಣವು ದೀಪಿನವುಲಾ ಉಂಡು.*"(ಈ ಊಟಕ್ಕೆ ಮದುವೆಯ ಊಟದ ಹಾಗೆಯೇ ಸುಮಾರು 100-200 ರುಪಾಯಿ ಖರ್ಚು ಆಗುವುದು ಇದೆ. ಮದುವೆಗೆ ಇಟ್ಟ ಹಾಗೆ ಹಣ ಇಡುವುದೂ ಇದೆ... [A/1441 pp.419-422]).

'ಶಾಪ ಪಿರಿಪುನಿ ಅತ್ತ್‌ಡ ಆಜ ಪಿರಿಪುನಿ' ಟಿಪ್ಪಣಿಯಲ್ಲಿ ಹೀಗಿದೆ: "*...ಬಲ್ಮೆ ಪಣ್ಪಿನಾಯನ್ ನಾಡ್‌ಪತ್ತ್‌ದ್ ದುಂಬತ್ತ ಮುಕ್ಕಾಲ್ ಪತ್ತ್‌ದ್ ಒಂಜಾಣೆ ಮುಟ್ಟ, ಒಂತೆ ಗಟ್ಟಿಗೆ ಅಂದ್ ಪುದರ್ ಯಿತ್ತ್‌ಂಡ ನಾಲಾಣೆ, ಅರೆ ರುಪಾಯಿ, ಒಂಜಿ ರುಪಾಯಿ ಮುಟ್ಟಲಾ ದೀದ್ ಬಲ್ಮೆ ಕೇಣುವೆರ್.*" (...ಜೋತಿಷ್ಯ ಹೇಳುವವನನ್ನು ಹುಡುಕಿ ಮೊದಲಿಗೆ ಮುಕ್ಕಾಲಿಂದ ಹಿಡಿದು ಒಂದಾಣೆಯವರೆಗೆ, ಸ್ವಲ್ಪ ಘಟ್ಟಿಗ ಎಂದು ಹೆಸರಿದ್ದರೆ ನಾಲ್ಕಾಣೆ, ಅರೆ ರುಪಾಯಿ, ಒಂದು ರುಪಾಯಿಯವರೆಗೂ ನೀಡಿ ಭವಿಷ್ಯ ಕೇಳುತ್ತಾರೆ... [A/1441 pp. 380-382]).

'ಮಾಟ ಮಳ್ಪುನಿ' ಟಿಪ್ಪಣಿಯಲ್ಲಿಯೂ ಆ ಸೂಕ್ಷ್ಮತೆಯು ವ್ಯಕ್ತವಾಗುತ್ತದೆ. "*ಮಂತ್ರವಾದಿ– ಮಾಟೊಗು ಯಿತ್ತೆ ಖರ್ಚಿ ಈತ್ ಉಂಡು. ಅವು ಯಿತ್ತೇ ಕೊರೊಡು. ಗೆನ್ತ್‌ದ್ 3 ತಿಂಗೊಳುದ ಉಳಯಿ ಆಕುಳೆನ್ ಗಾಸಿ ಮಳ್ತ್‌ದ್ ಕೊರಿಯೆಡ 50 ರುಪಾಯಿ ಮಿಸ್ಕುಡ್ರೊಡು. ಉಂದೆಕ್ ತತ್ತದ ಬೊಕ್ಕ ನಿನ ಪಂಡ್‌ದ್ ಯೆನನ್*

ದೂರೊಣಿಯೆರೆ ಬಲ್ಲಿ. ನಿಕ್ಕ್ ಪಿರ ತಟ್ಟು." (ಮಂತ್ರವಾದಿ– ಮಾಟಕ್ಕೆ ಈಗ ಖರ್ಚು ಇಷ್ಟಿದೆ. ಅದು ಈಗಲೇ ಕೊಡಬೇಕು. ಲೆಕ್ಕ ಮಾಡಿ 3 ತಿಂಗಳೊಳಗೆ ಅವರಿಗೆ ಫಾಸಿ ಮಾಡಿಕೊಟ್ಟರೆ 50 ರುಪಾಯಿ ಕೊಟ್ಟು ಬಿಡಬೇಕು. ಇದಕ್ಕೆ ತಪ್ಪಿದರೆ ಮತ್ತೆ ನನ್ನನ್ನು ದೂರಬಾರದು. ನಿನಗೆ ತಿರುಗಿ ತಟ್ಟಬಹುದು... [A/1441 pp. 388-390]).

ಸಂಸ್ಕೃತಿಯ ಆಚರಣೆಗಳ ನಿರೂಪಣೆಗಳ ಒಳಗೂ ಇಂತಹಾ ಅನೇಕ ಉಲ್ಲೇಖಗಳು ಕಾಣಸಿಗುತ್ತವೆ. ಇಂತಹಾ ಪಠ್ಯಗಳು ಈ ಬಗೆಯ ಬಹುಮುಖೀ ಆಯಾಮದಿಂದಾಗಿ ಕುತೂಹಲಕರವೆನಿಸುತ್ತವೆ. 'ತುಳು ಜನತ ಮದ್‌ಮೆ'ಯಲ್ಲಿ *"ಮದ್‌ಮೆ ಮಳ್ತೊಂಬುನಾಯೆ ಬೊಡೆದಿ ತಮೆರಿಗ್ ಯೆಣ್ಮ ರುಪಾಯಿ ಸೀರೆದ ವರನ್ ಕಟ್ಟೊಡು. (ಸೀರೆದ ಪಗತೆಗ್ ರುಪಾಯಿ ಕಟ್ಟುನಿ) ಉಂದು ಪೊಂಣ ಯಿಲ್ಲಡ್‌ಲಾ ಆಪುಂಡು, ಆಣ ಯಿಲ್ಲಡ್‌ಲಾ ಆಪುಂಡು. . . . . ವರ್ಸೊಗೊಂಜಿ ಪತ್ತ್ ಚಕ್ರದ ಕುಂಟು ಕೊರ್ಜಿಡ್ಲಾ ಮಲ್ಲೆಯಿಜ್ಜಿ."* (ಮದುವೆ ಮಾಡಿಕೊಳ್ಳುವವ ಹೆಂಡತಿ ತವರಿಗೆ ಎಂಟು ರುಪಾಯಿ ಸೀರೆಯ ಉಡುಗೊರೆ ಕಟ್ಟಬೇಕು. (ಸೀರೆಯ ಬದಲಿಗೆ ರುಪಾಯಿ ಕಟ್ಟುವುದು) ಇದು ಹೆಣ್ಣಿನ ಮನೆಯಲ್ಲಿಯೂ ಆಗುವುದು, ಗಂಡಿನ ಮನೆಯಲ್ಲಿಯೂ ಆಗುವುದು... ವರ್ಷಕ್ಕೊಮ್ಮೆ ಹತ್ತು ಚಕ್ರದ ವಸ್ತ್ರ ಕೊಡದಿದ್ದರೂ ದೊಡ್ಡದಲ್ಲ... [A/1441 pp.416-419]). ಇದಲ್ಲದೆ ರುಪಾಯಿ, ರುಪ್ಯೆ, ದುಡ್ಡು, ಪಣವುಗಳ ಉಲ್ಲೇಖವೂ ವಿವಿದೆಡೆ ಬರುತ್ತದೆ.

ಅಳತೆಯ ಮಾನವೂ ಸಮಕಾಲೀನ ನೆಲೆಯಲ್ಲೇ ಕಂಡುಬರುತ್ತದೆ. ಈ ಸಂಬಂಧವಾದ ಹಲವು ಉದಾಹರಣೆಗಳಿವೆ. 'ಅಳಿಯ ಸಂತಾನ ಆಯಿನಿ ಯೆಂಚ?' ಟಿಪ್ಪಣಿಯಲ್ಲಿ *"ಅಟ್ಟಿಲ್‌ದಾಳ್ ನಿತ್ಯದ ವಣಸ್‌ಗ್ ಕೊರ್ಪಿ ಅರಿಡ್ದ್ ಒಂಜೊಂಜಿ ಪಾವುದಲೆಕ್ಕ ದೀದ್ ಯೇರೆಡಲಾ ಗುಟ್ಟುಡು ಮಾರ್‌ಪಾದ್ ಪಣವು ಕಟ್ಟುವಳ್."* (ಅಡುಗೆಯಾಕೆ ನಿತ್ಯದ ಊಟಕ್ಕೆ ಕೊಡುವ ಅಕ್ಕಿಯಿಂದ ಒಂದೊಂದು ಪಾವಿನ ಹಾಗೆ ತೆಗೆದಿಟ್ಟು ಯಾರಿಂದಲಾದರೂ ಗುಟ್ಟಾಗಿ ಮಾರಾಟ ಮಾಡಿಸಿ ಹಣ ಗಂಟು ಕಟ್ಟುತ್ತಾಳೆ...[A/1441 pp. 410-416]). ಇಲ್ಲಿ ಪಾವು ಎಂಬುದು ಸೇರಿನ ನಾಲ್ಕನೇ ಒಂದು ಭಾಗವನ್ನು ಸೂಚಿಸುತ್ತದೆ.

ಜೀವನಾವರ್ತನ ಕ್ರಿಯೆಗಳಿಗೆ ಸಂಬಂಧಪಟ್ಟ 'ತುಳು ಜನತ ಮದ್‌ಮೆ' [A/1441 pp.416-419] ಹಾಗೂ 'ಸ್ಯೆತಿನಾಕುಳೆಗ್ ಮದ್‌ಮೆ ಮಳ್ಪುನಿ' [A/1441 pp.396-397] ಟಿಪ್ಪಣಿಗಳಲ್ಲಿ ಬಾಲ್ಯವಿವಾಹದ ಪ್ರಸ್ತಾಪ ಬರುತ್ತದೆ. ಹತ್ತೊಂಬತ್ತನೆ ಶತಮಾನದ ಉತ್ತರಾರ್ಧ ಹಾಗೂ ಇಪ್ಪತ್ತನೇ ಶತಮಾನದ ಪ್ರಾರಂಭದ ದಶಕಗಳಲ್ಲಿ ಬಹುಚರ್ಚಿತ ವಿಚಾರವಾಗಿದ್ದ ಬಾಲ್ಯವಿವಾಹದ ಪ್ರಸ್ತಾಪ ಇವುಗಳಲ್ಲಿದೆ. ಇದು ಮಿಶನರಿಗಳ ಪ್ರವಚನಕ್ಕೆ ಪರೋಕ್ಷವಾಗಿ ಸಹಾಯಕವಾಗುವಂತಹುದು. ಸಮಕಾಲೀನ ಸಾಮಾಜಿಕ ಪರಿವರ್ತನೆಕಾರರು, ಮತಧರ್ಮ ಪ್ರಚಾರಕರ ಪ್ರಮುಖ ಕಾಳಜಿಯೂ ಇದಾಗಿದ್ದಿತು.

ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಬಹುಚರ್ಚಿತ ವಿಚಾರವಾಗಿದ್ದು ಪ್ರಾರಂಭ ಘಟ್ಟದ ಕಾದಂಬರಿಗಳ ಪ್ರಮುಖ ಆಶಯವೂ ಇದಾಗಿತ್ತು ಎಂಬುದು ಗಮನಾರ್ಹ.

ಈ ಟಿಪ್ಪಣಿಗಳಲ್ಲಿ ಅಲ್ಲಲ್ಲಿ ತುಲನಾತ್ಮಕವಾಗಿ ಕೊಂಕಣಿ ಬ್ರಾಹ್ಮಣರ ಪ್ರಸ್ತಾಪ ಬರುತ್ತದೆ. ಉದಾಹರಣೆಗೆ 'ಸೈತಿನಾಕುಳೆಗ್ ಮಳ್ಪು ಬೊಜ್ಜ' ಟಿಪ್ಪಣಿಯು ಸಂಪೂರ್ಣವಾಗಿ ಕೊಂಕಣಿ ಬ್ರಾಹ್ಮಣರಲ್ಲಿರುವ ಉತ್ತರಕ್ರಿಯೆಯ ಪದ್ಧತಿಯನ್ನು ವಿವರಿಸುತ್ತದೆ. ಇದರಲ್ಲಿ *"ಉಂದು ಕೊಂಕಣೆರೆ ಬ್ರಾಣೆರೆ ತರ."* (ಇದು ಕೊಂಕಣಿ ಬ್ರಾಹ್ಮಣರ ರೀತಿ [A/2564-1]) ಎಂದು ಹೇಳಲಾಗಿದೆ. 'ಮಾರಿ ದೇರುನಿ ಅಂದ್'ಂಡ ದಾನೆ?' ಟಿಪ್ಪಣಿಯಲ್ಲಿ *"ಊರು ಊರುಡು ವರ್ಸೊಗು ಯಿರುವೊಳು ಮಾರಿ ದೇರುಂಡು. ಉಂದು ತುಳು ಜನೊಕುಳು ಮಾತ್ರ ಆಚರಿಸುವೆರ್. ಕೊಂಕಣೆ ಬ್ರಾಣೆರತ್ತ್."* (ಊರೂರಲ್ಲಿ ವರ್ಷಕ್ಕೆ ಎರಡು ಬಾರಿ ಮಾರಿ ಓಡಿಸುತ್ತಾರೆ. ಇದು ತುಳು ಜನರು ಮಾತ್ರ ಆಚರಿಸುತ್ತಾರೆ. ಕೊಂಕಣಿ ಬ್ರಾಹ್ಮಣರಲ್ಲ. [A/1441 pp. 408-410]) ಎಂಬ ಉಲ್ಲೇಖವಿದೆ. ಹಾಗೆಯೇ ಇನ್ನೊಂದೆಡೆ 'ಮಂತ್ರ' ಟಿಪ್ಪಣಿಯಲ್ಲಿ ಹೀಗೆ ಹೇಳಲಾಗಿದೆ: *"ಮಂತ್ರೊಡು ತರ ಉಂಡು. ಒಂಜೊಂಜಿ ಮತತಾಕುಳು ತನುಕುಳೆ ತನುಕುಳೆ ದೇವೆರ್ಕುಳೆಗ್ ನಿತ್ಯ ಕಟ್ಲೆಡ್ ಬಾಯಿ ಪಾಠಾದ್ ಮಳ್ಪು ಪ್ರಾರ್ಥನೆ ಜಪ ಉಂದು ಒಂಜಿ ಮಂತ್ರ. ಕೊಂಕಣೆ ಬ್ರಾಣೆರೆಡ್ ಮದ್'ಮೆ ಮುಂಜಿ ಮಿನಿ ಯಿಂಚಿತ್ತಿ ಲೇಸ್'ಡ್ ಆಕುಳಾಕುಳೆ ಭಟ್ರೆನಾಕುಲು (ಪುರೋಹಿತೆರ್) ನೇಮಕದ ಪ್ರಕಾರ ಪಣೊಡಾಪಿ ಪಾಕ ಶ್ಲೋಕೊಳೆನ್ ಮಂತ್ರದ ಲೆಕ್ಕನೆ ಪಣ್ಪೆರ್."* (ಮಂತ್ರದಲ್ಲಿ ವಿಧಗಳಿವೆ. ಒಂದೊಂದು ಮತಗಳವರು ತಮ್ಮ ತಮ್ಮ ದೇವರಿಗೆ ಕ್ರಮಪ್ರಕಾರವಾಗಿ ಬಾಯಿಪಾಠದಿಂದ ಮಾಡುವ ಪ್ರಾರ್ಥನೆ ಜಪ ಇದು ಒಂದು ಮಂತ್ರ. ಕೊಂಕಣಿ ಬ್ರಾಹ್ಮಣರಲ್ಲಿ ಮದುವೆ ಮುಂಜಿ ಇಂತಹ ಸಮಾರಂಭದಲ್ಲಿ ಅವರವರ ಭಟ್ಟರು (ಪುರೋಹಿತರು) ನಿಯಮ ಪ್ರಕಾರ ಹೇಳಬೇಕಾದ ಹಲವು ಶ್ಲೋಕಗಳನ್ನು ಮಂತ್ರದಂತೆಯೇ ಹೇಳುತ್ತಾರೆ... [A/1441 pp. 390-392]). ಜೊತೆಗೆ ಆರನೇ ಕಿರುಪುಸ್ತಕ[A/2564-6]ದ ಕೊನೆಯಲ್ಲಿ ಕನ್ನಡ ಎಂಬ ಶೀರ್ಷಿಕೆಯಡಿಯಲ್ಲಿ ೧೮೯೩ನೇ ಇಸವಿಯ ಖಾನೇಷುಮಾರಿ ಮಾಹಿತಿಯಿದೆ. *"ದಕ್ಷಿಣ ಕನ್ನಡ ಜಿಲ್ಲೆಯ ನಿವಾಸಿಗರಾದ (ಕಾರ್ಕಳ) ಕೊಂಕಣ ದೇಶೀಯ ಗೌಡ ಸಾರಸ್ವತ ಬ್ರಾಹ್ಮಣರು 1893ನೆ ಇಸವಿಯ ಖಾನೆಶುಮಾರಿಯಲ್ಲಿ ಸರ್ಕಾರದವರಿಗೆ ಕೊಟ್ಟ ಉತ್ತರಗಳು ಪ್ರಶ್ನೆ: ೧– ಜಾತಿಯ ಹೆಸರು ಏನು? ಉತ್ತರ:– ಕೊಂಕಣ ದೇಶಿಯ ಗೌಡಸಾರಸ್ವತ ಬ್ರಾಹ್ಮಣರು..."* ಎಂದು ಪ್ರಾರಂಭಗೊಳ್ಳುತ್ತದೆ. ತ್ರುಟಿತಗೊಂಡಿರುವ ಮುಂದಿನ ಭಾಗದಲ್ಲಿ ಕೊಂಕಣಿ ಬ್ರಾಹ್ಮಣರ ಪ್ರಸ್ತಾಪ ಮತ್ತು ತತ್ಸಂಬಂಧಿ ಹಲವು ವಿವರವಿದೆ.

ಇಲ್ಲಿ ಹೊಗೆಸೊಪ್ಪಿನ ಬಗ್ಗೆ ತುಳುವಿನಲ್ಲಿರುವ 'ಮುಗ್ಗಿರೆದ ರಿತಿ' [A/1441pp341-371] ಮತ್ತು 'ಭಂಗಿ' [A/1441pp371-374]ಟಿಪ್ಪಣಿಗಳು ಕನ್ನಡದಲ್ಲಿ ಪುಸ್ತಕ ರೂಪದಲ್ಲಿ

'ಹೊಗೆಸೊಪ್ಪಿನ ಸೊಗಸು' (Tobacco and its Mischief) ೧೯೦೬ರಲ್ಲಿ ಪ್ರಕಟವಾಗಿದೆ. ಪ್ರಸ್ತುತ ಪತ್ಯದಲ್ಲಿರುವ ಉಲ್ಲೇಖಗಳು, ಅನುವಾದದ ಬಗೆಯೂ ಸಮಕಾಲೀನತೆಯನ್ನು ಸೂಚಿಸುತ್ತದೆ. ಬೈಬಲ್‌ನ ವಿಚಾರಗಳ ಅನುವಾದದ ಬಗೆಯೂ ಅಂದಿನ ಬಳಕೆಯನ್ನು ಸ್ಪಷ್ಟಪಡಿಸುತ್ತದೆ. ಮಿಶನರಿಗಳು ಈ ತೆರನಾದ ಟಿಪ್ಪಣಿಗಳನ್ನು ತಯಾರಿಸಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತಿದ್ದ ಪರಂಪರೆಯೊಂದಿದೆ. ಬೆಂಗಳೂರಿನ ವೆಸ್ಲಿಯನ್ ಮಿಶನ್‌ನವರು ಧರ್ಮ ವಿಷಯಕ್ಕೆ ಸಂಬಂಧಿಸಿದ 'ಮತ ವಿಚಾರಣೆ', 'ಒಂದು ಮಗುವಿನ ಜಾತಕ', 'ಬ್ರಹ್ಮಜ್ಞಾನಪರೀಕ್ಷೆ' ಮೊದಲಾದವುಗಳನ್ನು ೧೮೬೪ರ ಸುಮಾರಿಗೆ ಪ್ರಕಟಿಸಿರುವುದು ಕಂಡುಬರುತ್ತದೆ, ಆ ಮಾದರಿಯಲ್ಲಿಯೇ ಬಾಸೆಲ್ ಮಿಶನ್‌ನವರೂ 'ಪರಿತ್ಯಾಗ ನಿನ್ನ ಧರ್ಮವೋ?' 'ಕೈ ಕೆಸರಾದರೆ ಬಾಯಿ ಮೊಸರು', 'ನೀನು ಕರುಣಾಶೀಲನೋ?' ಮೊದಲಾದ ಪುಸ್ತಕಗಳನ್ನು ತಂದದ್ದಿದೆ. ಇವುಗಳು ಬಹುತೇಕ ಇಂಗ್ಲಿಷ್ ಮೂಲದಿಂದ ಅನುವಾದ ಆದವುಗಳಾಗಿವೆ. ಇಂತಹ ಕಿರುಹೊತ್ತಿಗೆಗಳಂತೆಯೇ ಮತಧರ್ಮ ಪ್ರಸಾರಕ್ಕೆ ಅನುಕೂಲವಾಗುವಂತೆ ದೇಶೀ ವಸ್ತುವಿಚಾರಗಳನ್ನು ಸಂಗ್ರಹಿಸಿ ಉಪದೇಶಕ್ಕೆ ಬಳಸಿಕೊಂಡಿರುವ ಸಾಧ್ಯತೆಯಿದೆ.

ಇಲ್ಲಿರುವ ಹಲವು ಅಂಶಗಳನ್ನು ಸಮಕಾಲೀನ ಮಿಶನರಿಗಳ ಮತ್ತು ಇತರ ಸಮಾನ ಆಸಕ್ತರ ಪತ್ಯಗಳಲ್ಲಿ ಕಾಣಬಹುದು ಎಂಬುದು ಗಮನಾರ್ಹ. ಭೂತಾರಾಧನೆಗೆ ಸಂಬಂಧಿಸಿದಂತೆ ಹಲವು ಉದಾಹರಣೆಗಳನ್ನು ಇಲ್ಲಿ ಕಾಣಬಹುದು. ಸುಬ್ರಹ್ಮಣ್ಯನ ಆರಾಧನೆಯ ಸ್ಥಳ ಎಂಬುದನ್ನು ಇಲ್ಲಿ ಸುಬ್ರಾಯ ದೇವೆರೆ ಸ್ತಳೊ ಎಂದು ಗುರುತಿಸಿಕೊಳ್ಳಲಾಗಿದೆ. ಟಿಪ್ಪಣಿಯೊಂದರ ಶೀರ್ಷಿಕೆ 'ಸುಬ್ರಾಯ ದೇವೆರೆ ಸ್ತಳೊಡು ಆಪಿ ಸೃಷ್ಠಿದ ಕ್ರಮ' [A/2564-4&A/2564-5]. ಅದೇ ಬಗೆಯ ಉಲ್ಲೇಖವು ಬರ್ನೆಲ್‌ನ 'ಡೆವಿಲ್ ವರ್ಶಿಪ್ ಆಫ್ ದಿ ತುಳುವಾಸ್'ನ ತೊಡಕಿನಾರ ಪಾಡ್ದನದಲ್ಲಿಯೂ ಕಂಡುಬರುತ್ತದೆ. *"ಸುಬ್ರಾಯ ದೇವೆರೆ ಸ್ತಳೊಗು ಬತ್ತುದು ದೇವಸ್ಥಾನೊಗು ಪೊಗ್ಗಿಯೆರು. ಮೂಜಿ ಸುತ್ತು ಬಲಿ ಬತ್ತೆರು, ಐನು ದಿನತ ಆಯನ ತೂಯೆರು. ಅಳ್ತು ಯೆರುತ ಮಿತ್ತು ಕುಮಾರದಾರೆ ಮತ್ಸ್ಯತೀರ್ಥ ಕಡತೆರು,"* (ಮೂಲ ಮುದ್ರಿತ ಪತ್ಯ ಪು.೫೭) (ಸುಬ್ರಾಯ ದೇವರ ಸ್ಥಳಕ್ಕೆ ಬಂದು ದೇವಸ್ಥಾನಕ್ಕೆ ಪ್ರವೇಶಿಸಿದರು. ಮೂರು ಸುತ್ತು ಬಲಿ ಬಂದು, ಐದು ದಿನದ ಆಯನ ನೋಡಿದರು. ಅಲ್ಲಿಂದ ಹೋರಿ ಮೇಲೆ ಏರಿ ಕುಮಾರಧಾರೆ ಮತ್ಸ್ಯತೀರ್ಥ ದಾಟಿದರು)

ಹಾಗೆಯೇ ಇಲ್ಲಿ ಕಾಣಿಸುವ ಓಲೆ ಕಳಿಸುವ ವಿವರವೂ ಗಮನಾರ್ಹವಾದುದು. 'ಪುತ್ತೆ ದೇವಸ್ಥಾನದವುಲಾ ಚೌಟೆರೆನವುಲಾ ಆದಿ ಚರಿತ್ರೆ' [A/2564-2] ಟಿಪ್ಪಣಿಯಲ್ಲಿ *"...ಅಂದ್‌ದ್ ಒಂಜಿ ಬಿನ್ನಹದ ವೋಲೆ ಬರೆಪಾದ್ ಕಡೆಕ್ ತನ ಪುದರ್ ಬರೆದ್ ಚಂದ್ರಿಕೆ ಮಳ್ತ್ ಆಕುಳೆ ಕೈಟ್ ಕೊರ್ದು ಕಡಪುಡಿಯೆ... ಅಕುಳು ಈ ಓಲೆನ್ ಪತೊಂಡ್ದು ಪೋದು ತನಕುಳೆ ಅರಸುಗು ಕೊರ್ದು ಈ ಅರಸುಗು ಸ್ಥಿತಿಗತಿನ್ ಮಾತಾ ಪಂಡೆರ್.*

ಆಯೆ ಚಂದ್ರಿಕೆ ಬುಡುಪಾದ್ ವೋಲೆನ್ ಓದುದು ತೂಯೆ..." (ಎಂದು ಒಂದು ಬಿನ್ನಹದ ಓಲೆ ಬರೆಸಿ ಕೊನೆಗೆ ತನ್ನ ಹೆಸರು ಬರೆದು ಮುದ್ರೆ ಹಾಕಿ ಅವರ ಕೈಗೆ ನೀಡಿ ಕಳುಹಿಸಿದ... ಅವರು ಆ ಓಲೆಯನ್ನು ತೆಗೆದುಕೊಂಡು ಹೋಗಿ ತಮ್ಮ ಅರಸನಿಗೆ ನೀಡಿ ಈ ಅರಸನ ಸ್ಥಿತಿಗತಿಯನ್ನೆಲ್ಲಾ ಹೇಳಿದರು. ಆತ ಮುದ್ರೆ ಬಿಡಿಸಿ ಓಲೆಯನ್ನು ಓದಿ ನೋಡಿದ...)ಎಂದು ಇದ್ದರೆ 'ಜೈನೆರ್ ಇರ್ಲ್ ದಾಯೆ ಉಣ್ಬುಜೆರ್ ಇನ್ನಿ ಕಾರಣದ ಕಥೆ' [A/1441 pp. 56-70]ಯಲ್ಲಿ *"ಆ ಕೂಡ್ಲೆ ಆಯೆ ಒಂಜಿ ಓಲೆ ದೆತ್ತೊಣ್ದು, ಐತ ಕಡೆ ಕೊಡಿ ಕುತ್ತುದು..."* (ಆ ಕೂಡಲೆ ಆತ ಒಂದು ಓಲೆ ತೆಗೆದುಕೊಂಡು, ಅದರ ತುದಿ ಬುಡ ಕತ್ತರಿಸಿ...) ಎಂಬ ವಿವರಣೆಗಳಿವೆ. ಇವೆರಡಕ್ಕೂ ಪೂರಕವಾಗಿ ಸಮಕಾಲೀನವಾದ ಮಾದರಿಯನ್ನು ಮೆನ್ನರ್‌ನ 'ಪಾಡ್ದನೊಳು'(೧೮೮೬)ವಿನಲ್ಲಿಯೂ ಕಾಣಬಹುದು.

ಅಂತೆಯೇ ದಾನದ ಬಗೆಗೆ ಎರಡೂ ಪಠ್ಯಗಳಲ್ಲಿ ಸಮಾನವಾಗಿ ಕಾಣಿಸುವ ಹಲವು ಅಂಶಗಳಿವೆ. ಉದಾಹರಣೆಗೆ *"... ತರೆ ತೂಯಿನಾಯಗ್ ಯೆಂಣೆ ದಾನ, ಬಂಜಿ ತೂಯಿನಾಯಗ್ ಅನ್ನದಾನ, ಮೆಯಿ ತೂಯಿನಾಯಗ್ ವಸ್ತ್ರದಾನ ಕೊರೊಣ್ದು ಮಲ್ಲ ಸಂತೋಷೊಡು ದಿನ ದೆತ್ತೊಣ್ದು ಇತ್ತಳ್."* (...ತಲೆ ನೋಡಿದವನಿಗೆ ಎಣ್ಣೆ ದಾನ, ಹೊಟ್ಟೆ ನೋಡಿದವನಿಗೆ ಅನ್ನದಾನ, ಮೈ ನೋಡಿದವನಿಗೆ ವಸ್ತ್ರದಾನ ಮಾಡುತ್ತಾ ಮಹಾ ಸಂತೋಷದಿಂದ ದಿನ ಕಳೆಯುತ್ತಿದ್ದಳು...) ಎಂದು 'ಜೈನೆರ್ ಇರ್ಲ್ ದಾಯೆ ಉಣ್ಬುಜೆರ್ ಇನ್ನಿ ಕಾರಣದ ಕಥೆ'[A/1441 pp.56-70]ಯಲ್ಲಿ ಕಂಡುಬಂದರೆ 'ದೀಪಾವಳಿ ಪರ್ಬ'[A/2564-1]ದಲ್ಲಿ ಬರುವ ಉಲ್ಲೇಖ *"ಈ ಅರಸು ರಾಜ್ಯಾಧಿಕಾರಿ ಹೊರ್ತು ಭಾರಿ ಧರ್ಮಿಷ್ಟೆಲಾ ಆದಿತ್ತೆ. ಬಂಜಿ ತೂಯಿನಾಯಗ್ ಅನ್ನದಾನ, ಒಕ್ಕ ತೂಯಿನಾಯಗ್ ವಸ್ತ್ರದಾನ, ತರೆ ತೂಯಿನಾಯಗ್ ಯೆಂಣೆದಾನ, ಗೋವುದಾನ, ಭೂದಾನ, ಕನಕದಾನ ಇಂಚಿತ್ತಿನೆನ್ ದಿನ ದಿನ ದಾನ ಕೊರೊಣ್ದು ಇತ್ತೆ."*(ಈ ಅರಸು ರಾಜ್ಯಾಧಿಕಾರಿಯಲ್ಲದೆ ಭಾರಿ ಧರ್ಮಿಷ್ಟನೂ ಆಗಿದ್ದನು. ಹೊಟ್ಟೆ ನೋಡಿದವನಿಗೆ ಅನ್ನದಾನ, ಮೈ ನೋಡಿದವನಿಗೆ ವಸ್ತ್ರ ದಾನ, ತಲೆ ನೋಡಿದವನಿಗೆ ಎಣ್ಣೆ ದಾನ, ಗೋದಾನ, ಭೂದಾನ, ಕನಕದಾನ ಇಂತವುಗಳನ್ನು ಪ್ರತಿನಿತ್ಯವೂ ಮಾಡುತ್ತಿದ್ದನು...) ಇದೇ ರೀತಿಯಲ್ಲಿದೆ.

ಬರವಣಿಗೆಯ ರೀತಿ, ವಾಕ್ಯರಚನೆ, ನಿರೂಪಣೆ, ವಸ್ತುವಿಚಾರಗಳ ದೃಷ್ಟಿಯಿಂದಲೂ ಎರಡರ ನಡುವೆ ಸಂಬಂಧವಿರುವ ಅನೇಕ ಉದಾಹರಣೆಗಳಿವೆ. ಎರಡೂ ಪಠ್ಯಗಳಲ್ಲಿ ಉಲ್ಲೇಖಗೊಳ್ಳುವ ಕಾಲವು ಹೆಚ್ಚು ಕಡಿಮೆ ಹತ್ತಿರವಿದ್ದು ವಿಷಯ ವ್ಯಾಪ್ತಿಯ ದೃಷ್ಟಿಯಿಂದ ನೋಡಿದಾಗ ಇವುಗಳಲ್ಲಿ ಸಾಮಿಪ್ಯ, ಸಾಮ್ಯತೆ, ಸಾತತ್ಯ ಕಂಡುಬರುತ್ತದೆ. ಒಂದೇ ತೆರನಾಗಿರುವ ವಾಕ್ಯರಚನೆ, ಶೈಲಿ, ಪದಬಳಕೆ, ನೀತಿ, ಧಾರ್ಮಿಕ ವಿಚಾರಗಳು, ಅಂದಿನ ಸಮಕಾಲೀನ ಕ್ರೈಸ್ತ ಧಾರ್ಮಿಕ ಸಾಹಿತ್ಯ, ಪ್ರವಚನಗಳಲ್ಲಿ ಬಳಕೆಯಾಗುವ ಪದಗಳು ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಹಲವು ಉಲ್ಲೇಖಗಳು ಎರಡೂ ಪಠ್ಯಗಳಲ್ಲಿ ಕಂಡುಬರುತ್ತವೆ.

ಇದರೊಂದಿಗೆ ಸಮುದಾಯಗಳ ಅರಿವು ಇಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಸಾಮಾಜಿಕ ಶ್ರೇಣೀಕರಣ, ಭೇದಭಾವ, ತಾರತಮ್ಯ, ಜಾತಿಪದ್ಧತಿ, ಲಿಂಗಭೇದಗಳ ಉಲ್ಲೇಖಗಳು ಅಲ್ಲಲ್ಲಿ ಕಾಣಿಸುತ್ತವೆ. 'ತುಳು ಜನತ ಮದ್‌ಮೆ'[A/1441 pp.416-419]ಯಲ್ಲಿ *"ಹೆಚ್ಚಾದ್ ಪೂಜಾರ್ಳೆಡ್ ರೂಡಿ ಯಿತ್ತಿನವು."* (ಹೆಚ್ಚಾಗಿ ಪೂಜಾರಿಗಳವರಲ್ಲಿ ರೂಢಿಯಿರುವುದು) ಎಂದು ಹೇಳಲಾಗಿದೆ. ಮಾರಿ ದೇರುನಿ ಅಂದ್‌ಂಡ ದಾನೆ? [A/1441 pp. 408-410] ಟಿಪ್ಪಣಿಯಲ್ಲಿ *"ಊರು ಊರುಡು ವರ್ಸೊಗು ಯಿರುವೊಳು ಮಾರಿ ದೇರುಂಡು. ಉಂದು ತುಳು ಜನೊಕುಳು ಮಾತ್ರ ಆಚರಿಸುವೆರ್. ಕೊಂಕಣೆ ಬ್ರಾಣೆರತ್ತ್. ಮಾರಿ ಅಂದ್‌ಂಡ ಪೊಂಣು ದೇವತೆಗೆ."* (ಊರೂರಲ್ಲಿ ವರ್ಷಕ್ಕೆರಡು ಬಾರಿ ಮಾರಿ ಓಡಿಸಲಾಗುತ್ತದೆ, ಇದನ್ನು ತುಳು ಜನರು ಮಾತ್ರ ಆಚರಿಸುತ್ತಾರೆ. ಕೊಂಕಣಿ ಬ್ರಾಹ್ಮಣರಲ್ಲ. ಮಾರಿಯೆಂದರೆ ಹೆಣ್ಣು ದೇವತೆಯಂತೆ.) ಎಂದಿರುವುದನ್ನು ಗಮನಿಸಬಹುದು. ಹಾಗೆಯೇ ನಲ್ಕೆ, ಪಂಬದೆ, ಬೈದೆರ್ಲು, ಓಡಾರಿ ಇತ್ಯಾದಿ ಉಲ್ಲೇಖಗಳು ಕಂಡುಬರುತ್ತವೆ. ಇದಲ್ಲದೆ 'ಭೂತೊಳೆಗ್ ಕೋಲ ಕಟ್ಟುನಿಯೇರ್' [A/1441 pp. 466-467]ಟಿಪ್ಪಣಿಯಲ್ಲಿ *"ಭೂತೊಳೆಡ್‌ಲಾ ನರಮಾನ್ಯೆರೆ ಲೆಕ್ಕನೆ ಗೀಲ್ ಮೇಲ್ ಯಿನ್ನಿ ಭೇದ ಉಂಡು. ಅಂಚೆನೆ ಕೋಲ ಕಟ್ಟುನಾಕುಳೆಡ್‌ಲಾ ಮೂಜಿ ಜಾತಿ ಉಂಡು. ಯೇರ್ ಅಂದ್‌ಂಡ– ನಲ್ಕೆದಾಕುಳು, ಪಂಬದೆರ್, ಪರವೆರ್ ಈ ಮೂಜಿ ಜಾತಿ...."*(ಭೂತಗಳಲ್ಲೂ ಮನುಷ್ಯರಂತೆಯೇ ಮೇಲುಕೀಳು ಎಂಬ ಬೇಧವಿದೆ. ಹಾಗೆಯೇ ಕೋಲ ಕಟ್ಟುವವರಲ್ಲೂ ಮೂರು ಜಾತಿಯಿದೆ. ನಲ್ಕೆಯವರು, ಪಂಬದರು, ಪರವರು ಈ ಮೂರು ಜಾತಿ...), "ನಲ್ಕೆಯವರು ಬೊಬ್ಬರ್ಯ, ಪಿಲಿಚಾಮುಂಡಿ, ಕಲ್ಲುರ್ಟಿ, ಕಲ್ಕುಡ ಇಂತಹಾ ಚಿಲ್ಲರೆ ಭೂತಗಳಿಗೆ ಕಟ್ಟುತ್ತಾರೆ, ಪಂಬದರು ಸಾರಾಲ್ ಜುಮಾದಿಗೆ ಮರ್ಲುಜುಮಾದಿಗೆ, ಓಡಿಲ್ತಾಯನಿಗೆ, ಬೈದೆರ್ಲು ಇಂತಹಾ ದೊಡ್ಡ ಭೂತಗಳಿಗೆ ಕಟ್ಟುತ್ತಾರೆ, ಪರವರು ಹೆಚ್ಚಾಗಿ ಬೈದೆರ್ಲುಗಳಿಗೆ ಮಾತ್ರ ಭೂತ ಕಟ್ಟುತ್ತಾರೆ" ಎನ್ನುತ್ತಾ ಮುಂದುವರೆದು ವಿವಿಧ ಸಮುದಾಯಗಳ ವಿವರ ನೀಡಿರುವುದು ಗಮನಿಸಬೇಕಾದ ವಿಚಾರವಾಗಿದೆ.

ಪದ –ವಾಕ್ಯ –ಶೈಲಿ–ನಿರೂಪಣೆ

ಕೆಲವು ಕಡೆ ಒಂದು ಪದ ನೀಡಿದಾಗ ಅದರ ವಿವರಣೆಯನ್ನೂ ಪರ್ಯಾಯ ಪದವನ್ನೂ ಕೊಡುವುದು ಇಲ್ಲಿನ ಟಿಪ್ಪಣಿಗಳ ಒಂದು ಸಾಮಾನ್ಯವಾದ ಶೈಲಿಯಾಗಿದೆ. ಒಂದೇ ಟಿಪ್ಪಣಿಯಲ್ಲಿ ಈ ರೀತಿಯ ಹಲವು ವಾಕ್ಯಗಳನ್ನು ಕಾಣಬಹುದು. ಅದೇ ವೇಳೆ ಕೆಲವೆಡೆ ನಿರ್ದಿಷ್ಟ ಅರ್ಥ ಸ್ಪಷ್ಟನೆ ಆಗದಿರುವುದೂ ಇದೆ. ಉದಾಹರಣೆಗೆ 'ಸೈತಿನಾಕುಳೆಗ್ ಮಳ್ಪು ಬೊಜ್ಜ'[A/2564-1]ದಲ್ಲಿ *"...ಪಿಂಡ ಅಂದ್‌ಂಡ ನುಪ್ಪುದ ಮುದ್ದೆ. ಕಕ್ಕೆಗ್ ನುಪ್ಪು ದೀಪಿನೆತ ಅರ್ಥ ದಾನೆಂದ್‌ಂಡ ಈ ಬೊಜ್ಜೊಗು ಪಿತೃಯಜ್ಞ*

ಇನ್ಪುಂಡು" (ಪಿಂಡ ಎಂದರೆ ಅನ್ನದ ಮುದ್ದೆ. ಕಾಗೆಗೆ ಅನ್ನ ಇಡುವುದರ ಅರ್ಥ ಏನೆಂದರೆ ಈ ಉತ್ತರಕ್ರಿಯೆಗೆ ಪಿತೃಯಜ್ಞ ಎನ್ನಲಾಗುತ್ತದೆ), *"...ಬೊಕ್ಕ ಜೀವ ಬುಡ್ತಿ ಅಡಿಟ್ ನೀರ್ ನೆರಲ್ ಅಂದ್‌ದ್ ಕಟ್ಟುವೆರ್. ಅವು ದಾನೆಂದ್‌ಂಡ..."*, (ಮತ್ತೆ ಜೀವ ಬಿಟ್ಟ ಸ್ಥಳದಲ್ಲಿ ನೀರು ನೆರಳು ಎಂದು ಕಟ್ಟುತ್ತಾರೆ. ಅದು ಏನೆಂದರೆ), *"...ಯೇಕೊದಿಷ್ಟ ಅಂದ್‌ಂಡ..."*, (ಯೇಕೋದಿಷ್ಟ ಎಂದರೆ) *"... ಪದ್‌ರಾಡೆನಾನಿ ಶಪಿಂಡಿ ಮಳ್ಪುವೆರ್. ಶಪಿಂಡಿ ಅಂದ್‌ಂಡ ಸೈತಿನಾಯನ್ ಆಯ ಪಿರಿಯೆರೆಡೊಪ್ಪ ಕೂಡಾದ್ ಒಟ್ಟುಗು ಉಣ್ಪಾವುನಿ. ಉಂದೆನ್ ಯೆಂಚ ಮುಳ್ಪುವೆರ್ ಅಂದ್‌ಂಡ..."*(ಹನ್ನೆರಡನೆಯ ದಿನ ಶಪಿಂಡಿ ಮಾಡುತ್ತಾರೆ. ಶಪಿಂಡಿ ಎಂದರೆ ಸತ್ತವನನ್ನು ಅವನ ಹಿರಿಯರೊಂದಿಗೆ ಸೇರಿಸಿ ಒಟ್ಟಿಗೆ ಊಟ ಮಾಡಿಸುವುದು. ಇದನ್ನು ಹೇಗೆ ಮಾಡುತ್ತಾರೆ ಎಂದರೆ) ಎಂಬಿತ್ಯಾದಿ ವಾಕ್ಯಗಳನ್ನು ಗಮನಿಸಬಹುದು. ಇಲ್ಲಿ ಹಲವೆಡೆ ಪದಗಳ ಬಳಕೆ ವಾಕ್ಯರಚನೆಯ ವಿನ್ಯಾಸವು ಅರ್ಥಸಾಧ್ಯತೆಯನ್ನು ವಿಸ್ತರಿಸುತ್ತದೆ.

ಕಂಸದೊಳಗೆ ಅರ್ಥವನ್ನು ನೀಡಿ ನಿರ್ದಿಷ್ಟ ಪಾರಿಭಾಷಿಕ ಪದಗಳನ್ನು ಅರ್ಥೈಸುವ ಬಗೆಯನ್ನು ಇಲ್ಲಿ ಕಾಣಬಹುದು. ಹೀಗೆ ವಿವರಿಸುವಾಗ ಇಂಗ್ಲಿಷ್ ಅಂಕೆಗಳನ್ನು ಬಳಸಿರುವುದೂ ಇದೆ. ಉದಾಹರಣೆಗೆ 'ತುಳು ಜನತ ಬೊಜ್ಜ'[A/1441 pp.419-422]ದಲ್ಲಿ *"ಆನಿಡ್ದ್ ಬೊಜ್ಜದಾನಿ ಮುಟ್ಟ (13 ದಿನ ಮುಟ್ಟ)"* *"ಐಕ್ 5-7 ಅತ್ತ್‌ಡ 9 ಯಿಳೆತ (ಅಂತರದ)"*(ಆವತ್ತಿನಿಂದ ಬೊಜ್ಜದವರೆಗೆ (13ದಿನದವರೆಗೆ)... ಅದಕ್ಕೆ 5-7 ಅಲ್ಲದಿದ್ದರೆ 9ಎಳೆಯ (ಅಂತರದ)...) ಎಂದಿರುವುದು ಕಾಣಿಸುತ್ತದೆ. 'ತುಳು ಜನತ ಮದ್‌ಮೆ' [A/1441 pp.416-419]ಯಲ್ಲಿ *"ವರುಷದ ಬಾಲೆಳೆಡ್ದ್ ಪತ್ತ್‌ದ್ ಜವ್ವನೆರೆ ಮುಟ್ಟ ಕೈದಾರೆದ ಮದ್‌ಮೆ ಮಳ್ಪುವೆರ್. (ಕನ್ಯಾ ಮದ್‌ಮೆ)..."*(ವರುಷದ ಮಕ್ಕಳಿಂದ ಹಿಡಿದು ಯುವಕರವರೆಗೆ ಕೈದಾರೆಯ ಮದುವೆ ಮಾಡುತ್ತಾರೆ (ಕನ್ಯಾಮದುವೆ)...) ಎನ್ನಲಾಗಿದೆ. 'ಅಳಿಯ ಸಂತಾನ ಆಯಿನಿ ಯೆಂಚ?' [A/1441 pp. 410-416] ಟಿಪ್ಪಣಿಯಲ್ಲಿ *"...ಪಂಡಿನಿ (ನುಡ್ಡಿನಿ)..."(...ಹೇಳಿದ್ದು (ನುಡಿದದ್ದು)..)* *"...ಆಣಗ್ ಭೂತಾಳಿಪಾಂಡಿ ಯಿನ್ಪಿ ಪುದರ್ ಆಂಡ್. ಅಂದ್‌ಂಡ (ಭೂತ ಆಳು ಪಾಂಡಿ)"* (..ಹುಡುಗನಿಗೆ ಭೂತಾಳಪಾಂಡಿ ಎಂಬ ಹೆಸರಾಯಿತು. ಎಂದರೆ (ಭೂತ ಆಳು ಪಾಂಡಿ)...),"...ಬಾಧ್ಯೆರ್ (ಹಕ್ಕ್‌ದಾಕುಳು)"(ಬಾಧ್ಯರು(ಹಕ್ಕಿನವರು)..) ಎಂದಿದೆ. 'ಜಕ್ಕಿನಿನ್ ಬುಡುಪಾವುನು ಯೆಂಚ?' [A/1441 pp. 393-396] ಟಿಪ್ಪಣಿಯಲ್ಲಿ "ಬೆರಿ ಮೂಕುಡ್ದು (ಬೆರಿಪಾಡ್ದ್) ಉಂತುವೆರ್" (ಹಿಂತಿರುಗಿ(ಬೆನ್ನು ಹಾಕಿ) ನಿಲ್ಲುತ್ತಾರೆ) ಹೀಗೆ ಕಂಸದಲ್ಲಿ ವಿವರ ನೀಡಲಾಗಿದೆ. ಹಾಗೆಯೇ ಇಂಗ್ಲಿಶ್ ಅಂಕೆಗಳನ್ನೂ ಬಳಸಲಾಗಿದೆ. 'ನೂಲ ಪುಣ್ಣಮೆದ ಕ್ರಮ ದಾನೆಂದ್‌ಂಡ?'ಟಿಪ್ಪಣಿಯಲ್ಲಿ *"9 ನೂಲುಗು"* (9 ನೂಲಿಗೆ) [A/2564-3]ಎಂದು ಹೇಳಲಾಗಿದೆ.

ವಾಕ್ಯದೊಳಗೆ ವಿವರಣಾತ್ಮಕ ಶೈಲಿಯೂ ಕಾಣಿಸುವುದಿದೆ. ಟಿಪ್ಪಣಿಯಲ್ಲಿ ಬರುವ

ಪದವೊಂದರ ವಿವರವನ್ನು ಕೊನೆಯಲ್ಲಿ ವಾಕ್ಯರೂಪದಲ್ಲಿ ನೀಡಿರುವುದಿದೆ. ಉದಾಹರಣೆಗೆ 'ನೂಲ ಪುಣ್ಣಮೆದ ಕ್ರಮ ದಾನೆಂದ್'ಂಡ?'[A/2564-3]ಟಿಪ್ಪಣಿಯಲ್ಲಿ ಗಮನಿಸುವುದಾದರೆ *'ಪೊಸ ಜನಿವಾರೊನು ಪಾಡೊಣುವೆರ್. ಪೊಸ ಜನಿವಾರ ಪಾಡುನಿ ಅಂದ್'ಂಡ?'....* (ಹೊಸ ಜನಿವಾರವನ್ನು ಹಾಕಿಕೊಳ್ಳುತ್ತಾರೆ. ಹೊಸ ಜನಿವಾರವನ್ನು ಹಾಕುವುದು ಎಂದರೆ...) ಹೀಗೆ ಮುಂದುವರೆದು ಅದರ ವಿವರಣೆ ಬರುತ್ತದೆ. ವಾಕ್ಯದ ನಡುವೆ ಪಂಚಕವ್ಯ ಎಂಬ ಪದ ಬರುತ್ತದೆ. ಆಗ ಟಿಪ್ಪಣಿಯ ಕೊನೆಗೆ ಗೋಮಯ, ಗೋಮೂತ್ರ, ಹಾಲು, ಮೊಸರು, ತುಪ್ಪ ಈ ಐದು ಸೇರಿದ್ದನ್ನು ಪಂಚಗವ್ಯ ಎನ್ನುತ್ತಾರೆ ಎಂಬುದನ್ನು ಕಂಸದೊಳಗೆ ಹೀಗೆ ಸೂಚಿಸಲಾಗಿದೆ *:"(ಗೋಮಯ, ಗೋಮೂತ್ರ, ಪೇರ್, ಕೊಜಪು, ನೈ, ಈ ಐನ್ ಬಗೆ ಕೂಡ್ಡಿನೆಕ್ಕ್ ಪಂಚಕವ್ಯ ಯಿನ್ವೆರ್.)"*

ಈ ಟಿಪ್ಪಣಿಗಳಲ್ಲಿ ಹಲವೆಡೆ ಸ್ಪಷ್ಟೀಕರಣವನ್ನು ಕಂಸದೊಳಗೆ ನೀಡುವುದು ಕಂಡುಬರುತ್ತದೆ. ಅದೇ ರೀತಿ ಪರ್ಯಾಯ ಪದ, ಅರ್ಥಗಳನ್ನು ಕಂಸದೊಳಗೆ ಬಿತ್ತ್‌ಲ್‌ದ (ತೈ ಬಿತ್ತ್‌ಲ್‌ದ), ಜಲದುರ್ಗೆ (ಉಳ್ಳಾಳ್ದಿ), ಅಪ್ಪ (ಯೆಣ್ಮ), ಮಾಣಿನ್ (ಆಣನ್), ಮಾಣಿನ್ (ಮಗನ್), ಆಯನ(ಜಾತ್ರೆ), ಗಣೊಕುಳು (ಪಿಶಾಚಿಳು), ಬೇತೆ (ಯಿತರ), ಮಗನ್ (ಭೀಮನ್) ಹೀಗೆ ನೀಡುವುದನ್ನೂ ಕಾಣಬಹುದು. ಇದು ವಿಷಯದ ಸ್ಪಷ್ಟನೆಯ ಜೊತೆಗೆ ಸಮಕಾಲೀನ ಪರ್ಯಾಯ ಪದವನ್ನು ಅರಿತುಕೊಳ್ಳುವಲ್ಲಿ ಸಹಾಯಕವಾಗಿದೆ.

ಭಾಷಾ ಬಳಕೆಯಲ್ಲಿ ವಿವರಣೆಯ ಧಾಟಿ ಇರುವುದು ಹಲವೆಡೆ ಕಂಡುಬರುತ್ತದೆ. ಅದರಲ್ಲೂ ಸಾಂಸ್ಕೃತಿಕ ವಿವರಗಳನ್ನು ತಿಳಿಸುವಲ್ಲಿ ಈ ಧಾಟಿ ಹೆಚ್ಚಾಗಿದೆ. ಉದಾಹರಣೆಗೆ 'ಮಾಣಿನ್ ಲೆತ್ತ್‌ದ್ (ಮಗನ್) ಪಂಡಿನಿ...', 'ಲಿಂಗೊಗು ಅಬ್ಬಿಕ್ (ಅಭಿಶೇಕ) ಮಳ್ತ್‌ದ್' ಹೀಗೆ ಟಿಪ್ಪಣಿಯ ವಾಕ್ಯಗಳೊಳಗೆ ವಿವರಣೆಯನ್ನು, ಕಂಸದೊಳಗೆ ಅರ್ಥ ನೀಡುವಾಗ ಜಾತಿ ಸ್ಪಷ್ಟನೆಯೂ ಕಂಡುಬಂದಿರುವುದಿದೆ. ಉದಾಹರಣೆಗೆ, ದೇವಕಾರ್ಯ ಮಳ್ಪು ಬ್ರಾಣೆ (ಅಂದ್'ಂಡ ಸ್ತಾನಿಕೆ), ಅಡಿಪುದಾಳ್ (ಅಂದ್'ಂಡ ಅಂಜಣ ಅಡಿಪು ಮೊಯಿಲ್ತಿ), ಸಾಂತಿದಾಯೆ(ಅಂದ್'ಂಡ ಸಾಂತಿ ಮಳ್ಪು ಬ್ರಾಣೆ) (ದೇವೆರೆ ಪೂಜೆದ ಕ್ರಮ ದಾನೆಂದ್'ಂಡ.[A/2564-3])

ಇದೇ ಮಾದರಿಯಲ್ಲಿ ವಸ್ತು ಪರಿಕರದ ವಿವರಣೆಯನ್ನು ನೀಡಲಾಗಿದೆ, ಹಾಗೆಯೇ ವ್ಯಕ್ತಿ, ವಸ್ತು, ಸ್ಥಳಗಳನ್ನು ನಿರ್ದೇಶಿಸಲಾಗಿದೆ. ಉದಾಹರಣೆಗೆ 'ದೇವೆರೆ ಪೂಜೆದ ಕ್ರಮ ದಾನೆಂದ್'ಂಡ.' [A/2564-3] ಟಿಪ್ಪಣಿಯನ್ನು ಗಮನಿಸಬಹುದು. ಇಲ್ಲಿ ವಿವಿಧ ಬಗೆಯ ಆರತಿಗಳನ್ನು ಹೆಸರಿಸಿದ ನಂತರ ಬರವಣಿಗೆಯೊಳಗೆ ಅದನ್ನು ಬಳಸಿಕೊಳ್ಳಲಾಗಿದೆ. *"ದೇವೆರೆಗ್ ಒಂಜಿ ಆರತಿ ಮಳ್ತ್‌ದ್ (ಅಂದ್'ಂಡ ಕಂಚಿದ ಯೇಕಾರತಿ ಪರ್ತಿದವು ರಡ್ಡ್ ತಿರಿ ಪಾಡ್ದ್ ಒಂತೆ ಯೆಂಣೆ ಮೈತ್‌ದ್ ಬೊಳ್ಪು ಪೊತ್ತಾದ್ ದೇವೆರೆಗ್ ಪಾದೊಡ್ದು ತರೆ ಮುಟ್ಪ ತಿರ್ತ್ ಮಿತ್ತ್ ಸುತ್ತ ದೆರ್ಪುವೆ."* (ದೇವರಿಗೆ

ಒಂದು ಆರತಿ ಮಾಡಿ (ಅಂದರೆ ಕಂಚಿನ ಏಕಾರತಿ ಹತ್ತಿಯ ಎರಡು ಬತ್ತಿ ಹಾಕಿ ಸ್ವಲ್ಪ ಎಣ್ಣೆ ಹೊಯ್ದು ಬೆಳಕು ಬೆಳಗಿಸಿ ದೇವರಿಗೆ ಪಾದದಿಂದ ತಲೆಯವರೆಗೆ ಕೆಳಗೆ ಮೇಲೆ ಸುತ್ತು ಎತ್ತುತ್ತಾನೆ.) *"...ಒಂತೆ ಬಲಿ ತಪ್ಪು ಕೊಂಡು ಕೊರೊಡು, ಈ ತಪ್ಪು ಕುಂಟಾಲ್‌ದವು, ರೆಂಜಿರ್‌ದವು ಉಂದೆತ್ತನೇ... ದೇವೆರ್ ತುಂಬುನಾಯೆ ಬೊಕ್ಕ ಸತ್ತಿಗೆ ಪತ್ತುನಾಯೆ ದೀಟಿಗೆ ಪತ್ತುನಾಯೆ ಮೋಕುಳು ಮಾತ್ರ ಉಳಯಿದ ಅಂಜಣೊಡು ಒಂತೆ ಉಂತೊಡು,... ಅವು ದಾಯೆಗ್‌ಂದ್‌ಂಡ?... ಮೋಕುಳು (ಅಂದ್‌ಂಡ) ದೇವೆರೆನ್ ತುಂಬುನಾಯೆ, ದೇವಕಾರ್ಯದಾಯೆ..."* (ಸ್ವಲ್ಪ ಬಲಿ ಸೊಪ್ಪು ತೆಗೆದುಕೊಂಡು ಕೊಡಬೇಕು. ಈ ಸೊಪ್ಪು ಕುಂಟಲದ್ದು, ರೆಂಜಿರೆಯದ್ದು ಇದರದ್ದೆಯೇ... ದೇವರನ್ನು ಹೊರುವವನು ಮತ್ತು ಸತ್ತಿಗೆ ಹಿಡಿಯುವವ. ಜೀಟಿಗೆ ಹಿಡಿಯುವವ ಇವರುಗಳು ಮಾತ್ರ ಒಳಗಿನ ಅಂಗಳದಲ್ಲಿ ಸ್ವಲ್ಪ ನಿಲ್ಲಬೇಕು... ಇದು ಯಾಕಂದರೆ?... ಇವರು (ಅಂದರೆ) ದೇವರನ್ನು ಹೊರುವವ, ದೇವಕಾರ್ಯದವ...).

ಹಾಗೆ ಇದೇ ಟಿಪ್ಪಣಿಯಲ್ಲಿ ದಿಕ್ಕು, ವಸ್ತು, ಮನುಷ್ಯನ ವಿವರಣೆ ಸೂಚಿಸುವ ರೀತಿಯನ್ನೂ ನೋಡಬಹುದು *"ಆ ಕಲಷದಡೆಗ್ ಅಂದ್‌ಂಡ ಭಟ್ಟೆ ಕುಳ್ಳುದಿನಡೆಗ್..."* (ಆ ಕಲಷದ ಬಳಿಗೆ ಅಂದರೆ ಭಟ್ಟ ಕುಳಿತಲ್ಲಿಗೆ...) ಇಂತಹಾ ಉದಾಹರಣೆಗಳಿವೆ. ಇದಕ್ಕೆ ಸಂಬಂಧಪಟ್ಟಂತೆಯೇ ಇನ್ನೊಂದು ಬಗೆಯನ್ನು ಇಲ್ಲಿ ಗಮನಿಸಬಹುದು– *"ಪೂಜೆ ಮಳ್ಪಿ ಭಟ್ಟೆ ಉಳಯಿ ಕಲಷ ದೀಪಿ ಕಲ್ಲ್‌ಗ್ ಸೇಡಿದ ಪೊಡಿಟ್ ನಾಲ್ ಗೀಟ್ ಒಯಿತ್‌ದ್ ಕಲಷೊಗು ದೀವೆರೆ ದರ್ಭೆ ಸಮ ಮಳ್ಪುವೆ. ಕಲಷ ಅಂದ್‌ಂಡ ತಾಂಬ್ರೊದವು, ಬೊಳ್ಳಿದವು, ಬಂಗಾರ್‌ದವುಲಾ ಕಲಷ ಉಪ್ಪುಂಡು. ಸಾಂತಿದಾಯೆ ಅಂದ್‌ಂಡ ನೇವೆದ್ಯ ಬೈಪಾವುನಾಯೆ, ಕಂಚಿದ ಧೂಪುಂಡಿಡ್ ನೇವೆದ್ಯ ಬೈಪಾವು..."*(ಪೂಜೆ ಮಾಡುವ ಭಟ್ಟ ಒಳಗೆ ಕಲಶ ಇಡುವ ಕಲ್ಲಿಗೆ ಸೇಡಿಯ ಹುಡಿಯಲ್ಲಿ ನಾಲ್ಕು ಗೆರೆ ಎಳೆದು ಕಲಶದಲ್ಲಿ ಇಡಲು ದರ್ಭೆ ಸರಿ ಮಾಡುತ್ತಾನೆ. ಕಲಶ ಅಂದರೆ ತಾಮ್ರದ, ಬೆಳ್ಳಿಯ, ಬಂಗಾರದ್ದೂ ಕಲಶ ಇರುತ್ತದೆ. ಶಾಂತಿಯವ ಅಂದರೆ ನೈವೇದ್ಯ ಬೇಯಿಸುವವ, ಕಂಚಿಯ ದೂಪದ ಪಾತ್ರೆಯಲ್ಲಿ ನೈವೇದ್ಯ ಬೇಯಿಸುವ...)

ಅದೇ ರೀತಿ ಒಂದಕ್ಕೊಂದು ಸಂಬಂಧಪಟ್ಟಿರುವ ವಿಚಾರಗಳನ್ನು ಸ್ಪಷ್ಟಪಡಿಸುತ್ತಾ ಸಾಗುವ ವಿವರಣಾತ್ಮಕ ಟಿಪ್ಪಣಿಯ ಉತ್ತಮ ಉದಾಹರಣೆಗಳು ಸುಬ್ರಾಯ ದೇವೆರೆ ಸ್ತಳೊಡು ಆಪಿ ಸೃಷ್ಟಿದ ಕ್ರಮ[A/2564-4&5]ಟಿಪ್ಪಣಿಯಲ್ಲಿ ಕಂಡುಬರುತ್ತವೆ. *"...ರಡ್ಡ್ ದಿನೊಕು ದುಂಬೇ ತೇರ್ ಕಟ್ಟೆರೆ ಸುರು ಮಳ್ಪೊಡು. ತೇರುನಿ ಕಟ್ಟುನಿ ಯೆಂಚಂದ್‌ಂಡ?...", "...ತೇರ್ ಬೊಕ್ಕ ರಥ ಉಂದು ರಡ್ಡ್‌ಲಾ ಒಂಜೇ. ರಥ ಕಟ್ಟುನಿ ಯೆಂಚಂದ್‌ಂಡ..."*, ("...ಎರಡು ದಿನಕ್ಕೆ ಮೊದಲೇ ತೇರು ಕಟ್ಟಲು ಶುರು ಮಾಡಬೇಕು. ತೇರನ್ನು ಕಟ್ಟುವುದು ಹೇಗೆಂದರೆ?....","....ತೇರು ಮತ್ತು ರಥ ಇವೆರಡೂ ಒಂದೇ. ರಥ ಕಟ್ಟುವುದು ಹೇಗೆಂದರೆ?) *"...ಪಾಕ ಜನ ಪತಾಕೆ ಸುರಿಯೊಡು. ಪತಾಕೆ*

ಅಂದ್‌ಂಡ...", (ತುಂಬಾ ಮಂದಿ ಪತಾಕೆ ಸುರಿಯಬೇಕು. ಪತಾಕೆ ಎಂದರೆ) *"...ಮುಗುಳಿ ದೀವೊಡು. ಈ ಮುಗುಳಿನ್ ದೀಪಿನಿ ಯೆಂಚಂದ್‌ಂಡ...ಮುಗುಳಿ ಅಂದ್‌ಂಡ.. ಮುಗುಳಿನ್ ಶಿಖರೊಡು ಯೇರಾನಗ ಕೊಂಬು ಉರಿಪೊಡು. ಮುಗುಳಿ ಅಂದ್‌ಂಡ ಬೆದ್ರ್‌ದ ಸಲಕೆಳೆನ್ ಉರುಟುಡು ಬಗ್ಗಾದ್ ಕಟ್ಟ್‌ದ್ ಐಕ್ ಕೆಂಪುದ ತೋಪುದ ಅರುವೆನ್ ಮುಚ್ಚಿದ್ ಪೊಲಿಯುನಿ. ಪೊಲಿದ್ ಆಯಿ ಬೊಕ್ಕ ಐತ ತರೆಕ್ ಒಂಜಿ ಪಿತ್ತಾಳಿದ ಕಿನ್ನಿ ಮುಗುಳಿನ್ ದೀಪಿನಿ. ಇಂಚೆನೆ ತೇರ್‌ಗ್ ಮುಗುಳಿ ದೀದ್ ಆಯಿ ಬೊಕ್ಕ ಮಿತ್ತ್‌ಡ್ದ್ ಅಂದ್‌ಂಡ ಮುಗುಳಿದ ಕೈತಳ್‌ಡ್ದ್,".*, (...ಮುಗುಳಿ ಇಡಬೇಕು. ಈ ಮುಗುಳಿಯನ್ನು ಇಡುವುದು ಹೇಗೆಂದರೆ... ಮುಗುಳಿ ಎಂದರೆ... ಮುಗುಳಿಯನ್ನು ಶಿಖರಕ್ಕೇರಿಸುವಾಗ ಕೊಂಬು ಊದಬೇಕು. ಮುಗುಳಿ ಎಂದರೆ ಬಿದಿರಿನ ಸಲಾಕೆಗಳನ್ನು ವೃತ್ತಾಕಾರವಾಗಿ ಬಗ್ಗಿಸಿ ಕಟ್ಟಿ ಅದಕ್ಕೆ ಕೆಂಪು ಬಟ್ಟೆಯನ್ನು ಮುಚ್ಚಿ ಹೊಲಿಯುವುದು. ಹೊಲಿದು ಆದ ಬಳಿಕ ಅದರ ತಲೆಗೆ ಒಂದು ಹಿತ್ತಾಳೆಯ ಸಣ್ಣ ಮುಗುಳಿಯನ್ನು ಇಡುವುದು. ಹೀಗೆ ತೇರಿಗೆ ಮುಗುಳಿ ಇರಿಸಿ ಆದ ಬಳಿಕ ಮೇಲಿನಿಂದ ಅಂದರೆ ಮುಗುಳಿಯ ಬಳಿಯಿಂದ...) *"...ಪಂದ್ರ್‌ ಅಂದ್‌ಂಡ ಬಾರೆದ ಪಂದ್ರುಳೆನ್..."*, (...ಹಣ್ಣು ಎಂದರೆ ಬಾಳೆಯ ಹಣ್ಣುಗಳನ್ನು...) *"ಪೊಡಿ ಮಡಸ್ತಾನ ಮಳ್ಪುವೆರ್. ಪೊಡಿ ಮಡಸ್ತಾನ ಅಂದ್‌ಂಡ..."*(...ಪೊಡಿ ಮಡಸ್ತಾನ ಮಾಡುತ್ತಾರೆ. ಪೊಡಿ ಮಡಸ್ತಾನ ಎಂದರೆ ...) ಅದೇ ರೀತಿ ಪದಗಳ ಪುನರಾವರ್ತನೆ ಒಂದು ಲಯಬದ್ಧತೆಯೊಂದಿಗೆ ಓದಿಸಿಕೊಂಡು ಹೋಗುವ ಗುಣವನ್ನು ಹೊಂದಿದೆ.

ನಿರೂಪಣೆಯೊಳಗೆ ಅಲ್ಲಲ್ಲಿ ಬರೆಯುವವರ ತೌಲನಿಕವಾದ ದೃಷ್ಟಿಯೂ ಕಾಣುತ್ತದೆ. ಇದೇ ಟಿಪ್ಪಣಿಯಲ್ಲಿ *"ದೇವಸ್ತಾನೊಳೆಡ್ ಜಾತ್ರೆಳೆ ಸಮಯೊಡು ಆಪಿ ತೇರ್‌ದ ಕ್ರಮ ಇಂಚೆನೇ. ಸೃಷ್ಠಿದಾನಿ ಮಾತ ದಿಕ್ಕ್‌ಡ್‌ಲಾ ತೇರ್ ಕಟ್ಟುವೆರ್. ಸುಬ್ರಮಣ್ಯ ಸೃಷ್ಠಿ ಕುಡ್ಪುದ, ಸೂಡದ ಸೃಷ್ಠಿ ಇಂಚಿತ್ತಿ ಸ್ತಳೊಟು ಸೃಷ್ಠಿ ಭಾರಿ ಗೌಜಿ ಆಪುಂಡು. ಪಾಕ ಸುಬ್ರಾಯ ದೇವಸ್ತಾನೊಳೆಡ್ ವಿಮಾನೊದ ಮೇಲ್‌ಗ್ ಮಂಟವು ಕಟ್ಟ್‌ದ್ ಐಕ್ ತಮರದ ಝುಲ್ಲಿಳೆನ್ ಮಿನಿ ಪಾಡುವೆರ್. ಕೆಲವು ದಿಕ್ಕ್‌ಡ್ ಅವುಲಾ ಉಪ್ಪುಜಿ."*(ದೇವಸ್ಥಾನಗಳಲ್ಲಿ ಜಾತ್ರೆಗಳ ಸಮಯದಲ್ಲಿ ಆಗುವ ತೇರಿನ ಕ್ರಮ ಹೀಗೆಯೇ. ಷಷ್ಠಿಯ ಸಮಯದಲ್ಲಿ ಎಲ್ಲಾ ಕಡೆಯಲ್ಲೂ ತೇರು ಕಟ್ಟುತ್ತಾರೆ. ಸುಬ್ರಮಣ್ಯ ಷಷ್ಠಿ ಕುಡುಪು ಸೂಡ ಇಂತಹಾ ಸ್ಥಳಗಳಲ್ಲಿ ಷಷ್ಠಿ ಬಹಳ ಅದ್ದೂರಿಯಿಂದ ನಡೆಯುತ್ತದೆ. ಅನೇಕ ಸುಬ್ರಾಯ ದೇವಸ್ಥಾನ ಗಳಲ್ಲಿ ವಿಮಾನದ ಮೇಲಕ್ಕೆ ಮಂಟಪ ಕಟ್ಟಿ ಅದಕ್ಕೆ ತಗಡಿನ ಝುಲ್ಲಿಗಳನ್ನೇನಾದರೂ ಹಾಕುತ್ತಾರೆ. ಕೆಲವು ಕಡೆಗಳ ಅದೂ ಇರುವುದಿಲ್ಲ) ಎಂದು ಹೇಳಲಾಗಿದೆ.

ಹಾಗೆಯೇ ಸಂಸ್ಕೃತಿ–ನಂಬಿಕೆಯ ಬಗ್ಗೆ ಹೇಳುವಾಗ ಕಂಡುಬರುವ ಹಣಕಾಸಿನ ಉಲ್ಲೇಖವನ್ನು ಇಲ್ಲಿ ಗಮನಿಸಬಹುದು. ಅಂತೆಯೇ ರೂಪಾಯಿ ಮೌಲ್ಯವನ್ನು ಉಲ್ಲೇಖಿಸುವ ವೇಳೆ ಇಲ್ಲಿ ಇಂಗ್ಲಿಶ್ ಅಂಕೆ, ಕನ್ನಡ ಅಂಕೆ ಹಾಗೂ ಕನ್ನಡ ಅಕ್ಷರಗಳು

ಜೊತೆಜೊತೆಗೆ ಬರುವುದು ಕಾಲಮಾನದ ಸ್ಥಿತ್ಯಂತರ ಮತ್ತು ಬರವಣಿಗೆಯ ಸಂಬಂಧದ ಹಿನ್ನೆಲೆಯಲ್ಲಿ ಕುತೂಹಲಕರವೆನಿಸುತ್ತದೆ. 'ತಿರ್ಪತಿ ಯಾತ್ರೆ' ಟಿಪ್ಪಣಿಯಲ್ಲಿ *"...ಯಿಂಚ ಪಾಕ ವರ್ಸ ಮುಟ್ಟ ಪಾಡೊಣ್ದು ಬರ್ಪೆರ್. ಈ ಮುಡಿಪುನು ಸುರುಟು ಪೋಯಿನಾಕುಳು ರಡ್ಡನೆ ಸರ್ತಿ ಪೋನಗಾವಡ್, ಪೊಸಬೆರ್ ಪೋನಗಾವಡ್, ಸಮ್ಮಂದಿಕೆರ್ ಪೋನಗಾವಡ್ ಕೊಂಡು ಪೋವೊಡು. ಈ ಮುಡಿಪುಡು ಸುಮಾರ್ 10-15 ರುಪಾಯಿದ ದುಡ್ಡು ಉಪ್ಪುಂಡು."* (ಹೀಗೆ ಹಲವು ವರ್ಷಗಳವರೆಗೆ ಹಾಕಿಕೊಂಡು ಬರುತ್ತಾರೆ. ಈ ಹುಂಡಿಯನ್ನು ಮೊದಲು ಹೋದವರು ಎರಡನೇ ಬಾರಿ ಹೋಗುವಾಗಲಾದರೂ, ಹೊಸಬರು ಹೋಗುವಾಗಲಾದರೂ, ನೆಂಟರು ಹೋಗುವಾಗಲಾದರೂ ತೆಗೆದುಕೊಂಡು ಹೋಗಬೇಕು. ಈ ಹುಂಡಿಯಲ್ಲಿ ಸುಮಾರು 10-15 ರುಪಾಯಿಯ ದುಡ್ಡು ಇರುತ್ತದೆ... [A/1441 pp.397-401]) ಎಂದಿದೆ. 'ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ' ಟಿಪ್ಪಣಿಯಲ್ಲಿ ಈ ಬಗೆಯ ಹಲವು ಉಲ್ಲೇಖಗಳಿವೆ. *"ರಾಜಿಡ್ ತನುಕುಳೆ ಅಂಶೊಗು ಬೂರು 200 ರುಪಾಯಿ ಕೊರಿಯರ್ದ ವ್ಯಾಜ್ಯ ಮುಂದರಿಸುಜಿ...", "ಅಳಿಯ ಸಂತಾನದ ಒಂಜಿ ಜಾಗ್‌ನ್ ಐತ ವಾರೀಸ್‌ದಾರೆರೆಡ್ದ್ 400 ರುಪ್ಯೆಗ್ ಕ್ರಯೊಗು ದೆತ್ತೊಂಡೆ. ಬೇತೆ ಜನ ಬತ್ತ್‌ದ್ ತನುಕುಳುಲಾ ಆ ಭೂಮಿಗ್ ಹಕ್ಕ್‌ದಾರೆರ್, ಐಟ್ 200 ರುಪ್ಯೆ ಯೆಂಕುಳೆಗ್ ಸಂದೊಡು...", "ವ್ಯಾಜ್ಯೊಡ್ ಕಂಡವೆರೆ ಕೈಕಾರ್ ಪತ್ತುನೆಡ್ದ್ 200 ರುಪಾಯಿ ಕೊರ್ದ್ರ...", "200 ರುಪಾಯಿ ಪೋಂಡ ಪೋವಡ್...", "ಕ್ರಯಚೀಟ್‌ನ್ ರದ್ದ್ ಮಳ್ಪಾಯರ್ದ 10 ರುಪಾಯಿ ಕೊರ್ಪ. ಯಿತ್ತೆ 5 ರುಪಾಯಿ ದೆತ್ತೊಣ್ಲೆ... ", "200 ರುಪಾಯಿದ ತೈಲಿ ದೆತೊಣ್ದು ಮಿತ್ತ್ ಮಾಳಿಗೆಗ್ ಕೊಂಡು ಪೋಪಿನಾಯ ಲೆಕ್ಕ ಮಳ್ತ್‌ದ್...", "ವಾದಿಳೆ ಕೈಡ್ದ್‌ಲಾ 10 ರುಪಾಯಿ ತಿಂದ್ರಿಯೆ.", "ವಕೀಲ ರುಸುಮು 100ಗ್ (ನೂದೆಗ್) 5 ರುಪಾಯಿ ಪ್ರಕಾರ ಕಾಯಿದೆ ರುಸುಮು, ಆಂಡ ಐಡ್ದ್‌ಲಾ ಕಡಮೆ ಮಳ್ಪೊಲಿ. ಸಾಕ್ಷಿದಾಕುಳೆಗ್ ಒರಿ ಒರಿಯಗ್ ನಾಲಾಣೆತ ಪ್ರಕಾರ ಕಟ್ರ್‌ಂಡ ಸೈ. ", "ನಾಲ್ ರುಪಾಯಿ ಆಂಡಲಾ ಕೊರೊಡು.", "ಒರಿ ಒರಿಯಗ್ ನಾಲ್ ನಾಲ್ ರುಪಾಯಿದ ಲೆಕ್ಕ ಪದ್‌ರಾಡ್ ರುಪಾಯಿ ದೆತ್ತೊಣ್ಲೆ.", "ಯಿತ್ತೆ ಒಂಜೊಂಜಿ ರುಪಾಯಿ ದೆತ್ತೊಣ್ಲೆ", "ಆ ೨೦೦ ರುಪಾಯಿ ಈರೆ ಬೊಡೆದಿ ಬಾಲೆಳೇ ತಿನಡ್", "೨೦೦ ರುಪಾಯಿ ಅಂದ್‌ಂಡ"* ಹೀಗೆ ಮೂರೂ ಬಗೆಯ ಬಳಕೆಗಳು ಮಿಶ್ರವಾಗಿ ಬಂದಿರುವುದು ಗಮನಾರ್ಹ.

ನುಡಿಗಟ್ಟು, ಗಾದೆ ನಾಣ್ಣುಡಿಗಳ ಸೊಗಸಾದ ಬಳಕೆಯೂ ಇಲ್ಲಿ ಕಂಡುಬರುತ್ತದೆ. *"ಮರಣೊಗು ಮರ್ದ್ ಯಿಜ್ಜಿ"*(ಮರಣಕ್ಕೆ ಮದ್ದಿಲ್ಲ) ಶಾಪ ಪಿರಿಪುನಿ ಅತ್ತ್‌ಡ ಆಜ ಪಿರಿಪುನಿ[A/1441 pp. 380-382], *"ಪಣ್ಕೆನಾ ಅಪ್ಪೆನವು ಅಟ್ಟಿಲ್ ಪೋಪುಂಡು ಪಣಂದೆ ಉಪ್ಪುಗೆನಾ ಅಮ್ಮೆ ನಾಯಿ ತಿನ್ಪೆ"*(ಹೇಳಿದರೆ ಅಮ್ಮನ ಅಡುಗೆ ಹಾಳಾಗುತ್ತದೆ, ಹೇಳದೇ

ಇದ್ದರೆ ಅಪ್ಪ ನಾಯಿ ತಿನ್ನುತ್ತಾನೆ) ಒಯಿಳ್ ಪಿರಿಪುನಿ ಯೆಂಚ? [A/1441 pp. 385-388]), *"ಮೂಕುಗು ನಾದುನವು ಪೋದು ಕಂಣ್‌ಗ್ ನಾದುಂಡು"* (ಮೂಗಿಗೆ ವಾಸನೆ ತಟ್ಟುವುದು ಹೋಗಿ ಕಣ್ಣಿಗೆ ಬರುತ್ತದೆ) ಒಯಿಳ್ ಪಿರಿಪುನಿ ಯೆಂಚ? [A/1441 pp. 385-388]), *"ಸೆಟ್ಟಿ ಮಿತ್ತ್ ಬುದ್ದಿ ಸೈತಿ ಮಿತ್ತ್ ದುಃಖ"*(ಕೆಟ್ಟ ಮೇಲೆ ಬುದ್ಧಿ ಸತ್ತ ಮೇಲೆ ದು:ಖ) ಒಯಿಳ್ ಪಿರಿಪುನಿ ಯೆಂಚ? [A/1441 pp. 385-388]), *"ಕೈಡ್ದ್ ಬೂರ್‌ಂಡ ಪೆಜ್ಜೊಲಿ ಬಾಯಿಡ್ದ್ ಬೂರ್‌ಂಡ ಪೆಜ್ಜರೆ ಬಲ್ಲಿ"* (ಕೈಯಿಂದ ಬಿದ್ದರೆ ಹೆಕ್ಕಬಹುದು, ಬಾಯಿಂದ ಬಿದ್ದರೆ ಆಗದು), *"ಗುಡ್ಡೆಗ್ ಗುಡ್ಡೆ ಅಡ್ಡ ಉಂಡೇ ಉಂಡು."* (ಬೆಟ್ಟಕ್ಕೆ ಬೆಟ್ಟ ಅಡ್ಡ ಇದ್ದೇ ಇದೆ) ಕಪ್ಪೆದ ಕಥೆ[A/1441 pp. 427-428] , *"ಸ್ವರ್ಗೊಡು ಕಷ್ಟ ಇಜ್ಜಿ, ನರಕೊಡು ಸುಖ ಇಜ್ಜಿ"*(ಸ್ವರ್ಗದಲ್ಲಿ ಕಷ್ಟ ಇಲ್ಲ, ನರಕದಲ್ಲಿ ಸುಖ ಇಲ್ಲ) ಸ್ವರ್ಗ ನರಕ [A/2564-1], *"ನುಪ್ಪು ದಂಡ ಭೂಮಿಗ್ ಭಾರ"* (ಅನ್ನ ದಂಡ ಭೂಮಿಗೆ ಭಾರ) ಜೈನೆರ್ ಇರ್ಲ್ ದಾಯೆ ಉಣ್ಬುಜೆರ್ ಇನ್ಪಿ ಕಾರಣದ ಕಥೆ. [A/1441 pp. 56-70]), ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ [A/1441 pp. 435-466] ಟಿಪ್ಪಣಿಯಲ್ಲಿ *"ಗುಡ್ಡೆಗ್ ಮಂಣ್ ತುಂಬಿ ಲೆಕ್ಕ"*(ಬೆಟ್ಟಕ್ಕೆ ಮಣ್ಣು ಹೊತ್ತ ಹಾಗೆ), *"ಕತ್ತೆದ ಪೀಂಕನ್‌ದ ಬೆರ್ತ್‌ಡಿ ಬೀಣೆ ಬಾರಿಸಿ ಲೆಕ್ಕನೆ"* (ಕತ್ತೆಯ ಹಿಂದೆ ವೀಣೆ ಬಾರಿಸಿದಂತೆ), *"ತೆಲ್ಲವುದ ಯಿಷ್ಟಲಾ ಬೊಡ್ಚಿ ಕಾವೆಲಿದ ಕಷ್ಟಲಾ ಬೊಡ್ಚಿ"* (ನೀರುದೋಸೆಯ ಇಷ್ಟವೂ ಬೇಡ, ಕಾವಲಿಯ ಕಷ್ಟವೂ ಬೇಡ), *"ಪಾಯಿದೆದಾಂತಿ ಬ್ಯಾರದಾಯೆ"* (ಲಾಭವಿಲ್ಲದ ವ್ಯಾಪಾರದವ), *"ನಮ ಭಂಗಾರ್ ಪಡಿಕೆ ಆಂಡ ಆಚಾರಿನ್ ದಾಯೆ ದೂರೊಡು?"* (ನಮ್ಮ ಬಂಗಾರವೇ ಕೆಟ್ಟದಾಗಿದ್ದರೆ ಅಕ್ಕಸಾಲಿಗನನ್ನು ದೂರುವುದೇಕೆ) ಕಂಡುಬರುತ್ತವೆ. ಕೃಷ್ಣರಾಯೆರೆ ಕಾಲೊಡು ನಡತಿ ಕಥೆ [A/1441 pp.12-31]ಯಲ್ಲಿ *"ಪೊಣ ತುಂಬುದೆಗೆ ರೋಮ ಬಾದಿ ಯಿಂತೆಗೆ"*(ಹೆಣ ಹೊತ್ತಿದ್ದಾನಂತೆ, ರೋಮ ಭಾರ ಎಂದನಂತೆ), *"ಜನೊ ಮಳೊರ್ ಜಾತ್ರೆ ಮಳೊರ್"* (ಜನ ಮರುಳೋ ಜಾತ್ರೆ ಮರುಳೋ) ಗಾದೆಗಳಿವೆ. ಇವುಗಳು ನಿರೂಪಣೆಯೊಳಗೆ ಮಿಳಿತಗೊಂಡು ಸೊಗಸನ್ನು ಹೆಚ್ಚಿಸಿವೆ. *"ಒರಿ ತುರ್ಕೆ ಒಂಜಿ ಕೋಪೊಗು ಗುವೆಲ್‌ಗ್ ಲಾಗಿದ್ ಮೂಜಿ ಕೋಪೊಗು ಮಿತ್ತ್ ಬರಿಯೆರೆಗ್ ತೀರ್‌ಜಿಗೆ."* (ಶಾಪ ಪಿರಿಪುನಿ ಅತ್ತ್‌ಡ ಆಜ ಪಿರಿಪುನಿ [A/1441 pp. 380-382])...ಇದಕ್ಕೆ ಸಂವಾದಿಯಾದ ಗಾದೆ *"ಒಂಜಿ ಕೋಪೊಗು ಗುವೆಲ್‌ಗ್ ಲಾಗಿಂಡ, ಏಳ್ ಕೋಪೊಗು ಮಿತ್ತ್ ಬರೊಲ್ಯಾ?"* (ಗಾದೆ ಸಂಖ್ಯೆ ೧೨೪–ಸಹಸ್ರಾರ್ಧ ತುಳು ಗಾದೆಳು Five Hundred Tulu Proverbs 1874)] ಕಂಡುಬರುತ್ತದೆ. *"ದೇವೆರೆನ್ ನಂಬಿನಾಯೆ ಶೆಟ್ಟಿನವು ಇಜ್ಜಿ, ಭೂತೊನು ನಂಬಿನಾಯೆ ಬಾಳಿನವು ಇಜ್ಜಿ"* ಎಂಬ ಗಾದೆ 'ಬಡವೆದಿ ಮುಂಡೆನವುಲಾ ಚೆನ್ನನಾಯಿಳೆನ್ ಕೆರಿ ಜೋಕುಳೆನವುಲಾ' ಟಿಪ್ಪಣಿಯಲ್ಲಿದ್ದು ಇದಕ್ಕೆ ಸಂವಾದಿಯಾದ ಗಾದೆ (ಗಾದೆ ಸಂಖ್ಯೆ ೩೨೪–ಸಹಸ್ರಾರ್ಧ ತುಳು ಗಾದೆಳು Five Hundred Tulu Proverbs 1874)] *"ದೇವೆರೆನ್ ನಂಬುನಾಯೆ*

ಶೆಟ್ಟುಜೆ, ಭೂತೊನು ನಂಬುನಾಯೆ ಬಾಳುಜೆ" ಎಂದು ಕಾಣಿಸುತ್ತದೆ. "ಯಿರ್ವೆರೆ ಲಡಯಿಡ್ದ್ ಮೂಜನೆದಾಯಗ್ ಲಾಭ ಯಿನ್ಪಿ ಲೆಕ್ಕ"ಎಂಬ ಗಾದೆಗೆ ಸಂವಾದಿಯಾದ ಗಾದೆ "ಇರ್ವೆರೆ ನ್ಯಾಯ ವೊರಿಯಗ್ ಆಯ" (ಗಾದೆ ಸಂಖ್ಯೆ ೬೨-ಸಹಸ್ರಾರ್ಧ ತುಳು ಗಾದೆಳು Five Hundred Tulu Proverbs 1874) ಎಂಬುದಾಗಿ ಕಾಣಸಿಗುತ್ತದೆ.

ಅಲ್ಪಪ್ರಾಣ ಮಹಾಪ್ರಾಣಗಳೆರಡರ ಬಳಕೆಯೂ ಒಂದೇ ಟಿಪ್ಪಣಿಯಲ್ಲೇ ಕಾಣಸಿಗುತ್ತದೆ. ಅತ್ತೂರು ದೇವಸ್ಥಾನ ದೇವೆರೆ ಕಥೆ. ಅಳ್ತ ದೇವೆರ್ ವಿಷ್ಣುಮೂರ್ತಿ[A/2564-3] ಟಿಪ್ಪಣಿಯೊಂದರಲ್ಲೇ ಮುಕ್ತೇಸ್ವರ ಮತ್ತು ಮುಕ್ತೇಶ್ವರ ಎಂಬ ಎರಡೂ ರೀತಿಯ ಬಳಕೆಯಿದೆ. ಬರವಣಿಗೆಯೊಳಗೆ ಬದಲಾವಣೆಗಳು ಕಾಣಿಸಿಕೊಳ್ಳುವ ಕಾಲ ಅದು. ಇದೇ ಟಿಪ್ಪಣಿಯಲ್ಲಿ 'ಪಣಉ' ಎಂದು ಬರೆದು ಮತ್ತೆ 'ಉ' ವನ್ನು ಹೊಡೆದು 'ವು 'ಎಂದು ಬರೆಯಲಾಗಿದೆ. ಕೆಲವೆಡೆ ಇವೆರಡೂ ರೀತಿಯ ಬಳಕೆಗಳೂ ಇವೆ. ಉದಾಹರಣೆಗೆ 'ವೊಂಚನೆ' ಮತ್ತು 'ವಂಚನೆ' ಎರಡೂ ರೀತಿಯ ಪದಬಳಕೆ ಕಾಣಿಸುತ್ತದೆ. ಅದೇ ರೀತಿ ಇಕಾರವನ್ನೂ ಬಳಸಿರುವುದಿದೆ. 'ಯಿಲ್ಲ್' (ಮನೆ) ಮತ್ತು 'ಇರೆತ' (ಎಲೆಯ) ಎಂಬೆರಡೂ ಬಳಕೆಯಿದೆ. ಅದೇ ರೀತಿ 'ಆ್ಯ' ಮತ್ತು 'ಐ', 'ಒ' ಮತ್ತು 'ವೊ', 'ಎ' ಮತ್ತು 'ಯೆ' ಇವೆರಡೂ ಬಳಕೆಗಳಿವೆ. ವ್ಯೊಪಾವೆರ್ (ಎಳೆಸುತ್ತಾರೆ), ಯೆದ್ರ್‌ಡ್ (ಎದುರಲ್ಲಿ), ಕಟ್ಟ್‌ದ್ (ಕಟ್ಟಿ) ವ್ಯಂಜನಾಂತ ಮತ್ತು ಸ್ವರಾಂತ ಪದಗಳನ್ನು ಬರೆಯುವ ರೀತಿಯೂ ಇಲ್ಲಿ ಕಾಣಿಸುತ್ತದೆ.

ಆಂಗ್ಲ ಭಾಷೆಯ ಪ್ರಭಾವ, ಆಂಗ್ಲಪದಗಳ ಬಳಕೆ ಇನ್ನೂ ತುಳುವಿನ ಬರವಣಿಗೆಯೊಳಗೆ ಬರುತ್ತಿರುವ ಕಾಲಘಟ್ಟ ಅದು. ಆದರೊಂದಿಗೆ ಅನ್ಯಭಾಷಾ ಪದಗಳೂ ಕಾಣಿಸಿಕೊಳ್ಳುತ್ತವೆ. ಚೋರಿ (ಒಯಿಳ್ ಕೊರ್ಪಿನಿ ಅಂದ್‌ಂಡ ದಾನೆ?) ಹಮೇಷ (ಮಾಟ ಮಳ್ಪುನಿ), ಶಿಪಾಯಿ, ಖಿಲಾಶಿ(ಬಪ್ಪನಾಡ್ ದೇವಸ್ಥಾನದ ಮೂಲ ಚರಿತ್ರೆ), ದಸ್ತೈವೇಜಿ, ಕೋರ್ಟು, ಜೈಲು, ಸಿವಿಲ್, ಕ್ರಿಮಿನಲ್, ಮೆಜಿಸ್ಟ್ರೇಟ್ (ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ), ಪೊಲಿಸ್(ಶಕುನ)ನಂತಹಾ ಪದಗಳಿವೆ ಎಂಬುದು ಗಮನಾರ್ಹ.

ಯಾರೋ ಹೇಳಿದುದನ್ನು ದಾಖಲಿಸಿರುವ ಧಾಟಿ ಹಲವೆಡೆ ಕಾಣಿಸುತ್ತದೆ. "ಬುಡ್ಪುಜಗೆ (ಬಿಡುವುದಿಲ್ಲವಂತೆ), ಉಂಡುಗೆ (ಇದೆಯಂತೆ), ಪಾತೆರುಜಿಗೆ (ಮಾತನಾಡುವುದಿಲ್ಲವಂತೆ)" [ಜಕ್ಕಿನಿನ್ ಬುಡುಪಾವುನು ಯೆಂಚ? [A/1441 pp. 393-396], "ಉಂಡಿಜೆರ್‌ಗೆ (ಊಟಮಾಡಲಿಲ್ಲವಂತೆ)" [ಉಂಡಾರ್ ದೇವಸ್ಥಾನದ ಚರಿತ್ರೆ [A/2564-6], "ಯಿಜ್ಜಿಗೆ (ಇಲ್ಲವಂತೆ). ದೀವೊಣೊಡುಗೆ (ಇಡಬೇಕಂತೆ), ಮಳ್ಪೊಡುಗೆ (ಮಾಡಬೇಕಂತೆ), ಆಪುಂಡುಗೆ (ಆಗುತ್ತದೆಯಂತೆ), ಪುಂಣ್ಯಗೆ (ಪುಣ್ಯವಂತೆ)" [ತಿರ್ಪತಿ ಯಾತ್ರೆ [A/1441 pp.397-401], "ಜೋರುಗೆ (ಜೋರಂತೆ)" [ಮಾರಿ ದೇರುನಿ ಅಂದ್‌ಂಡ ದಾನೆ ? [A/1441 pp. 408-410]ಇಂತಹಾ ಹಲವು

ಉದಾಹರಣೆಗಳು ಸಾಮಾನ್ಯವಾಗಿ ಕಾಣಿಸುತ್ತವೆ.

ಹಸ್ತಪ್ರತಿ ಸಂಕಲನದ ವೈಧಾನಿಕತೆ

ಪ್ರಸ್ತುತ ಸಂಕಲನದ ಸಂಪಾದನೆಯನ್ನು ಗ್ರಂಥಸಂಪಾದನಾ ಶಾಸ್ತ್ರದ ವೈಧಾನಿಕತೆಯನ್ನು ಅನುಸರಿಸಿ ಕೈಗೊಳ್ಳಲಾಗಿದೆ. ಇಲ್ಲಿ ಮೂಲ ತುಳುಟಿಪ್ಪಣಿಯನ್ನು ಹಾಗೆಯೇ ನೀಡಲಾಗಿದ್ದು ನಂತರ ಅದರ ಕೆಳಭಾಗದಲ್ಲಿ ಸಾಲಿನ ಕೊನೆಯಲ್ಲಿ ಅದು ಲಭ್ಯವಿರುವ ಮೂಲ ಹಸ್ತಪ್ರತಿಯ ಸಂಖ್ಯೆ, ಪುಟಸಂಖ್ಯೆಯನ್ನು ನೀಡಲಾಗಿದೆ. ಅದರ ಕೆಳಗೆ ಕನ್ನಡದಲ್ಲಿ ಸಂಪಾದಕರ ಪೂರಕ ಟಿಪ್ಪಣಿಯನ್ನು ನೀಡಲಾಗಿದೆ. ಈ ಪೂರಕ ಟಿಪ್ಪಣಿಯು ಸ್ಥೂಲವಾಗಿ ಮೂಲಟಿಪ್ಪಣಿ ಒಳಗೊಳ್ಳುವ ವಿಚಾರಗಳನ್ನು, ಅದಕ್ಕೆ ಪೂರಕ ಮಾಹಿತಿಯನ್ನೂ, ಅದರ ವಿಶಿಷ್ಟತೆಯನ್ನೂ ಒದಗಿಸುತ್ತದೆ. ಉದಾಹರಣೆಗೆ ***[A/1441 pp.374-377]*** *ಎಂಬುದು ಕರ್ನಾಟಕ ತಿಯೊಲಾಜಿಕಲ್ ಕಾಲೇಜ್ ಪತ್ರಾಗಾರದ ಪುಸ್ತಕ ಸಂಖ್ಯೆ ಮತ್ತು ಪುಟ ಸಂಖ್ಯೆಯನ್ನೂ ಸೂಚಿಸುತ್ತದೆ. ಹಾಗೆಯೇ* ***[A/2564-1]*** ಎಂಬುದು ಕರ್ನಾಟಕ ತಿಥಿಯೊಲಾಜಿಕಲ್ ಕಾಲೇಜ್ ಪತ್ರಾಗಾರದ ಕಿರುಪುಸ್ತಕ ಸಂಖ್ಯೆಯನ್ನು ಸೂಚಿಸುತ್ತದೆ, **A/2564** ಒಟ್ಟು ಎಂಟು ಪುಸ್ತಕಗಳನ್ನು ಒಳಗೊಂಡಿದ್ದು ಇದರಲ್ಲಿ ಪುಟಸಂಖ್ಯೆಗಳನ್ನು ನೀಡಲಾಗಿಲ್ಲ. ಆದುದರಿಂದ ಇಲ್ಲಿ ಒಟ್ಟಾಗಿ ಒಂದರಿಂದ ಎಂಟರವರೆಗಿನ ಪುಸ್ತಕ ಸಂಖ್ಯೆಯನ್ನು ***[A/2564-1]*** ರಿಂದ ***[A/2564-8]*** ಎಂದು ಮಾತ್ರ ಸೂಚಿಸಲಾಗಿದೆ. ಮೂಲ ಕಾಗದ ಪ್ರತಿಗಳಲ್ಲಿ ್ತ ಅಡಿಯೊತ್ತು ದೀರ್ಘವಾಗಿರುವುದು, ಅರ್ಕಾವೊತ್ತು ವಿಶಿಷ್ಟವಾಗಿರುವುದು, ್ರ ರಕಾರ ಅಡಿಯೊತ್ತು ಬಂದಾಗ ಇಡೀ ಅಕ್ಷರವನ್ನು ಸುತ್ತುವರೆಯುವುದು, (ಇ)ಈ, ಹ(ಪಾ), ಡ, ಬ, ಭ, ಪೋ, ಕೋ, ಕೌ, ಆ, ಮೊದಲಾದ ಅಕ್ಷರಗಳು ಅಂದಿನ ರೀತಿಯಲ್ಲಿದೆ. 'ಭೂ' ಎಂಬ ಬಳಕೆ 'ಭೂತೊಳೆಗ್ ಕೋಲ ಕಟ್ಟುನಿ ಯೇರ್' *[A/1441pp.466-467]*ನಲ್ಲಿದೆ. ಇವುಗಳನ್ನು ಇಂದಿನ ಸಮಕಾಲೀನ ಬಳಕೆಯಂತೆ ಬಳಸಲಾಗಿದೆ, ್ಟ (ಟ)ಅಡಿ ಒತ್ತು ಮತ್ತು ಉ್ರ (ವೃ) ಇದನ್ನು ಉಚ್ಚರಣೆಯ ಸೌಲಭ್ಯದ ದೃಷ್ಟಿಯಿಂದ ಹಾಗೆಯೇ ಉಳಿಸಿಕೊಂಡಿದೆ.

ಸಂಪಾದನೆಯ ವೇಳೆ ಓದುವಿಕೆಯ ಸೌಲಭ್ಯ ಮತ್ತು ಅರ್ಥಸ್ಪಷ್ಟನೆಗಾಗಿ 'ಕೃಷ್ಣರಾಯರ ಕಾಲೊಡು ನಡೆತಿ ಕಥೆ'ಯಲ್ಲಿ ಮಾತ್ರ ಪ್ಯಾರಾ ಮಾಡಲಾಗಿದೆ, 'ಸರ್‌ಕಾರೊಡು ಮಳ್ಪು ವ್ಯಾಜ್ಯದ ಫಲ' ಮೂಲದಲ್ಲಿ ಸತತವಾಗಿ ಸಾಗುವ ವಾಕ್ಯಗಳಿಂದ ಕೂಡಿದೆ. ಅದನ್ನು ಇಲ್ಲಿ ಸಂಭಾಷಣೆಯ ರೂಪದಲ್ಲಿ ತರಲಾಗಿದೆ. ಹಾಗೆಯೇ ಇದರಲ್ಲಿ ಕೆಲವೆಡೆ ಮಾತ್ರ ಅರ್ಥ ಸ್ಪಷ್ಟನೆಗಾಗಿ ಪೂರ್ಣವಿರಾಮ, ಲೇಖನಚಿಹ್ನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಅಳವಡಿಸಲಾಗಿದೆ. ಆದರೆ ಮೂಲಕ್ಕೆ ಭಂಗ ಬಾರದಂತೆ ಎಚ್ಚರ ವಹಿಸಲಾಗಿದೆ. ಇಂದು ಸ್ಖಾಲಿತ್ಯವೆನಿಸಬಹುದಾದ್ದನ್ನು ಅಂದಿನ ಬರವಣಿಗೆಯ ಮಾದರಿಯನ್ನ ಲಕ್ಷಿಸಿ ಇಲ್ಲಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಹ,ಪ,ಭ ಅಕ್ಷರಗಳನ್ನು ಇಂದಿನ ಬಳಕೆಯಂತೆ ಮುದ್ರಿಸಲಾಗಿದೆ. 'ಜೈನೆರ್ ಇಲ್ ದಾಯೆ ಉಣ್ಬುಜೆರ್ ಇನ್ಪಿ ಕಾರಣದ ಕಥೆ' ಟಿಪ್ಪಣಿ[A/

1441pp.56-70]ಯಲ್ಲಿ ಮಾತ್ರ 'ಇಂಬೆ ಒಯಿನೆನಾ ಅಂದಳ್' ಎಂಬ ವಾಕ್ಯದಲ್ಲಿ ಅರ್ಥಸ್ಪಷ್ಟನೆಯ ದೃಷ್ಟಿಯಿಂದ 'ಜಯಿನೆನಾ' ಎಂದು ಸರಿಪಡಿಸಲಾಗಿದೆ. ಉಳಿದಂತೆ ಗಣನೀಯ ಬದಲಾವಣೆ ಮಾಡಿಲ್ಲ.

ಮುದ್ರಣ ಚಿಹ್ನೆಗಳ ಗೊಂದಲ ಇಲ್ಲಿನ ಟಿಪ್ಪಣಿಗಳಲ್ಲಿ ಕಾಣಿಸುತ್ತದೆ. ಇದು ಸಮಕಾಲೀನ ಸಂದರ್ಭದ ಸಹಜ ಪ್ರಕ್ರಿಯೆಯಾಗಿದೆ. ಮುದ್ರಣ ಚಿಹ್ನೆಗಳ ಬಳಕೆ ಕಾಗದದ ಬರವಣಿಗೆಯಲ್ಲಿ ಇನ್ನೂ ವ್ಯಾಪಕವಾಗಿ ಬರತೊಡಗಿರಲಿಲ್ಲ ಎಂಬುದು ಗಮನಾರ್ಹ. ಅದೂ ಪೂರಕವಾಗಿ ಕಾಲ ನಿರ್ಣಯಕ್ಕೆ ಸಹಕಾರಿಯಾಗಿದೆ. ತುಳು ಭಾಷೆ ಕನ್ನಡ ಲಿಪಿಯನ್ನು ಬಳಕೆ ಮಾಡಿದ ಒಂದು ಮುಖ್ಯವಾದ ಕಾಲಘಟ್ಟ ಅದು. ಹಾಗೆಯೇ ಮುದ್ರಣ ಮಾಧ್ಯಮ ಬಂದು ಬರವಣಿಗೆಗಳ ಬೆಳವಣಿಗೆ, ಸಾಹಿತ್ಯ ಬಂದ ಕಾಲ. ಇಲ್ಲಿ ಬರವಣಿಗೆಯ ಭಾಷೆ ಮಾತ್ರವಲ್ಲದೆ ಬರೆವ ಶೈಲಿಯೂ ಬದಲಾಗತೊಡಗಿತು. ಮುದ್ರಣ ಚಿಹ್ನೆಗಳು ಬಂದವು. (:)ಕೋಲನ್, (;) ಸೆಮಿಕೋಲನ್, (" ") ಇನ್ವರ್ಟೆಡ್ ಕೊಮಾ, (' ') ಸಿಂಗಲ್ ಇನ್ವರ್ಟೆಡ್ ಕೊಮಾ, (,) ಕೊಮಾ, (.) ಫುಲ್ ಸ್ಟಾಪ್, (–) ಡ್ಯಾಷ್, [( )] ಬ್ರಾಕೆಟ್, (!) ಎಕ್ಸ್‌ಕ್ಲಾಮೇಟರಿ, (?) ಕ್ವಶ್ಚನ್ ಮಾರ್ಕ್, (^) ಅಪ್ಪರ್ ಮಾರ್ಕ್ ಇಂತವು ನಿಧಾನವಾಗಿ ಬರಹದಲ್ಲಿ ಬರತೊಡಗಿತು. ಈ ಟಿಪ್ಪಣಿಗಳಲ್ಲಿ ಅಂದಿನ ಬಳಕೆಯ ಈ ತೆರನಾದ ಗೊಂದಲಗಳು ಸ್ಪಷ್ಟವಾಗಿ ಕಾಣಿಸುತ್ತವೆ. ಉದಾಹರಣೆಗೆ ಡಬಲ್ ಇನ್ವರ್ಟೆಡ್ ಪ್ರಾರಂಭವಾಗುತ್ತದೆ ಆದರೆ ಅದಕ್ಕೆ ಕೊನೆ ಇಲ್ಲ. ಇದು ಬಪ್ಪನಾಡ್ ಉಳ್ಳಾಳ್ದಿನ ಬೊಕ್ಕ, ಬಿತ್ತ್‌ಲ್‌ದ ದೈಯೊಂಗುಳೆನವು ಮೂಲ ಚರಿತ್ರೆ. [A/2564-6], ಬಪ್ಪನಾಡ್ ದೇವಸ್ಥಾನದ ಮೂಲ ಚರಿತ್ರೆ. [A/2564-6], ಉಂಡಾರ್ ದೇವಸ್ಥಾನದ ಚರಿತ್ರೆ [A/2564-6]ಇವೇ ಮೊದಲಾದ ಬರಹಗಳಲ್ಲಿ ಇದೆ. ಹಾಗೆಯೇ ಇಲ್ಲಿ ಅರ್ಥವ್ಯಾಪ್ತಿ ವಿಸ್ತರಣೆಯೂ ಈ ಚಿಹ್ನೆಯಿಂದ ಆಗುವುದನ್ನು ನೋಡಬಹುದು. ಉದಾಹರಣೆಗೆ ಬಪ್ಪನಾಡ್ ದೇವಸ್ಥಾನದ ಮೂಲ ಚರಿತ್ರೆ. [A/2564-6]ಟಿಪ್ಪಣಿಯಲ್ಲಿ **"ದಾನೆಂದ್‌ಂಡಾ"** ಎಂಬುದು ಇಂತಹಾ ಕಾರ್ಯ ನಿರ್ವಹಿಸುತ್ತದೆ. ಪ್ಯಾರಾಗ್ರಾಫ್ ಮಾದರಿಗಳೂ ಅಲ್ಲಲ್ಲಿ ಕಾಣಿಸುತ್ತದೆ. ವಿಷಯದ ಶೀರ್ಷಿಕೆಯನ್ನು ಸ್ವಲ್ಪ ದೊಡ್ಡ ಅಕ್ಷರದಲ್ಲಿ ಬರೆಯುವುದು, ಕೆಲವು ಶೀರ್ಷಿಕೆಗಳಿಗೆ ಅಡಿಗೆರೆ ಹಾಕುವುದು ನೂಲ ಪುಣ್ಣಮೆದ ಕ್ರಮ ದಾನೆಂದ್‌ಂಡ? [A/2564-3], ಸೈತಿನಾಕುಳೆಗ್ ಮುಳ್ಪು ಬೊಜ್ಜ[A/2564-1] ಇತ್ಯಾದಿಗಳಲ್ಲಿ ಕಾಣುತ್ತದೆ. ಕೆಲವು ಕಡೆ ಪ್ರತ್ಯೇಕ ವಿಷಯ ಪ್ರತ್ಯೇಕ ಪುಟದಲ್ಲೇ ಬರೆಯಲಾಗಿದೆ, ಪುಟದ ಕೊನೆಗೆ ಖಾಲಿ ಸ್ಥಳವನ್ನು ಹಾಗೆಯೇ ಬಿಟ್ಟು ಮುಂದುವರೆಯಲಾಗಿದೆ, 'ಮೂಲಿಗೆ' ಟಿಪ್ಪಣಿಯಂತೆ ಕೆಲವೆಡೆ ಹಾಗೆಯೇ ಮುಂದುವರೆಯಲಾಗಿದೆ. ರೋಮನ್ ಅಂಕೆಯನ್ನು ಬಳಸಿದ್ದಿದೆ. ಇದು ಶೀರ್ಷಿಕೆಯಲ್ಲೂ ಕಾಣಿಸಿದೆ, ವಿಷಯದ ಮಧ್ಯೆಯೂ ಕಾಣಿಸಿದೆ. ಅದೇ ರೀತಿ ಇಂಗ್ಲಿಶ್ ಅಂಕೆಯನ್ನೂ ಕನ್ನಡ ಅಂಕೆಯನ್ನೂ ಬಳಸಲಾಗಿರುವುದು ವಿಶೇಷ. ಇವೆರಡೂ ಬಳಕೆ ಬೇರೆ ಬೇರೆ ಕಡೆಗಳಲ್ಲಿ ಬರುವುದು ಮಾತ್ರವಲ್ಲದೆ ನೂಲ ಪುಣ್ಣಮೆದ ಕ್ರಮ

ದಾನೆಂದ್‌ಂಡ? [A/2564-3], ಜೌತಿದ ಕ್ರಮ [A/2564-4] ಇಂತಹಾ ಟಿಪ್ಪಣಿಗಳಲ್ಲಿ ಒಂದೇ ನಿರೂಪಣೆಯಲ್ಲಿಯೇ ಬರುವುದಿದೆ. ಜೊತೆಗೆ ಅಕ್ಷರರೂಪದಲ್ಲೂ ಅಂಕೆಗಳನ್ನು ಸೂಚಿಸುವುದಿದೆ. ಹಾಗೆಯೇ ಅರ್ಥ ಮತ್ತು ವಿವರಣೆಯನ್ನು ಬ್ರಾಕೆಟ್‌ನ ಒಳಗಡೆ ಕೊಡುವುದಿದೆ. ಇಲ್ಲಿ ಒಂದು ವಿಷಯವನ್ನು ಹೇಳಿಕೊಂಡೇ ಅದರ ಒಳಗೆ ಬರುವ ಪದಗಳ ಉದಾಹರಣೆ ಕೊಡಲಾಗಿದೆ. ಅದು ಒಂದು ಸ್ಪಷ್ಟ ಮಾಡುವ ಕ್ರಮ. ಇದಕ್ಕೆ 'ದಾಯೆ ಪಣ್ಪಿನಿಂದ್‌ಂಡ:' 'ಯೆಂಚಂದ್‌ಂಡ' 'ಅಂದ್‌ಂಡ' ಎಂಬ ಪದಗಳು ಸಹಾಯಕವಾಗುತ್ತವೆ. ಇಲ್ಲಿ ಬಳಕೆಯಾದ ಲಿಪಿಯನ್ನು ಸಮಕಾಲೀನವಾದ ಹಲವು ಬರವಣಿಗೆಗಳಲ್ಲಿ ಕಾಣಬಹುದು. ಪತ್ರಾಗಾರದಲ್ಲಿಯೂ ಈ ಬಗೆಯ ಹಲವು ಬರವಣಿಗೆಗಳು ಲಭ್ಯವಿದೆ. ತುಳುವಿನಲ್ಲಿ ನಿರೂಪಣೆಯನ್ನು ನೀಡುವ ಪ್ರಯತ್ನವಿದಾಗಿರುವುದು ಅನನ್ಯತೆ.

